ಮಂಗಳವಾರ, ಮೇ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 129 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
‘ವಿಶ್ವಾಸ’ಕ್ಕೆ ಪದಕೋಶದಲ್ಲಿ ಭರವಸೆ, ನಂಬಿಕೆ, ನಿರೀಕ್ಷೆ, ಹಾರೈಕೆ ಎಂಬ ಅರ್ಥಗಳಿವೆ. ಧಾರ್ಮಿಕ ಗ್ರಂಥಗಳಲ್ಲೂ ಯಾರು ವಿಶ್ವಾಸಿಗರೋ ಅವರು ವಿಜಯಿಗಳು ಎನ್ನಲಾಗಿದೆ.



ಆಳ-ಅಗಲ ಜಲಾಂತರ್ಗಾಮಿ ಯೋಜನೆಗೆ ವಿಘ್ನ
ಎಸ್ಸೆಸ್ಸೆಲ್ಸಿ: 19 ರಂದು ಫಲಿತಾಂಶ ಸಾಧ್ಯತೆ 5
ಹಣ ಪಡೆದೂ ನೌಕರಿ ಕೊಡಿಸದ ವೈಜನಾಥ! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,470	16,302	₹53,180 (ಬೆಂಗಳೂರು)	₹63,200 (ಬೆಂಗಳೂರು)	77.44

ಐಪಿಸಿ 124ಎ ಸೆಕ್ಷನ್ ಕುರಿತು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ ಕೇಂದ್ರ ಸರ್ಕಾರ

‘ದೇಶದ್ರೋಹ ಕಾನೂನು’ ಮರುವಿಮರ್ಶೆ

ನವದೆಹಲಿ (ಪಿಟಿಐ): ಭಾರತೀಯ ದಂಡ ಸಂಹಿತೆಯ (ಐಪಿಸಿ) 124ಎ ಸೆಕ್ಷನ್ (‘ದೇಶದ್ರೋಹ ಕಾನೂನು’) ಅನ್ನು ‘ಅರ್ಹ ವೇದಿಕೆ’ಯಿಂದ ಮರು-ಪರಿಶೀಲನೆಗೆ ಒಳಪಡಿಸಲು ನಿರ್ಧರಿಸಲಾಗಿದೆ. ಹಾಗಾಗಿ, ಈ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲನೆಗೆ ಒಳಪಡಿಸಲು ಸಮಯ ವ್ಯಯಿಸಬೇಡಿ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರವು ಸೋಮವಾರ ಮನವಿ ಮಾಡಿದೆ.



ಈ ಕಾನೂನಿಗೆ ಸಂಬಂಧಿಸಿದಂತೆ ವ್ಯಕ್ತವಾಗಿರುವ ವಿವಿಧ ಅಭಿಪ್ರಾಯಗಳು ಗಮನದಲ್ಲಿ ಇವೆ. ನಾಗರಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಕಳಕಳಿಯ ಅರಿವೂ ಇದೆ. ಅದೇ ಹೊತ್ತಿಗೆ, ‘ಈ ಮಹಾನ್ ದೇಶದ ಸಾರ್ವಭೌಮತೆ ಮತ್ತು ಏಕತೆಯನ್ನು ರಕ್ಷಿಸುವ ಬದ್ಧತೆಯೂ ಇದೆ’ ಎಂದು ಕೇಂದ್ರ ಗೃಹ ಸಚಿವಾಲಯವು ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ವಿವರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ‘ವಸಾಹತುಶಾಹಿ ಹೊರೆ’ಯನ್ನು ಕಳಚಿಕೊಳ್ಳುವ ನಿಲುವು ಹೊಂದಿದ್ದಾರೆ. ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯದ ರಕ್ಷಣೆಯ ಪರವಾಗಿ ಪ್ರಧಾನಿ ಇದ್ದಾರೆ. ಹಾಗಾಗಿಯೇ ಅಪ್ರಸ್ತುತ ಎನಿಸಿದ್ದ 1,500ಕ್ಕೂ ಹೆಚ್ಚು ಕಾನೂನುಗಳು ಮತ್ತು 25 ಸಾವಿರಕ್ಕೂ ಹೆಚ್ಚು ನಿಯಮಗಳನ್ನು ರದ್ದುಪಡಿಸಲಾಗಿದೆ. ಉಪಯುಕ್ತತೆ ಕಳೆದುಕೊಂಡಿರುವ ಕಾನೂನುಗಳು ಮತ್ತು ಪದ್ಧತಿಗಳನ್ನು ರದ್ದುಪಡಿಸುವ ಮೂಲಕ ವಸಾಹತುಶಾಹಿ ಹೊರೆ ಕಳಚಿಕೊಳ್ಳಲು ಒಂದು ದೇಶವಾಗಿ ಭಾರತವು ಶ್ರಮವಹಿಸಿ ಕೆಲಸ ಮಾಡಬೇಕಿದೆ ಎಂದು ಪ್ರಧಾನಿ ಹೇಳಿದ್ದಾಗಿ ಪ್ರಮಾಣ-ಪತ್ರದಲ್ಲಿ ವಿವರಿಸಲಾಗಿದೆ.

ಕಾನೂನು ತಜ್ಞರು, ವಿದ್ವಾಂಸರು, ಚಿಂತಕರು ಮತ್ತು ಜನರು ಈ ಕಾಯ್ದೆಯ ಬಗ್ಗೆ ವ್ಯಕ್ತಪಡಿಸಿದ ವಿವಿಧ ನಿಲುವುಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮೃತ್ಯುಂಜಯ ಕುಮಾರ್ ನಾರಾಯಣ್ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳಿದ್ದಾರೆ.

ಹಲವು ಸರ್ಕಾರಗಳು ರಾಜಕೀಯ ವೈರತ್ವ ಸಾಧನೆಗಾಗಿ ‘ದೇಶದ್ರೋಹ’ ಕಾನೂನನ್ನು ದುರ್ಬಳಕೆ ಮಾಡಿಕೊಂಡಿವೆ ಎಂಬ ವಿಚಾರವು ಹಲವು ವರ್ಷಗಳಿಂದ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಹಾಗಾಗಿಯೇ, ಈ ಕಾನೂನನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರನ್ನು ಶಿಕ್ಷಿಸುವುದಕ್ಕಾಗಿ ವಸಾಹತುಶಾಹಿ ಯುಗದಲ್ಲಿ ಈ ಕಾನೂನು ಬಳಕೆಯಾಗಿತ್ತು. ಸ್ವಾತಂತ್ರ್ಯ ಬಂದು 75 ವರ್ಷದ ನಂತರವೂ ಈ ಕಾನೂನಿನ ಅಗತ್ಯ ಇದೆಯೇ ಎಂಬ ಪ್ರಶ್ನೆಯೂ ಇದೆ.

ಎರಡು ದಿನ ಹಿಂದೆ ಸಮರ್ಥನೆ

ಸುಪ್ರೀಂ ಕೋರ್ಟ್‌ಗೆ ಶನಿವಾರ ಸಲ್ಲಿಸಲಾಗಿದ್ದ ಪ್ರಮಾಣಪತ್ರವೊಂದರಲ್ಲಿ ಈ ಕಾನೂನನ್ನು ಕೇಂದ್ರವು ಸಮರ್ಥಿಸಿಕೊಂಡಿತ್ತು. ಸುಪ್ರೀಂ ಕೋರ್ಟ್ 1962ರಲ್ಲಿ ನೀಡಿದ್ದ ತೀರ್ಪೊಂದು (ಕೇದಾರನಾಥ ಮತ್ತು ಬಿಹಾರ ಸರ್ಕಾರದ ಪ್ರಕರಣ) ಈ ಕಾನೂನನ್ನು ಎತ್ತಿ ಹಿಡಿದಿತ್ತು. ನಂತರದ ಸುಮಾರು ಆರು ದಶಕಗಳಲ್ಲಿ ಕಾಲದ ಪರೀಕ್ಷೆಯಲ್ಲಿ ಈ ಕಾನೂನು ಗೆದ್ದಿದೆ. ದುರ್ಬಳಕೆ ಆಗುತ್ತಿದೆ ಎಂಬುದು ಕಾನೂನಿನ ಮರುಪರಿಶೀಲನೆಗೆ ಸಮರ್ಥನೆ ಆಗದು ಎಂದು ಈ ಪ್ರಮಾಣಪತ್ರದಲ್ಲಿ ಹೇಳಲಾಗಿತ್ತು.

‘ಕಾನೂನು ದುರ್ಬಳಕೆ ಆಗುತ್ತಿದೆ ಎಂಬ ಕಾರಣ ಕೊಟ್ಟು ಸಾಂವಿಧಾನಿಕ ಪೀಠದ ತೀರ್ಪನ್ನು ಮರುಪರಿಶೀಲನೆ ನಡೆಸಲಾಗದು. ಆಯಾಯ ಪ್ರಕರಣದಲ್ಲಿ ಹೇಗೆ ದುರ್ಬಳಕೆ ಆಗಿದೆ ಎಂಬುದನ್ನು ಕಂಡುಕೊಂಡು ಅದನ್ನು ತಡೆಯುವುದೇ ನಿಜವಾದ ಪರಿಹಾರ’ ಎಂದೂ ಈ ಪ್ರಮಾಣಪತ್ರದಲ್ಲಿ ಹೇಳಲಾಗಿತ್ತು.

ಕಾನೂನಿನಲ್ಲಿ ಸೂಚಿತ ಉದ್ದೇಶಗಳಿಗಲ್ಲದೆ ಬೇರೆ ಉದ್ದೇಶಗಳಿಗಾಗಿ ‘ದೇಶದ್ರೋಹ’ ಕಾನೂನಿನ ಬಳಕೆ ಮತ್ತು ದುರ್ಬಳಕೆಯ ಬಗ್ಗೆ ಕಳವಳ ವ್ಯಕ್ತವಾಗಿದೆ ಎಂದು ಸೋಮವಾರ ಸಲ್ಲಿಕೆಯಾದ ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ರದ್ದತಿಯ ಸಲಹೆ ಕೊಟ್ಟಿದ್ದ ಕಾನೂನು ಆಯೋಗ

ಭಾರತೀಯ ದಂಡ ಸಂಹಿತೆಯ 124ಎ ಸೆಕ್ಷನ್ ಬಗ್ಗೆ ಮರುಚಿಂತನೆ ನಡೆಯಬೇಕು ಅಥವಾ ಅದನ್ನು ರದ್ದುಪಡಿಸಬೇಕು ಎಂದು ಕಾನೂನು ಆಯೋಗವು 2018ರಲ್ಲಿ ಹೇಳಿತ್ತು. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿಯೊಂದೂ ಬೇಜವಾಬ್ದಾರಿ ಬಳಕೆಯನ್ನು ದೇಶದ್ರೋಹ ಎಂದು ಪರಿಗಣಿಸಲಾಗದು ಎಂದು ಆಯೋಗವು ಹೇಳಿತ್ತು.

‘ಸಕಾರಾತ್ಮಕ ಟೀಕೆಗೆ ದೇಶವು ಸಿದ್ಧವಿಲ್ಲ ಎಂದಾದರೆ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ದಿನಗಳಿಗೆ ಯಾವ ವ್ಯತ್ಯಾಸವೂ ಇಲ್ಲದಂತಾಗುತ್ತದೆ’. ಸರ್ಕಾರದ ನಡವಳಿಕೆಯ ಬಗ್ಗೆ ಮೂಡುವ ಹತಾಶೆಯ ಅಭಿವ್ಯಕ್ತಿಯನ್ನು ದೇಶದ್ರೋಹ ಎನ್ನಲಾಗದು ಎಂದೂ ಆಯೋಗವು ಹೇಳಿತ್ತು.

124ಎ ಸೆಕ್ಷನ್ ಏನು ಹೇಳುತ್ತದೆ?

ಕಾನೂನುಬದ್ಧವಾಗಿ ಸ್ಥಾಪಿತವಾದ ಸರ್ಕಾರದ ವಿರುದ್ಧ ಮೌಖಿಕ ಅಥವಾ ಲಿಖಿತ, ಅಥವಾ ಸಂಕೇತಗಳು, ಅಥವಾ ದೃಶ್ಯಾಭಿ-ವ್ಯಕ್ತಿ, ಅಥವಾ ಬೇರೆ ರೀತಿಯಲ್ಲಿ ದ್ವೇಷ ಹುಟ್ಟಿಸಲು ಯತ್ನಿಸಿದರೆ ಅಥವಾ ನಿಂದಿಸಿದರೆ, ಅಥವಾ ಸರ್ಕಾರದ ಬಗ್ಗೆ ಅಸಮಾಧಾನ ಮೂಡಿಸಲು ಯತ್ನಿಸಿದರೆ ಅಥವಾ ಕುಮ್ಮಕ್ಕು ನೀಡಿದರೆ ಜೀವಾವಧಿ ಶಿಕ್ಷೆ ವಿಧಿಸಬಹುದು. ಅದಕ್ಕೆ ದಂಡವನ್ನೂ ಸೇರಿಸಬಹುದು. ಅಥವಾ ಮೂರು ವರ್ಷವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಬಹುದು ಎಂದು 124ಎ ಸೆಕ್ಷನ್ ಹೇಳುತ್ತದೆ.

ಆಜಾನ್‌ಗೆ ಪ್ರತಿಯಾಗಿ ಭಜನೆ

ಶ್ರೀರಾಮಸೇನೆಯಿಂದ ಪ್ರತಿಭಟನೆ: ಕಾರ್ಯಕರ್ತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಸೀದಿಗಳಲ್ಲಿ ಆಜಾನ್ ಬಳಸುವುದಕ್ಕೆ ಪ್ರತಿಯಾಗಿ ಪ್ರತಿಭಟನಾ ಕ್ರಮವಾಗಿ ಸೋಮವಾರ ಶ್ರೀರಾಮಸೇನೆಯ ಕಾರ್ಯಕರ್ತರು ರಾಜ್ಯದ ವಿವಿಧೆಡೆ ದೇವಸ್ಥಾನಗಳಲ್ಲಿ ಧ್ವನಿವರ್ಧಕವನ್ನು ಬಳಸಿ ಹನುಮಾನ್ ಚಾಲೀಸಾ, ಭಜನೆ ಪ್ರಸಾರ ಮಾಡಿದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಮಸೀದಿಗಳ ಬಳಿ ಮುಂಜಾಗರೂಕತಾ ಕ್ರಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋ-ಜಿಸಲಾಗಿತ್ತು. ಹನುಮಾನ್ ಚಾಲೀಸಾ, ಭಜನೆ ಪ್ರಸಾರ ಮಾಡುವ ಕಾರ್ಯಕ್ರಮ ಬಹುತೇಕ ಶಾಂತಿಯುತವಾಗಿತ್ತು

ಬೆಂಗಳೂರು ನಗರ, ಕಲಬುರಗಿ-ಯಲ್ಲಿ ಭಜನೆ ಮಾಡಲು ಮುಂದಾಗಿದ್ದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ರಾಜಧಾನಿಯಲ್ಲಿ ಕಾರ್ಯಕರ್ತರು ಒಂದು ಹಂತದಲ್ಲಿ ಪೊಲೀಸರೊಂದಿಗೆ ವಾಗ್ವಾದ, ನೂಕಾಟ ನಡೆಸಿದರು. ಇದರಿಂದ ಕೆಲ ಕಾಲ ಗೊಂದಲದ ಸ್ಥಿತಿ ಉಂಟಾಗಿತ್ತು.

ಕಲಬುರಗಿಯಲ್ಲಿ ಆಜಾನ್‌ಗೆ ಶ್ರೀರಾಮಸೇನೆ ಸಂಘಟನೆಯವರು ಅಡ್ಡಿ ಮಾಡದಿರಲಿ ಎಂದು ಸೂಪರ್ ಮಾರ್ಕೆಟ್ ಬಳಿಯಿರುವ ಮಸೀದಿಗೆ ದಲಿತ ಸೇನೆ ಕಾರ್ಯಕರ್ತರು ಕಾವಲು ಇದ್ದು, ಗಮನ ಸೆಳೆದರು. ಇಲ್ಲಿ ಪೊಲೀಸರೂ ಸಾಕಷ್ಟು ಸಂಖ್ಯೆಯಲ್ಲಿ ಜಮಾಯಿಸಿದ್ದರು.

ದೇವಸ್ಥಾನಗಳಲ್ಲಿ ಭಜನೆ, ಹನುಮಾನ್ ಚಾಲೀಸಾ ಪಠಿಸುವಂತೆ ಶ್ರೀರಾಮಸೇನೆ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಕರೆ ನೀಡಿದ್ದ ಹಿನ್ನೆಲೆಯಲ್ಲಿ ಸಂಘಟನೆಯ ಕಾರ್ಯಕರ್ತರು ಈ ಪ್ರತಿ-ಭಟನೆಯನ್ನು ನಡೆಸಿದರು.

ಆಜಾನ್ ವಿರೋಧಿಸಿ ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ಸುಪ್ರಭಾತ, ಭಜನೆ ನಡೆಸುವುದಾಗಿ ಹೇಳಿದ್ದ ಶ್ರೀರಾಮಸೇನೆ ಮುಖಂಡ ಪ್ರಮೋದ್ ಮುತಾಲಿಕ್, ಕೊನೇ ಕ್ಷಣದಲ್ಲಿ ಸ್ಥಳ ಬದಲಾಯಿಸಿ, ಮೈಸೂರಿನ ಶಿವರಾಂಪೇಟೆಯ ಆಂಜನೇಯ ಸ್ವಾಮಿ ದೇಗುಲದಲ್ಲಿ ಸೋಮವಾರ ನಸುಕಿನ 5 ಗಂಟೆಗೆ ಸುಪ್ರಭಾತ, ಓಂಕಾರ ಮೊಳಗಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ಮೈಸೂರಿನಲ್ಲಿ ಇಂದು ಆಂದೋಲನ ಆರಂಭವಾಗಿದೆ. ರಾಜ್ಯ ಸರ್ಕಾರ ಹಾಗೂ ಮುಸ್ಲಿಂ ಸಮುದಾಯಕ್ಕೆ ಈ ಮೂಲಕ ಎಚ್ಚರಿಕೆ ನೀಡುವಲ್ಲಿ ನೂರರಷ್ಟು ಯಶಸ್ವಿಯಾಗಿದ್ದೇವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಮಂಡ್ಯ, ಚಾಮರಾಜನಗರ, ಕೊಡಗಿನಲ್ಲಿ ಈ ಪ್ರತಿಭಟನೆ ನಡೆಯಲಿಲ್ಲ. ಉಳಿದಂತೆ ಕಲಬುರಗಿ, ಮಂಗಳೂರು, ಚಿಕ್ಕಮಗಳೂರು, ತುಮಕೂರು, ಬೆಳಗಾವಿ, ಧಾರವಾಡ, ವಿಜಯಪುರ ಸೇರಿ ಬಹುತೇಕ ಜಿಲ್ಲೆಗಳಲ್ಲಿ ದೇಗುಲಗಳಲ್ಲಿ ಹನುಮಾನ್ ಚಾಲೀಸಾ, ಭಜನೆ ಮೊಳಗಿತು.

ಧ್ವನಿವರ್ಧಕ ಬಳಕೆ: ಹೊಸ ಸುತ್ತೋಲೆ

ಬೆಂಗಳೂರು: ಸುಪ್ರೀಂಕೋರ್ಟ್ ಆದೇಶದಂತೆ ರಾಜ್ಯದಲ್ಲಿ ಧ್ವನಿವರ್ಧಕಗಳ ಬಳಕೆ ನಿಯಂತ್ರಿಸಲು ಹೊಸ ಸುತ್ತೋಲೆಯೊಂದನ್ನು ಹೊರಡಿಸಲು ಸರ್ಕಾರ ನಿರ್ಧರಿಸಿದೆ. ಒಂದೆರಡು ದಿನಗಳಲ್ಲಿ ಸುತ್ತೋಲೆ ಹೊರಬೀಳಲಿದ್ದು, ಆ ಬಳಿಕ ನಿಗದಿತ ಮಿತಿಗಿಂತ ಹೆಚ್ಚಿನ ಧ್ವನಿ ಹೊರಡಿಸುವ ಧ್ವನಿವರ್ಧಕಗಳನ್ನು ತೆರವುಗೊಳಿಸುವ ಸಾಧ್ಯತೆ ಇದೆ. ಮಸೀದಿಗಳಲ್ಲಿ ಆಜಾನ್ ಕೂಗುವ ಧ್ವನಿವರ್ಧಕಗಳನ್ನು ತೆರವು ಮಾಡಬೇಕು ಎಂದು ಆಗ್ರಹಿಸಿ ಶ್ರೀರಾಮ ಸೇನೆ ಸೇರಿದಂತೆ ಹಿಂದುತ್ವ ಪರ ಸಂಘಟನೆಗಳು ಅಭಿಯಾನ ನಡೆಸಲು ಮುಂದಾಗಿವೆ. ಆಜಾನ್‌ಗೆ ಪ್ರತಿಯಾಗಿ ದೇವಸ್ಥಾನಗಳಲ್ಲಿ ಧ್ವನಿವರ್ಧಕಗಳ ಮೂಲಕ ಹನುಮಾನ್ ಚಾಲೀಸಾ ಪಠಣವೂ ಕೆಲವೆಡೆ ಆರಂಭವಾಗಿದೆ.

4ನೇ ಪುಟ ನೋಡಿ

ದಾಖಲೆಯ ಮಟ್ಟಕ್ಕೆ ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಸೋಮವಾರದ ವಹಿವಾಟಿನಲ್ಲಿ 54 ಪೈಸೆ ಕುಸಿದ ರೂಪಾಯಿ ಮೌಲ್ಯವು, ಒಂದು ಡಾಲರ್‌ಗೆ 77.44ರಂತೆ ವಿನಿಮಯ ಆಗಿದೆ. ಅಮೆರಿಕದ ಡಾಲರ್ ಬಲಗೊಳ್ಳುತ್ತಿರುವುದು ಹಾಗೂ ದೇಶದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಬಂಡವಾಳ ಹೊರಹೋಗುತ್ತಿರುವುದು ರೂಪಾಯಿ ಮೌಲ್ಯ ಇಳಿಕೆಗೆ ಮುಖ್ಯ ಕಾರಣಗಳು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ ಅಮೆರಿಕದ ಡಾಲರ್ ಎದುರು ರೂಪಾಯಿಯು ವಹಿವಾಟಿನ ಒಂದು ಹಂತದಲ್ಲಿ 77.52ರ ಮಟ್ಟವನ್ನು ಕೂಡ ತಲುಪಿತ್ತು. ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿಯು ಅಮೆರಿಕದ ಡಾಲರ್ ಎದುರು 55 ಪೈಸೆ ದುರ್ಬಲಗೊಂಡಿತ್ತು. ಎರಡು ದಿನಗಳ ವಹಿವಾಟಿನಲ್ಲಿ ರೂಪಾಯಿಯು 109 ಪೈಸೆಯಷ್ಟು ಮೌಲ್ಯ ಕಳೆದುಕೊಂಡಿದೆ.

‘ಹಣದುಬ್ಬರವನ್ನು ನಿಯಂತ್ರಿಸಲು ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಹೆಚ್ಚಿಸಬೇಕಾದ ಅಗತ್ಯ ಎದುರಾಗಬಹುದು ಎಂಬ ಲೆಕ್ಕಾಚಾರದಲ್ಲಿ ಹೂಡಿಕೆದಾರರು ರಿಸ್ಕ್ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ’ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

10ನೇ ಪುಟ ನೋಡಿ

ಶ್ರೀಲಂಕಾ ಪ್ರಧಾನಿ ಮಹಿಂದಾ ರಾಜಪಕ್ಸ ರಾಜೀನಾಮೆ

ಕೊಲಂಬೊ (ಪಿಟಿಐ/ಎಎಫ್‌ಪಿ): ತೀವ್ರ ಆರ್ಥಿಕ ಬಿಕ್ಕಟ್ಟಿನ ಕಾರಣ ಶ್ರೀಲಂಕಾದಲ್ಲಿ ಕಳೆದೊಂದು ತಿಂಗಳಿನಿಂದ ನಡೆದಿರುವ ಪ್ರತಿಭಟನೆಗಳ ನಡುವೆಯೇ, ಪ್ರಧಾನಿ ಮಹಿಂದಾ ರಾಜಪಕ್ಸ ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ವೇಳೆ ನಡೆದ ಹಿಂಸಾಚಾರದಲ್ಲಿ ಸಂಸದ ಸೇರಿ ಐದು ಮಂದಿ ಮೃತಪಟ್ಟಿದ್ದಾರೆ. 11

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್
ವಿ. ರಾಮಲಿಂಗಸ್ವಾಮಿ ಭವನ, ನವದೆಹಲಿ

ಜಾಹೀರಾತು ಸಂ. ಐಸಿಎಂಆರ್/ಎಸ್‌ಸಿ-ಸಿ/ಎನ್‌ಎಆರ್‌ಎಫ್‌ಬಿಆರ್/2022/1-ಪರ್ಸ್.

ಐಸಿಎಂಆರ್-ರಾಷ್ಟ್ರೀಯ ಜಾನುವಾರು ಸಂಪನ್ಮೂಲ ಸೌಲಭ್ಯಕ್ಕಾಗಿ ಬಯೋಮೆಡಿಕಲ್ ಸಂಶೋಧನೆ (ಎನ್‌ಎಆರ್‌ಎಫ್‌ಬಿಆರ್), ಹೈದರಾಬಾದ್ ಇಲ್ಲಿನ ವೈಜ್ಞಾನಿಕ ಹುದ್ದೆಗಳಿಗೆ ಮಿಷನ್ ಮೋಡ್ ನೇಮಕಾತಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆರೋಗ್ಯ ಸಂಶೋಧನೆ ಇಲಾಖೆ ಅಡಿಯಲ್ಲಿನ ಒಂದು ಸ್ವಾಯುತ್ತ ಸಂಸ್ಥೆಯಾದ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಇವರು ಕೆಳಕಂಡ ವರ್ಗೀಕರಣಗಳ ಮೇರೆಗೆ ವೇತನ ಶ್ರೇಣಿ-11 ರೂ.67,700-ರೂ.2,08,700 (ಪೂರ್ವ ಪರಿಷ್ಕೃತ ಗ್ರೇಡ್ ಪೇ-ರೂ.6600/-) ಶ್ರೇಣಿಯಲ್ಲಿ ಕೆಳಗಿನ ಸೈಂಟಿಸ್ಟ್-ಸಿ ಖಾಲಿಹುದ್ದೆಗಳ ನೇಮಕಾತಿಗಾಗಿ **5ನೇ ಜೂನ್, 2022** ರಂದು ಸಂಜೆ **5:30 ಗಂಟೆಯವರೆಗೆ** ಅರ್ಜಿಗಳನ್ನು ಆಹ್ವಾನಿಸಿದ್ದಾರೆ:-

ಕ್ರ.ಸಂ.	ಹುದ್ದೆ ಮತ್ತು ವರ್ಗೀಕರಣ	ಖಾಲಿ ಹುದ್ದೆಗಳ ಸಂಖ್ಯೆ
1	ಸೈಂಟಿಸ್ಟ್-ಸಿ (ರೊಡೆಂಟ್ ಬ್ರೀಡಿಂಗ್ ಮತ್ತು ಎಕ್ಸ್‌ಪೆರಿಮೆಂಟೇಶನ್)	1 (ಒಂದು)
2	ಸೈಂಟಿಸ್ಟ್-ಸಿ (ನಾನ್-ಹ್ಯುಮನ್ ಪ್ರೈಮೇಟ್ ಬ್ರೀಡಿಂಗ್ ಮತ್ತು ಎಕ್ಸ್‌ಪೆರಿಮೆಂಟೇಶನ್)	1 (ಒಂದು)
3	ಸೈಂಟಿಸ್ಟ್-ಸಿ (ಇಕ್ವೈನ್ ಬ್ರೀಡಿಂಗ್ ಮತ್ತು ಎಕ್ಸ್‌ಪೆರಿಮೆಂಟೇಶನ್)	1 (ಒಂದು)
4	ಸೈಂಟಿಸ್ಟ್-ಸಿ (ಶೀಪ್, ಗೋಟ್ ಮತ್ತು ಪೊರ್ಸಿನ್ ಬ್ರೀಡಿಂಗ್ ಹಾಗೂ ಎಕ್ಸ್‌ಪೆರಿಮೆಂಟೇಶನ್)	1 (ಒಂದು)
5	ಸೈಂಟಿಸ್ಟ್-ಸಿ (ವೆಟೆರಿನರಿ ಪಾಥೊಲಜಿ)	1 (ಒಂದು)
6	ಸೈಂಟಿಸ್ಟ್-ಸಿ (ವೆಟೆರಿನರಿ ಬಯೋಕೆಮಿಸ್ಟ್ರಿ/ಬಯೋಟೆಕ್ನಾಲಜಿ)	1 (ಒಂದು)

ವಿವರವಾದ ಜಾಹೀರಾತಿಗಾಗಿ ದಯವಿಟ್ಟು ಐಸಿಎಂಆರ್'ರವರ https://recruit.icmr.org.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/- (ಜಗದೀಶ್ ರಾಜೇಶ್)
ಸಹಾಯಕ ಮಹಾ ನಿರ್ದೇಶಕರು (ಆಡಳಿತ)

Davp 17152/12/0006/2223

ನೀರು ಪೂರೈಕೆ ವ್ಯತ್ಯಯ

ಬೆಂಗಳೂರು: ನಗರದ ಪೂರ್ಣಪ್ರಜ್ಞ ಬಡಾವಣೆ, ಆರ್.ಆರ್. ನಗರ, ಐಡಿಯಲ್‌ಹೋಮ್ಸ್, ಬಿಇಎಂಎಲ್‌ಲೇಔಟ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇದೇ 11ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಅರೇಹಳ್ಳಿ ಮತ್ತು ವಡ್ಡರಪಾಳ್ಯದ ಹಳ್ಳಿಗಳಿಗೆ ನೀರು ಪೂರೈಸಲು ಉತ್ತರಹಳ್ಳಿ ಜಲಸಂಗ್ರಹಾಗಾರದ 600 ಎಂಎಂ ವ್ಯಾಸದ ಕೊಳವೆ ಮಾರ್ಗದಿಂದ ಪಕ್ಕದಲ್ಲೇ ಎತ್ತರದಲ್ಲಿರುವ ಜಲಸಂಗ್ರಹಾಗಾರಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಬೆಂಗಳೂರು ಕಿರುನಾಟಕೋತ್ಸವದ ಫೈನಲ್ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್‌ನ ಆಶ್ರಯದಲ್ಲಿ 'ಬೆಂಗಳೂರು ಕಿರುನಾಟಕೋತ್ಸವ'ದ ಅಂತಿಮ ಸುತ್ತಿನ ಸ್ಪರ್ಧೆ ಮೇ 15ರಂದು ಸಂಜೆ 6.30ರಿಂದ ಹನುಮಂತನಗರದ ಪ್ರಭಾತ್ ಕೆ.ಎಚ್. ಕಲಾಸೌಧದಲ್ಲಿ ನಡೆಯಲಿದೆ.

ಸ್ಪರ್ಧೆಯಲ್ಲಿ ಭಾಗವಹಿಸಿದ್ದ 15 ತಂಡಗಳ ಪೈಕಿ 6 ನಾಟಕಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿವೆ.

ಆಯ್ಕೆಯಾದ ನಾಟಕಗಳು: ವಿದಗ್ಧ (ಬೆಂಗಳೂರು ಥಿಯೇಟರ್ ಎನ್ಸೆಂಬಲ್), ಸಾಕ್ಷಾತ್ಕಾರ (ಅಂತರಂಗ ಬಹಿರಂಗ), ಅನಾಹುತ (ಮಣ್ಣು), ಸಹನ ಮೂರ್ತಿ (ಪ್ರಕಸಂ), ಕ್ಷಮ (ಕಲಾಕದಂಬ ಆರ್ಟ್ ಸೆಂಟರ್), ನಗರ ಪೂಜೆ (ರಂಗಚಿರಂತನ).


ಬೆಂಗಳೂರು ಕಿರುನಾಟಕೋತ್ಸವ

'ಪ್ರಜಾವಾಣಿ' ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ. ಅತಿಥಿಗಳಾಗಿ ಪೆಂಟಗಾನ್ ಸ್ಪೇಸ್ ಸಂಸ್ಥೆಯ ಸಂಸ್ಥಾಪಕ ರವಿಶಂಕರ್ ಆರಾಧ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಬನಶಂಕರಿ ವಿ.ಅಂಗಡಿ, ಲೇಖಕಿ ಎಂ.ಎಸ್.ವಿದ್ಯಾ, ರಂಗ ನಿರ್ದೇಶಕ ಶ್ರೀಪಾದ ಭಟ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಪತ್ರಕರ್ತ ಜೋಗಿ, ಬರಹಗಾರ ಅಭಿಷೇಕ್ ಅಯ್ಯಂಗಾರ್, ನಟಿ ಸುಮನ್ ನಗರ್ಕರ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ತೀರ್ಪುಗಾರರು ಮತ್ತು ಪ್ರೇಕ್ಷಕರಿಂದ ಆಯ್ಕೆಯಾಗುವ ಎರಡು ನಾಟಕಗಳಿಗೆ 'ಅತ್ಯುತ್ತಮ ನಾಟಕ' ಪ್ರಶಸ್ತಿ, ಸಂಚಾರಿ ವಿಜಯ್ ನೆನಪಾರ್ಥ 'ಅತ್ಯುತ್ತಮ ನಟ' ಪ್ರಶಸ್ತಿ, ಅತ್ಯುತ್ತಮ ನಟಿ, ವಿನ್ಯಾಸ, ನಿರ್ದೇಶನ, ಕಥೆ ಮತ್ತು ಭಿತ್ತಿಚಿತ್ರ ವಿನ್ಯಾಸ ಪ್ರಶಸ್ತಿಗಳ ಪ್ರದಾನವೂ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ bengalurushortplayfestival@gmail.com ಅಥವಾ 9686869676 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪಿಎಸ್‌ಐ ನೇಮಕಾತಿ: ₹ 21 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: '2019ರಲ್ಲಿ ನಡೆದ ಪಿಎಸ್‌ಐ ನೇಮಕಾತಿ ವೇಳೆ ನೌಕರಿ ಕೊಡಿಸುವುದಾಗಿ ನಂಬಿಸಿ ಹುಬ್ಬಳ್ಳಿಯ ಮೂವರು ₹21 ಲಕ್ಷ ಹಣ ಪಡೆದು ವಂಚಿಸಿದ್ದಾರೆ' ಎಂದು ಬಾಗೇಪಲ್ಲಿಯ ಜಿ.ಎಸ್ ಸತ್ಯನಾರಾಯಣ ಎಂಬುವವರು ಬಾಗೇಪಲ್ಲಿ ನಗರ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ. ಹುಬ್ಬಳ್ಳಿಯ ನವೀನ್ ದಲಭಂಜನ್, ಸುಹಾಸ್ ಮತ್ತು ಪವನ್ ಎಂಬುವರು ವಂಚಿಸಿದ್ದಾರೆ ಎಂದು ಹೇಳಿದ್ದಾರೆ.

ಕೇಂದ್ರದ ನಿಲುವಿಗೆ ಅಚ್ಚರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ್ರೋಹ ಕಾನೂನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ದಿಢೀರನೆ ತನ್ನ ನಿಲುವು ಬದಲಿಸಿರುವುದು ಅಚ್ಚರಿ ಮೂಡಿಸಿದೆ ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

ಭಾರತೀಯ ದಂಡ ಸಂಹಿತೆಯ 124ಎ ಸೆಕ್ಷನ್ ('ದೇಶದ್ರೋಹ ಕಾನೂನು') ಅನ್ನು 'ಅರ್ಹ ವೇದಿಕೆ'ಯಿಂದ ಮರುಪರಿಶೀಲನೆಗೆ ಒಳಪಡಿಸಲು ನಿರ್ಧರಿಸಲಾಗಿದೆ. ಹಾಗಾಗಿ, ಈ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲನೆಗೆ ಒಳಪಡಿಸಲು ಸಮಯ ವ್ಯಯಿಸಬೇಡಿ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರವು ಈ ಮೊದಲು ಹೇಳಿತ್ತು. ಆದರೆ, ತನ್ನ ನಿಲುವು ಬದಲಿಸಿದ ಕೇಂದ್ರ ಸರ್ಕಾರ, ಈ ಕಾನೂನು ಅನ್ನು ಮರುಪರಿಶೀಲಿಸುವುದಾಗಿ ತಿಳಿಸಿದೆ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ 124 ಎ ಸೆಕ್ಷನ್ ಅನ್ನು ರದ್ದುಪಡಿಸುವ ಸಾಧ್ಯತೆಯೂ ಇದೆ. ಹೀಗಾಗಿ, ಸರ್ಕಾರ ಈ ನಿರ್ಧಾರ ಕೈಗೊಂಡಿರುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.


ವಸಂತನಗರದಲ್ಲಿ ₹117 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಿಸುವ ಹಿರಿಯ ಅಧಿಕಾರಿಗಳ ವಸತಿ ಗೃಹಗಳ ಕಟ್ಟಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಸಂಸದ ಪಿ.ಸಿ. ಮೋಹನ್ ಇದ್ದರು.

'ಲೇಖಾ ಆರ್ಕೈವ್' ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರ ಮತ್ತು ಕಲಾ ಸೇವೆಯಲ್ಲಿ ನಿರತವಾಗಿರುವ ಯಾವುದೇ ಸಂಸ್ಥೆಗೆ ತಮ್ಮ ಕಲೆಯ ಕುರಿತಾದ ವಿವಿಧ ಮಾಹಿತಿಗಳನ್ನು ದಾಖಲಿಸಿ ಅದನ್ನು ಶಾಶ್ವತವಾಗಿ ಕಾಪಿಡುವ ನಿಟ್ಟಿನಲ್ಲಿ 'ಲೇಖಾ ಆರ್ಕೈವ್' ಎಂಬ ವೇದಿಕೆಯನ್ನು ರೂಪಿಸಲಾಗಿದೆ.

ದಾಖಲೆಗಳನ್ನು ಒಗ್ಗೂಡಿಸಿ ಎಲ್ಲ ದತ್ತಾಂಶಗಳನ್ನು ಕಲಾವಿದರ ವೈಯಕ್ತಿಕ ನೆಲೆಯಲ್ಲಿಯೇ ಉಳಿಯಲು ಬಿಡದೆ ಒಂದೆಡೆ ಸಂಗ್ರಹಿಸಲು ನೆರವಾಗಲಿರುವ 'ಲೇಖಾ'ದ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಲು www.lekha.cc ಪರಿಶೀಲಿಸಬಹುದು. ಅಥವಾ lekha.archive@gmail.com ಇಲ್ಲಿಗೆ ವಿವರಗಳನ್ನು ಕಳುಹಿಸಬಹುದು. ಫೋನ್ ಸಂಪರ್ಕಕ್ಕಾಗಿ: 98452-16195.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ತಿದ್ದುಪಡಿ

ಇ-ಹರಾಜು ಪ್ರಕಟಣೆ ಸಂಖ್ಯೆ:ಬಿಡಿಎ/ಅಸ/ಇ-ಹರಾಜು/ಟಿ-01/2022-23, ದಿನಾಂಕ:07.04.2022, ಈ ದಿನಪತ್ರಿಕೆಯಲ್ಲಿ ದಿನಾಂಕ:08.04.2022ರಂದು ಪ್ರಕಟಗೊಂಡಿದ್ದು, ಕ್ರಮ ಸಂಖ್ಯೆ:574 ರಿಂದ 608ರವರೆಗೆ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣದಲ್ಲಿ (3ನೇ ಫೇಸ್) ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್-3 ಎಂದು ತಾಂತ್ರಿಕ ದೋಷದಿಂದ ತಪ್ಪಾಗಿದ್ದು, ಅದನ್ನು (3ನೇ ಫೇಸ್) ನಾಡಪ್ರಭು ಕೆಂಪೇಗೌಡ ಬಡಾವಣೆ ಬ್ಲಾಕ್-4 ಎಂದು ಓದಿಕೊಳ್ಳತಕ್ಕದ್ದು. ಉಳಿದಂತೆ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಈ ಅನಾನುಕೂಲಕ್ಕಾಗಿ ಬಿಡಿಎ ವಿಷಾದಿಸುತ್ತದೆ.

ಸಹಿ/- ಅಭಿಯಂತರ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಸರ್ವಜ್ಞನಗರ ವಿಭಾಗ,
7ನೇ ಮಹಡಿ, ಪಿ.ಯು. ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು-560001

ನಂ.: ಕಾಪಾಅ(ಸನ)/ಟೆಂಡರ್/03/2022-23 ದಿನಾಂಕ: 09.05.2022

ಅಲ್ಪಾವಧಿ ಟೆಂಡರ್ ಆಹ್ವಾನ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಏಕ ಲಕೋಟೆ

ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ - ಕೆಡಬ್ಲ್ಯು1)**

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಮಾರುತಿಸೇವಾನಗರ ಉಪವಿಭಾಗಕ್ಕೆ 4 ತಿಂಗಳ ಅವಧಿಗೆ ಎರಡು ಭಾಗಗಳಂತೆ ತಾತ್ಕಾಲಿಕ ನಿಯಂತ್ರಣ ಕೇಂದ್ರ ಒದಗಿಸುವುದು. **ವಾರ್ಡ್ ನಂ. 27, 28, 29, 49, 59.**	8.00	20,000/-
2	ಹೆಚ್‌ಬಿಆರ್ ಲೇಔಟ್ ಉಪವಿಭಾಗಕ್ಕೆ 4 ತಿಂಗಳ ಅವಧಿಗೆ ಎರಡು ಭಾಗಗಳಂತೆ ತಾತ್ಕಾಲಿಕ ನಿಯಂತ್ರಣ ಕೇಂದ್ರ ಒದಗಿಸುವುದು. **ವಾರ್ಡ್ ನಂ. 23, 24, 30.**	8.00	20,000/-

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **09.05.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **17.05.2022ರ ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು **19.05.2022ರ ಸಂಜೆ 4:30 ಗಂಟೆ**ಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

INDIAN AIR FORCE

1. Applications are invited from war widows/widows of defence personnel killed while on duty, disabled soldiers/ ex-servicemen and spouses / widows of ex-servicemen for running the following SI Side shops at Air Force Station, Jalahalli (East and West) for maximum of 05 years with yearly extension and with annual hike on approved rebates.

2. **Applications are invited from civilians also.** However, category mentioned in Para 1 above will be given priority over Para 2 category.

Sl. No.	Name of the Shop	Location	Shop No.
	EAST AREA		
1	Sweet shop	ETI	P/403(A)
2	Cloth shop	Akshay Complex	P/336/15&P336/14
3	Boutique shop	Akshay Complex	P/336/22
4	Dhobi shop	Akshay Complex	P/336/17
5	Chicken shop	Akshay Complex	P/336/8
6	Cable TV	East	No shop
7	Provision shop	7th Camp	P/415/1
	WEST AREA		
8	Flour Mill	Tripti Complex	P/321/8
9	Mochi shop	Tripti Complex	P/321/22
10	Cable TV	Tripti Complex	P/321/21
11	Mochi shop	CTI	T/471/1
12	Book stall	Tripti Complex	P/321/11
13	Motor/Cycle repair shop	Tripti Complex	P/321/7

Tender forms can be procured on payment of Rs. 500/- (non-refundable) from **13 May 2022 to 23 May 2022,** between 0900hrs to 1300 hrs on all working days. Earnest money @ Rs. 5,000/- per tender must be deposited by tenderer from **13 May 2022 to 23 May 2022** between 0900 hrs to 1300 hrs on all working days. Same can be collected from Service Institute office, Air force Station Jalahalli (West) Bangalore.

The tender box will be placed at Main Guard Room, Air Force Station, Jalahalli (West), Bangalore-560 015 from **13 May 2022 (0900hrs) to 23 May 2022 (1000hrs).** Tender form should be in sealed envelops separate for each shop with the name of shop written on it. If applied for more than one shop, tender form for each shop should have copies of required document. A vendor will be allotted not more than two shops. All tenders are to drop the sealed tender envelops in the said box which will be sealed at 1000hrs on **24 May 2022,** and tenders will be opened at 1100hrs on **24 May 2022,** by BOO in the presence of tenderers. In case selected tenderers do not take over the allotment shop within the stipulated time, the earnest money will be forfeited and contract will not be awarded. Interested persons are to attach a photo copy of the below mentioned documents along with the tender form and produce the original ID card at the time of opening of tender. **Tenderers not present during the tender opening (Auction) will be disqualified. In tender forms rebates are to be quoted by the tenderers which will further be finalised through 'Auction Process' in presence of the tenderers, during the bid opening.**

(i) Discharge book (ii) PPO No. (iii) Experience certificate
(iv) Diploma certificate (v) Education certificate (v) Bank Passbook
(vi) T Retrun last 03 years (vii) TIN/GST/PAN No. (vii) FSSAI Certificate
(viii) Adhaar card

PERSON TO CONTACT:
Service Institute office
Air Force Station Jalahalli (West)
Bangalore-560015. Tele: 28399009/41187235

Sd/- (Hari Om) Wg Cdr
OIC SI Fund AFS Jalahalli West

PUBLIC NOTICE

In furtherance of the Deed of reconveyance/release was made in favour of the legal representatives of Late Lakshmamma W/o. Late. B.M.V Mayanna who is the title holder of below schedule property by Karnataka State Financial Corporation on 19.03.2020, the below mentioned schedule belongs to Late Lakshmamma, Proprietor of **Jaya Engineering Works**, W/o. Late B.M.V.Mayanna, now under the lawful ownership of his son B.V.Manjunath and his sisters and brothers.

1. All piece and parcel of **Jaya Engineering Works**, City Railway tank bund road, Gandhinagar, Bengaluru-09, the entire Factory, all the machinery and the brand name.
2. All piece and parcel of land measuring 479 sqyds, bearing No. 1, Sirur Park Road, Sheshadripuram, Bangalore. Together with the building standing there on.
3. All piece and parcel of land measuring 37.1/4x20ft bearing no. 17 in Murhariswamy Mutt Lane, Ranasinghpet, Bengaluru.
4. All piece and parcel of land bearing survey No. 46 and 47/1 of Madavara Village, Dasanpura Hobli, Nelamangala Taluk, measuring 2 acres and 13 guntas along with entire shed and buildings.

The said people by name Mr. B.M.Maranna, Mr. B.M Vishwanath, Mr. B.M. Ramanna, Mr. B.M Shivashankar S/o. Late. Pete Mayanna are illegally holding the possession of the above mentioned schedule property. They have no legal rights over the above schedule property. They are functioning the **Jaya Engineering Works** illegally. Hence cautioning through this public notice to not to alienate, sell, mortgage and not to create any third party rights over the schedule property.

Sd/- B. V. Manjunath.
S/o. Late B. M. V. Mayanna,
Jaya Engineering Works, Proprietor.

Sd/- AKASH B SHETTY, ADVOCATE
7/1, B Street, 1st Main Road, Sheshadripuram - 560 020. 9844634201

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬಸವನಗುಡಿ ವಿಭಾಗ,
ಬೃ.ಬೆಂ.ಮ.ಪಾ ಕಟ್ಟಡ, ಬನಶಂಕರಿ 3ನೇ ಹಂತ, ಚ.ಕೆ ಅಚ್ಚುಕಟ್ಟು,
ವಿದ್ಯಾಪೀಠ, ಬೆಂಗಳೂರು - 560 085.

ಸಂಖ್ಯೆ: ಕಾಪಾಅ(ಬಗು)/ಇ-ಪ್ರೊಕ್/04/2022-23 ದಿನಾಂಕ: 09.05.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಏಕಲಕೋಟೆ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
1.	ವಾರ್ಡ್ ಸಂಖ್ಯೆ-154ರಲ್ಲಿ ವಾರ್ಡ್ ರಸ್ತೆಗಳಿಗೆ ವಾರ್ಷಿಕ ನಿರ್ವಹಣೆ ಮಾಡುವುದು (3ನೇ ಕರೆ)	22.00	44,000/-
2.	ವಾರ್ಡ್ ಸಂಖ್ಯೆ-155 ಹನುಮಂತನಗರದಲ್ಲಿ ರಸ್ತೆ ಕಾಮಾಗಾರಿಗಳಿಗೆ ವಾರ್ಷಿಕ ನಿರ್ವಹಣೆ ಮಾಡುವುದು (3ನೇ ಕರೆ)	20.00	55,000/-
3.	ವಾರ್ಡ್ ಸಂಖ್ಯೆ-163 ಕತ್ತರಿಗುಪ್ಪೆಯ ರಸ್ತೆಗಳಿಗೆ ವಾರ್ಷಿಕ ನಿರ್ವಹಣೆ ಮಾಡುವುದು (3ನೇ ಕರೆ)	20.00	55,000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದಿನಾಂಕ: **13.05.2022**ರಿಂದ ಲಭ್ಯವಿರುತ್ತದೆ. (2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ **23.05.2022**ರ ಸಂಜೆ **4:00** ಗಂಟೆಯವರೆಗೆ. (3) ಟೆಂಡರ್ ದಾಖಲೆಗಳನ್ನು ದಿನಾಂಕ: **24.05.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಬಸವನಗುಡಿ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

NOTICE is hereby given to the public at large that we are investigating the clear & marketable title of **1) Mrs. Shifa Rahim, W/o Mr. Sajid Iqbal, (2) Mrs. Azra Raheem Siddique, W/o Mr. Imtiaz Ahmed and (3) Mr. Khalid Rahim, S/o Late Dr.Abdul Rahim ("Owners")** in respect of the to all that piece and parcel of immovable property **bearing Municipal No. 7, BBMP PID No. 76-44-7 measuring 7430.63 Square Feet** situated at NORRIS ROAD, Ward No.76, Richmond Town, Bengaluru ("Land") and bounded as under:-
East by : Property Bearing Municipal No. 40/1-1 and 40
West by: Norris Road and Property Bearing Municipal No. 5
North by: Private Properties (Old Property bearing No. 40/1) South by: Property Bearing Municipal No. 38 and 39 Wellington Street.

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of Land or any part or portion thereof, by way of sale, exchange, mortgage, pledge, charge, gift, trust, inheritance, succession, family arrangement/ settlement, bequest, possession, lease, tenancy, maintenance, easement, memorandum of understanding, license, share, assignment, lien, attachment, development rights, partnership, right of way, lis pendens, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 7 (Seven) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this 10th day of May, 2022

B.N. Prakash
Partner Lawyers Inc
Advocates & Solicitors,
No. 15/2, V.S.Raju Road,
12th Block, Kumarapark
West, Bengaluru-560020.

PUBLIC NOTICE

Our client proposes to purchase the Schedule Property from the present owners Mr. K.A.Muralidhar, S/o. Mr. K. S. Ashwathnarayana Setty and his son Mr. K.M.Sai Eshwar, (husband and son of Late K.M.Padmavathi), Mr. K.Rakesh Kumar and his daughter Kum. K.Laasya, (husband and daughter of Late K.M.Chinmayee who happens to be the daughter of Late K.M.Padmavathi) being the only surviving legal heirs of Late Mrs. K.M.Padmavathi, W/o Mr.K.A.Muralidhar and Late K.M.Nagachinmayee, No. 4-1-77, R.S.Road, Hindupur, Anantpur, Andhra Pradesh-515 201 claiming to be the owners of the Schedule Property which originally belonged to Late K.M.Padmavathi who had acquired the same in terms of Sale Deed dated 17-07-2008, No. 1793/2008-09, Book I, Recorded in CD No. NMGD 106 and registered at the Office of the Sub-Registrar, Nelamangala, Bangalore Rural District.

Any person or persons having any manner of right, title or interest in the Schedule Property or objections for the proposed sale transaction may lodge the same ,in writing with the undersigned along with the supporting legal documents within 15 (Fifteen) days from the date of publication of this notice failing which, our client shall complete the sale transaction. Any Claims/Objections received beyond the stipulated period will not be entertained.

SCHEDULE PROPERTY

All that piece and parcel of residential immovable property being a vacant site bearing No..63, (Old Site NO.192/63) Khata No. 5875460268 (Carved out of the residentially converted land bearing Survey No.16/1 of Byadarahalli Village, Kasaba Hobli; Nelamangala 'Taluk converted vide Official Memorandum dated 10-12-2007, No. ALN(N)SR 44/2006-07 and No. ALN(N)SR 35/2006-07) Situated in the approved layout known as "OMKAR RESIDENTIAL LAYOUT, . Byadarahalli, Kasaba Hobli, Nelamangala Taluk, presently within the revenue administrative jurisdiction of Nelamangala Town Municipality, Nelamangala and including all rights, privileges and appurtenance thereto and site measuring:
EAST TO WEST: 40 Feet
NORTH TO SOUTH: 30 Feet
TOTAL AREA : 1200 Square Feet
and bounded on:
EAST BY: Site No.27
WEST BY: Road
NORTH BY: Site No.62
SOUTH BY: Site No.64

Sd/- Mr. PRAKASH RAO, Mrs. VEENA RAO, Mr. N.ASHOK KUMAR, ADVOCATES "JAYPEE ASSOCIATES" LAW FIRM No. 39, 1st Cross Malleswaram Bangalore-560 003.
Bangalore. Date: 06.05.2022

Marketing & Sales

WANTED IMMEDIATELY EXPERIENCED MARKETING EXECUTIVES (WITH TWO WHEELER PREFERABLE) TO PROMOTE OUR JEE/NEET BOOKS IN EDUCATIONAL INSTITUTIONS. SEND YOUR CV TO gsnpublishers@gmail.com. Ph:9440615689.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

REAL ESTATE SELLING

Sites

Mysore

INVESTORS REQUIRED for constructionof a Drive in Restaurant and Wedding Resort on Mysore Express Highway NearSrirangapatna. Monthly Interest payable Basis. Contact 7676770503/ 9741019028

PERSONAL

Change of Name

SUBADRA M/O JC-673885A- Sub/Clk (SD)- PATIL GANESH TUKARAM R/a Antri Bk, Sangli, Maharashtra changed name from SUBADRA to SUBHADRA TUKARAM PATIL notary K.V.Mani Bangalore.

I, DEEPA Chawla aged 33 Years, D/o Krishna Nayak Residing at V-10 Wing-C, RBD Stillwaters, Silver County Road, Harlur, Bangalore 560068. Karnataka. have changed my name to DEEPA NAYAK vide affidavit dated 07.05.2022 before Notary P. Nanjunda Bengaluru

I, SUNAINA RAO, residing at No. 584 6th cross HAL 3rd stage JB Nagar New Thippasandra Bangalore North, Bangalore 560075, have changed my name to SUNAINA SUBRAMANYA RAO vide affidavit dated 28.04.2022 before Notary Y.R. Chandrasekar, Bangalore. Henceforth I shall be know as SUNAINA SUBRAMANYA RAO only.

I, SHADHIK Basha, S/o Noorulla aged about 19, Residing of #1351, Nyamath bi Mohall, Kolar. I have obtained passport on 19.02.2019 No T3589127 my name was mentioned as Shadhik Basha Noorulla, my correct name is Shadhik Basha hence this affidavit is to produce before the concerned authorities to correct my name as Shadhik Basha only. vide affidavit dated 28.04.2022, before Notary M Ramalinge Gowda

I, NAGARATHNAMMA Ramdas, Nagarathna Ramdas W/o. Late Ramdas, aged 79 years, residing at No. 308 A Block, Chartered Madura Apartments, Simhadri Layout, Uttarahalli, Bangalore 560061 also called NAGARATNAMMA RAMDAS The above are variations of the same name and should not be considered name changes vide affidavit dated 20/04/2022 before notary H.S. Dharma Prasad

JC-673885A- SUB/CLK (SD)- PATIL GANESH TUKARAM at ASC Centre (South) Bangalore changed my minor son's name from PATIL TANMAY to PATIL TANMAY GANESH notary K.V.Mani Bangalore.

I, MOHAMMED SHAFAHAD, residing at #37 2nd cross Chaluvadipalya Dr. TCM Royan Road, Bangalore 560053, declare that my name is wrongly mentioned in some documents as MOHAMMED SHAH FAHAD, vide affidavit dated 09.05.2022 before Notary S.R. Nanjunda Swamy, Bangalore

I SARITA KUMARI residing at #321, 3rd C Block, DS Max Splendor, Kereguddadahalli, Bengaluru-90 have changed my name to SARITA SAH, vide affidavit dated 06-05-2022, Before Notary Gopalakrishna Bangalore.

Lost

LOST

I, S Ayyappan, aged 52 years, S/o K. Swamynadhan, R/a. No.18 Oblappa Street Near Post Office Chikkamavalli Bangalore, have lost original Sale Deed DOCUMENT NO./ IDENTIFICATEION: 418, 271, 417, 1371, 1416 and 144. Sy. No. 37/4, measuring Hec.0.47.0 Sale Deed Document No. 417/2014 dated 19.02.2014 Registered in the office of the Sub-Registrar, Veppannapalli, Krishnagiri District. In this regard, I have lodged a missing complaint with the lost article report reference No. 0218326/2022 dated; 09.05.2022
Finders Please Contact : 94483 87177

JOB OPPORTUNITIES

Teachers/ Professors

WANTED LECTURERS for Physics in St. Anne's PU College, 2, Miller's Road, Bangalore- 560 052. Apply within 5 days (st.annepucollege@yahoo.in) M. No. 9341471195

General

WANTED EXPERIENCED, Efficient Retired officials andEntrepreneurs Male /Female for INDIA'S MOST TRUSTED BRAND 9886326012

OTHERS

For Sale

IMMEDIATE SALE Designer Leather Sofa Teapoy Diwan King Cot and Mattress Teak Dining: 9845414482/ 7019263843

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ತಂತ್ರಾಂಶದ ಲೋಪಗಳಿಂದಾಗಿ ಯೋಜನಾ ನಕ್ಷೆ ಮಂಜೂರಾತಿಗೆ ಸಮಸ್ಯೆ ● ಇದನ್ನೇ ನೆಪವಾಗಿಸಿ ಸತಾಯಿಸುವ ಪಾಲಿಕೆ ಅಧಿಕಾರಿಗಳು

ಕಟ್ಟಡ ಯೋಜನೆ: ಕಟ್ಟುಕಟ್ಟಳೆಗಳದ್ದೇ ರಗಳೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ಯೋಜನಾ ನಕ್ಷೆಗಳಿಗೆ ಮಂಜೂರಾತಿ ನೀಡುವ ಪ್ರಕ್ರಿಯೆಯನ್ನು ಸಂಪೂರ್ಣ ಡಿಜಿಟಲೀಕರಿಸಲಾಗಿದೆ. ಇದಕ್ಕೆ ಬಳಸುತ್ತಿರುವ ತಂತ್ರಾಂಶದ ಕೆಲ ಲೋಪಗಳಿಂದಾಗಿ ಹಾಗೂ ಕಟ್ಟುಕಟ್ಟಳೆಗಳಿಂದಾಗಿ ಕಟ್ಟಡ ನಕ್ಷೆಗೆ ಮಂಜೂರಾತಿ ಪಡೆಯಲು ಹೆಣಗಾಡಬೇಕಾದ ಸ್ಥಿತಿ ಇದೆ.

ಕೆಲಸ ಕಾರ್ಯಗಳನ್ನು ಸುಗಮಗೊಳಿಸುವ (ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್) ಯೋಜನೆ ಅಂಗವಾಗಿ ಬಿಬಿಎಂಪಿಯು ವರ್ಷದ ಹಿಂದೆಯೇ ಕಟ್ಟಡ ನಕ್ಷೆ ಮಂಜೂರಾತಿ ವ್ಯವಸ್ಥೆಯನ್ನು ಕಾಗದರಹಿತಗೊಳಿಸಿದೆ. ಕಟ್ಟಡ ನಿರ್ಮಿಸುವವರಿಗೆ ಕಿರಿಕಿರಿರಹಿತವಾಗಿ ಹಾಗೂ ತ್ವರಿತವಾಗಿ ನಕ್ಷೆ ಮಂಜೂರಾತಿ ಸಿಗಬೇಕೆಂಬ ಉದ್ದೇಶದಿಂದ ಅನೇಕ ಸುಧಾರಣೆಗಳನ್ನೂ ಜಾರಿಗೊಳಿಸಲಾಗಿದೆ. ಕಟ್ಟಡ ನಕ್ಷೆ ಮಂಜೂರಾತಿಗೆ ವಿಶೇಷ ತಂತ್ರಾಂಶ ಬಳಸಲಾಗುತ್ತಿದೆ. ನಕ್ಷೆ ಮಂಜೂರಾತಿ ಕಡತ ಯಾರ ಬಳಿ ಇದೆ ಎಂಬುದನ್ನೂ ಆನ್‌ಲೈನ್‌ನಲ್ಲೇ ನೋಡಬಹುದು. ಕಡತವು ಒಬ್ಬ ಅಧಿಕಾರಿಯ ಬಳಿ 7ಕ್ಕಿಂತ ಹೆಚ್ಚು ದಿನ ಉಳಿದರೆ ಸ್ವಯಂ ಅನುಮೋದನೆ ಸಿಗಲಿದೆ. ಇವೆಲ್ಲವೂ ಸ್ವಾಗತಾರ್ಹ ಕ್ರಮಗಳು. ಆದರೆ, ತಂತ್ರಾಂಶದಲ್ಲಿ ಕೆಲವು ಲೋಪಗಳಿವೆ. ಬಿಬಿಎಂಪಿಯ ಕಟ್ಟಡ ಯೋಜನೆ ಉಪನಿಯಮಗಳಲ್ಲೂ ಕೆಲ ದೋಷಗಳು



ಹಾಗೆಯೇ ಉಳಿದಿವೆ. ಅವುಗಳನ್ನು ಸರಿಪಡಿಸಬೇಕು ಎಂಬುದು ಕಟ್ಟಡ ನಿರ್ಮಾಣ ಸಲಹೆಗಾರರ ಒತ್ತಾಯ.

ಸಣ್ಣ ನಿವೇಶನಗಳಲ್ಲಿ ನಿರ್ಮಿಸುವ ಕಟ್ಟಡದ ವಾಹನ ನಿಲುಗಡೆ ಪ್ರದೇಶಕ್ಕೆ ರಸ್ತೆಯಿಂದ ನೇರವಾಗಿ ಸಂಪರ್ಕ ಒದಗಿಸಲಾಗಿರುತ್ತದೆ. ಆದರೂ, ಕಟ್ಟಡ ನಕ್ಷೆಗೆ ಮಂಜೂರಾತಿ ನೀಡುವ ತಂತ್ರಾಂಶವು 'ಕಟ್ಟಡದ ವಾಹನ ನಿಲುಗಡೆ ಪ್ರದೇಶಕ್ಕೆ ಪ್ರತ್ಯೇಕ ರಸ್ತೆ ಸಂಪರ್ಕ ಕಲ್ಪಿಸದ ಕಾರಣ' ಮಂಜೂರಾತಿ ನಿರಾಕರಿಸುತ್ತಿದೆ.

'ಇದೊಂದು ತಾಂತ್ರಿಕ ಲೋಪ ಎಂಬುದು ಬಿಬಿಎಂಪಿ ಅಧಿಕಾರಿಗಳಿಗೂ ಗೊತ್ತಿದೆ. ಆನ್‌ಲೈನ್ ವ್ಯವಸ್ಥೆಯಲ್ಲಿ ನಕ್ಷೆಯು ತಿರಸ್ಕೃತಗೊಂಡಾಗ ಕಟ್ಟಡ ನಿರ್ಮಾಣ ಸಲಹಾ ಸಂಸ್ಥೆಯ ಎಂಜಿನಿಯರ್‌ಗಳು ಬಿಬಿಎಂಪಿ ಅಧಿಕಾರಿಗಳನ್ನು ಸಂಪರ್ಕಿಸಲೇಬೇಕಾಗುತ್ತದೆ. ಅಧಿಕಾರಿಗಳು ಏನನ್ನು ನಿರೀಕ್ಷಿಸುತ್ತಾರೆ ಎಂಬುದು ತಿಳಿಯದ ವಿಷಯವೇನಲ್ಲ' ಎಂದು ಕಟ್ಟಡ ಸಲಹಾ ಸಂಸ್ಥೆಯ ಎಂಜಿನಿಯರ್ ಒಬ್ಬರು ಪರಿಸ್ಥಿತಿ ವಿವರಿಸಿದರು.

ಕೆಲವು ನಿವೇಶನಗಳ ಉದ್ದ ಮತ್ತು ಅಗಲಗಳು ಏಕರೀತಿಯಲ್ಲಿರುವುದಿಲ್ಲ. ಅಂತಹ ನಿವೇಶನಗಳಲ್ಲಿ ಮುಂಭಾಗ ಹಾಗೂ ಹಿಂಭಾಗದ ಸೆಟ್‌ಬ್ಯಾಕ್‌ಗಳನ್ನು ಅಲ್ಲಿನ ಸ್ಥಳಾವಕಾಶಕ್ಕೆ ಅನುಗುಣವಾಗಿ ಬಿಡಬೇಕೇ ಹೊರತು, ಸರಾಸರಿ ಉದ್ದಗಲಕ್ಕೆ ಅನುಗುಣವಾಗಿ ಅಲ್ಲ. ಆದರೂ ತಂತ್ರಾಂಶವು ನಿವೇಶನದಲ್ಲಿ ಹೆಚ್ಚು ಉದ್ದವಿರುವ ಬದಿಯ ಅಳತೆಯನ್ನು ಮಾತ್ರ ಪರಿಗಣಿಸುತ್ತಿರುವುದರಿಂದ ಕಟ್ಟಡ ನಕ್ಷೆ ತಿರಸ್ಕೃತಗೊಳ್ಳುತ್ತಿದೆ ಎಂದು ಇನ್ನೊಬ್ಬ ಎಂಜಿನಿಯರ್ ತಿಳಿಸಿದರು.

'ಸ್ಟಿಲ್ಟ್ ಮಹಡಿ–ಗೊಂದಲ ನಿವಾರಿಸಿ'

ಬಿಬಿಎಂಪಿ ಕಟ್ಟಡ ಉಪನಿಯಮಗಳ ಪ್ರಕಾರ, ವಾಹನ ನಿಲುಗಡೆಗೆ ಬಳಸುವ ಸ್ಟಿಲ್ಟ್ ಮಹಡಿಯ ಗರಿಷ್ಠ ಎತ್ತರ 2.4 ಮೀ ಇರಬೇಕು. ಕೆಲವು ಕಟ್ಟಡಗಳಲ್ಲಿ ಕಾಂಕ್ರೀಟ್ ಹಾಸಿನ ಕಾಂಕ್ರೀಟ್ ತೊಲೆಯ ಎತ್ತರವೇ 2 ಅಡಿಗಳಷ್ಟಿರುತ್ತದೆ. ತೊಲೆಯ ಅಂಚಿನಿಂದ ನೆಲದ ನಡುವೆ 2.4 ಮೀ ಎತ್ತರ ಕಾಪಾಡಿದರೆ, ಸ್ಟಿಲ್ಟ್ ಮಹಡಿಯ ಎತ್ತರ ಗರಿಷ್ಠ ಮಿತಿಗಿಂತ ಹೆಚ್ಚಾಗುತ್ತದೆ. ಆಗ ಸ್ಟಿಲ್ಟ್ ಮಹಡಿಯನ್ನೂ ಬಿಬಿಎಂಪಿ ಅಧಿಕಾರಿಗಳು ಪ್ರತ್ಯೇಕ ಮಹಡಿ ಎಂದೇ ಪರಿಗಣಿಸುತ್ತಾರೆ ಎಂಬುದು ಎಂಜಿನಿಯರ್‌ಗಳ ದೂರು.

'ಬಿಬಿಎಂಪಿಯಿಂದ ಅನುಮೋದನೆ ಪಡೆದು, ಅದರ ಪ್ರಕಾರವೇ ಕಟ್ಟಡ ನಿರ್ಮಿಸಿದ್ದರೂ, ತೊಲೆಯ ಅಂಚು ಮತ್ತು ನೆಲದ ನಡುವೆ ಕನಿಷ್ಠ ಎತ್ತರ ಸಾಲುತ್ತಿಲ್ಲ ಎಂಬ ಕಾರಣಕ್ಕೆ ಬಿಬಿಎಂಪಿ ಅಧಿಕಾರಿಗಳು ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ನೀಡಲು ತಗಾದೆ ತೆಗೆದ ಉದಾಹರಣೆಗಳಿವೆ. ಸ್ಟಿಲ್ಟ್ ಮಹಡಿಯ ಗರಿಷ್ಠ ಎತ್ತರವನ್ನು 3 ಮೀಟರ್‌ಗೆ ಹೆಚ್ಚಿಸಿದರೆ ಸಮಸ್ಯೆ ಬಗೆಹರಿಯುತ್ತದೆ. ಅದನ್ನು ಬಿಬಿಎಂಪಿ ಮಾಡುತ್ತಿಲ್ಲ' ಎಂದು ಶ್ರೀಕಾಂತ್ ಎಸ್.ಚನ್ನಾಳ ಬೇಸರ ವ್ಯಕ್ತಪಡಿಸಿದರು.



ಆನ್‌ಲೈನ್ ವ್ಯವಸ್ಥೆ ಲೋಪಗಳನ್ನು ಬಿಬಿಎಂಪಿ ಮುಖ್ಯ ಆಯುಕ್ತರ ಗಮನಕ್ಕೆ ತಂದಿದ್ದೇವೆ.

ಶ್ರೀಕಾಂತ್ ಎಸ್.ಚನ್ನಾಳ, ಅಧ್ಯಕ್ಷ, ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಸಂಸ್ಥೆ ಬೆಂಗಳೂರು ಕೇಂದ್ರ

ಕಟ್ಟಡ ಯೋಜನೆ ನಕ್ಷೆ ಪಡೆಯುವಲ್ಲಿ ಎದುರಾಗುತ್ತಿರುವ ತಾಂತ್ರಿಕ ಸಮಸ್ಯೆಗಳು ನನ್ನ ಗಮನಕ್ಕೆ ಬಂದಿರಲಿಲ್ಲ. ಇವುಗಳನ್ನು ಪರಿಶೀಲಿಸಿ ಲೋಪ ಸರಿಪಡಿಸುತ್ತೇವೆ.

ಸುನಿಲ್, ಬಿಬಿಎಂಪಿ, ಮುಖ್ಯ ನಗರ ಯೋಜಕ

'ತಂತ್ರಾಂಶ – ಏಕಸ್ವಾಮ್ಯ ಬೇಡ'

ಬಿಬಿಎಂಪಿಯು ಕಟ್ಟಡ ಯೋಜನೆಗಳಿಗೆ ಮಂಜೂರಾತಿ ನೀಡುವ ಪ್ರಕ್ರಿಯೆಯನ್ನು ನಿಭಾಯಿಸುವ ಹೊಣೆಯನ್ನು ಸಾಫ್ಟ್‌ಟೆಕ್ ಸಂಸ್ಥೆಗೆ ವಹಿಸಿದೆ. ಈ ಸಂಸ್ಥೆಯು ಆಟೊ ಕ್ಯಾಡ್ ತಂತ್ರಾಂಶದಲ್ಲಿ ಸಲ್ಲಿಸುವ ಕಟ್ಟಡ ನಕ್ಷೆಗಳನ್ನು ಮಾತ್ರ ಸ್ವೀಕರಿಸುತ್ತದೆ. ಇಂತಹದ್ದೇ ಮಾದರಿಯಲ್ಲಿ ಕಾರ್ಯನಿರ್ವಹಿಸುವ ಬ್ರಿಕ್ ಕ್ಯಾಡ್, ಜೆಡ್.ಡಬ್ಲ್ಯು ಕ್ಯಾಡ್ ತಂತ್ರಾಂಶಗಳಲ್ಲಿ ರೂಪಿಸುವ ನಕ್ಷೆಗಳನ್ನು ಸ್ವೀಕರಿಸುತ್ತಿಲ್ಲ.

'ಆಟೊ ಕ್ಯಾಡ್ ಸಂಸ್ಥೆಯ ತಂತ್ರಾಂಶ ಬಳಸಲು ವರ್ಷಕ್ಕೆ ಕನಿಷ್ಠ ₹ 85 ಸಾವಿರ ಪಾವತಿಸಬೇಕು. ಬ್ರಿಕ್ ಕ್ಯಾಡ್ ತಂತ್ರಾಂಶಕ್ಕೆ ವರ್ಷಕ್ಕೆ ₹ 13 ಸಾವಿರ ಪಾವತಿಸಿದರೆ ಸಾಕು. ಜೆಡ್.ಡಬ್ಲ್ಯು ಕ್ಯಾಡ್ ತಂತ್ರಾಂಶವನ್ನು ಒಮ್ಮೆ ₹ 15 ಸಾವಿರ ನೀಡಿ ಖರೀದಿಸಿದರೆ, ಬಳಿಕ ಹಣ ಪಾವತಿಸಬೇಕಾಗಿಲ್ಲ. ಒಂದೇ ಸಂಸ್ಥೆಯ ತಂತ್ರಾಂಶವನ್ನು ಮಾತ್ರ ಬಳಸುವುದು ಏಕಸ್ವಾಮ್ಯಕ್ಕೆ ದಾರಿಯಾಗುತ್ತದೆ' ಎಂದು ಶ್ರೀಕಾಂತ್ ಚನ್ನಾಳ ಒತ್ತಾಯಿಸಿದರು.

ಬೋಧಕರ ನಿಯೋಜನೆ ರದ್ದು: ಉನ್ನತ ಶಿಕ್ಷಣ ಸಚಿವರ ಕಚೇರಿ ಎದುರು

ಎಂಎಲ್‌ಸಿ ಮರಿತಿಬ್ಬೇಗೌಡ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳ 1,200 ಬೋಧಕರ ನಿಯೋಜನೆ ಆದೇಶವನ್ನು ರದ್ದು ಮಾಡಿರುವುದನ್ನು ವಿರೋಧಿಸಿ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ನೇತೃತ್ವದಲ್ಲಿ ಪರಿಷತ್ ಸದಸ್ಯರು ವಿಕಾಸಸೌಧದಲ್ಲಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರ ಕಚೇರಿ ಎದುರು ಸೋಮವಾರ ಧರಣಿ ನಡೆಸಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಉಪ ನಾಯಕ ಕೆ. ಗೋವಿಂದರಾಜ್, ಮುಖ್ಯ ಸಚೇತಕ ಪ್ರಕಾಶ್ ರಾಥೋಡ್, ಸದಸ್ಯರಾದ ಕೊಂಡಜ್ಜಿ ಮೋಹನ್, ಯು.ಬಿ. ವೆಂಕಟೇಶ್ ಧರಣಿ ಸ್ಥಳಕ್ಕೆ ಭೇಟಿ ನೀಡಿ ಬೆಂಬಲ ಸೂಚಿಸಿದರು.

'ಪ್ರದೀಪ್ ಆಯುಕ್ತರೇ ಗೋ ಬ್ಯಾಕ್ ಟು ಮಹಾರಾಷ್ಟ್ರ', 'ಬೋಧಕರ ನಿಯೋಜನೆ ರದ್ದತಿ ಆದೇಶ ಹಿಂಪಡೆಯಬೇಕು', 'ಆಯುಕ್ತರ ಕೈಗೊಂಬೆ ಸಚಿವ ಡಾ. ಅಶ್ವತ್ಥ ನಾರಾಯಣ', 'ಆಯುಕ್ತರ ಸರ್ವಾಧಿಕಾರಿ ಧೋರಣೆಗೆ ಧಿಕ್ಕಾರ' ಎಂಬ ಭಿತ್ತಿಪತ್ರಗಳನ್ನು ವಿಧಾನ ಪರಿಷತ್ ಸದಸ್ಯರು ಧರಣಿ ನಡೆಸಿದರು.

ಸಂಜೆವರೆಗೂ ಧರಣಿ: ಅಶ್ವತ್ಥ ನಾರಾಯಣ ಸ್ಥಳಕ್ಕೆ ಬಂದು ನಿಯೋಜನೆ ರದ್ದತಿ ಆದೇಶ ಹಿಂಪಡೆಯಬೇಕು ಎಂದು ಪಟ್ಟುಹಿಡಿದು ಮರಿತಿಬ್ಬೇಗೌಡ ಸಂಜೆಯವರೆಗೂ ಧರಣಿ ನಡೆಸಿದರು. ಸ್ಥಳಕ್ಕೆ ಬಂದ ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ್ ನಾಯಕ್ ಮತ್ತು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್, ಮಂಗಳವಾರ ಸಚಿವರ ಜತೆ ಚರ್ಚೆಗೆ ಅವಕಾಶ ಕಲ್ಪಿಸುವ ಭರವಸೆ ನೀಡಿದರು. ಸಂಜೆ 5.30ಕ್ಕೆ ಮರಿತಿಬ್ಬೇಗೌಡ ಧರಣಿ ಅಂತ್ಯಗೊಳಿಸಿದರು.



ಬೋಧಕರ ನಿಯೋಜನೆ ರದ್ದತಿ ಆದೇಶ ಹಿಂಪಡೆಯುವಂತೆ ಆಗ್ರಹಿಸಿ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರು ವಿಕಾಸಸೌಧದಲ್ಲಿರುವ ಉನ್ನತ ಶಿಕ್ಷಣ ಸಚಿವರ ಕಚೇರಿ ಎದುರು ಸೋಮವಾರ ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

'ಆರೋಪ ಸತ್ಯಕ್ಕೆ ದೂರ'

'ಬೋಧಕರ ನಿಯೋಜನೆ ರದ್ದತಿಯನ್ನು ಏಕಾಏಕಿ ಮಾಡಲಾಗಿದೆ ಎಂಬ ಆರೋಪ ಸತ್ಯಕ್ಕೆ ದೂರವಾದುದು. ನೇಮಕಾತಿ ಹೊಂದಿದ ಕಾಲೇಜುಗಳನ್ನು ಬಿಟ್ಟು, ಇತರೆಡೆ ಕಾರ್ಯನಿರ್ವಹಿಸುತ್ತಿರುವ ಬೋಧಕರ ನಿಯೋಜನೆ ರದ್ದು ಮಾಡುವಂತೆ ಮರಿತಿಬ್ಬೇಗೌಡ ಸೇರಿದಂತೆ ವಿಧಾನ ಪರಿಷತ್‌ನ ಹಲವು ಸದಸ್ಯರು ಈ ಹಿಂದೆ ಒತ್ತಾಯಿಸಿದ್ದರು. ಅವರ ಮನವಿಗೆ ಸ್ಪಂದಿಸಿ ನಿಯೋಜನೆ ರದ್ದು ಮಾಡಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದ್ದಾರೆ.

ಧರಣಿ ಕುರಿತು ಪ್ರತಿಕ್ರಿಯಿಸಿರುವ ಅವರು, 'ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ಅನೇಕ ಶಾಸಕರ ಬೇಡಿಕೆಯಂತೆ ಈ ನಿರ್ಧಾರ ಮಾಡಲಾಗಿದೆ. 700 ಕ್ಕೂ ಹೆಚ್ಚು ಬೋಧಕರು ನೇಮಕಾತಿ ಹೊಂದಿದ ಕಾಲೇಜುಗಳನ್ನು ಬಿಟ್ಟು, ನಗರಗಳಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿದ್ದಾರೆ. ಆದರೆ, ಮರಿತಿಬ್ಬೇಗೌಡ ಮತ್ತು ಇತರರು ನನ್ನ ಕಚೇರಿ ಎದುರು ಧರಣಿ ನಡೆಸಿರುವುದು ಸೋಜಿಗದ ಸಂಗತಿ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರೂ ವಿಷಯವನ್ನು ಸರಿಯಾಗಿ ತಿಳಿಯದೇ ಬೆಂಬಲಿಸಿರುವುದು ಇನ್ನೂ ಆಶ್ಚರ್ಯ' ಎಂದಿದ್ದಾರೆ.

ಖಾಸಗೀಕರಣದಿಂದ ಭವಿಷ್ಯದಲ್ಲಿ ಮೀಸಲಾತಿ ಮಾಯ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಖಾಸಗೀಕರಣ ಮತ್ತು ಗುತ್ತಿಗೆ ಪದ್ಧತಿ ಹೆಚ್ಚಾಗುತ್ತಿದೆ. ಇದರಿಂದಾಗಿ ದಲಿತರು ಹೋರಾಟ ಮಾಡುತ್ತಿರುವ ಮೀಸಲಾತಿಯೇ ಮುಂದೊಂದು ದಿನ ಮರೆಯಾಗಲಿದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ (ಭೀಮವಾದ) ಭಾನುವಾರ ಆಯೋಜಿಸಿದ್ದ ಪದಾಧಿಕಾರಿಗಳ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

ಭಾವ ಭಾರತ ಸ್ವಚ್ಛವಾಗಬೇಕು: 'ದೇಶದಲ್ಲಿ ಈಗಲೂ 1.82 ಕೋಟಿ ಮಂದಿ ಕೈಯಲ್ಲೇ ಮಲ ಎತ್ತುತ್ತಿದ್ದಾರೆ. 8 ಕೋಟಿಗಿಂತಲೂ ಹೆಚ್ಚು ಜನ ತಲೆಯ ಮೇಲೆ ಮಲ ಹೊರುತ್ತಿದ್ದಾರೆ. 5 ದಿನಕ್ಕೆ ಒಬ್ಬರು ಸಫಾಯಿ ಕರ್ಮಚಾರಿ ಗುಂಡಿಗೆ ಬಿದ್ದು ಸಾಯುತ್ತಿದ್ದಾರೆ. ಅಸ್ಪೃಶ್ಯತೆ ಎನ್ನುವುದು ನಾಶವಾಗಿಲ್ಲ. ಜನ ಇನ್ನೂ ಕೈಯಲ್ಲೇ ಮಲ ಎತ್ತುತ್ತಿದ್ದಾರೆ ಎಂದರೆ ಸ್ವಚ್ಛ ಭಾರತದ ಕಲ್ಪನೆ ಎಲ್ಲಿ ತಲುಪಿದೆ? ಬೀದಿ ಭಾರತ ಸ್ವಚ್ಛವಾದರೆ ಸಾಲದು, ಭಾವ ಭಾರತ ಸ್ವಚ್ಛವಾಗಬೇಕು' ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, 'ಬೇರೆ ಜಾತಿಯವರ ಹೋರಾಟ ಒಂದು ಹಂತ ತಲುಪಿದೆ. ಆದರೆ, ದಲಿತರ ಹೋರಾಟ ಆರಂಭಗೊಂಡು ನಾಲ್ಕು ದಶಕಗಳು ಕಳೆದರೂ ಮೊದಲ ಸ್ಥಿತಿಯಲ್ಲೇ ಇದೆ. ಲಕ್ಷಾಂತರ ಹಳ್ಳಿಗಳಲ್ಲಿ ಜಾತಿ ಅಸಮಾನತೆ ಜೀವಂತವಾಗಿದೆ' ಎಂದರು.

'ಹಿಜಾಬ್ ವಿಚಾರ ರಾಷ್ಟ್ರಮಟ್ಟದಲ್ಲಿ ಸದ್ದು ಮಾಡುತ್ತದೆ. ಆದರೆ, ದಲಿತರ ಮೇಲಾಗುವ ದೌರ್ಜನ್ಯಗಳು ಹೆಚ್ಚು ಮಹತ್ವ ಪಡೆದುಕೊಳ್ಳುವುದಿಲ್ಲ. ದಲಿತರ ಮೇಲೆ ದೌರ್ಜನ್ಯವಾದರೆ ಅದರ ಪರಿಣಾಮ ಹೀಗೂ ಇರುತ್ತದೆ ಎಂದು ದೌರ್ಜನ್ಯ ಮಾಡುವವರಿಗೆ ಅರಿವಾಗಬೇಕು. ಆ ರೀತಿಯ ವಾತಾವರಣ ಸೃಷ್ಟಿಸಲು ದಲಿತರೆಲ್ಲ ಸಜ್ಜಾಗಬೇಕು' ಎಂದರು.

ಕಾಮಗಾರಿಗೆ ಅಡ್ಡಿ: ಕ್ರಮಕ್ಕೆ ಆಗ್ರಹ

ಬೆಂಗಳೂರು: ಆರ್.ಆರ್.ನಗರ ವಲಯಕ್ಕೆ ಸೇರಿರುವ ವಾರ್ಡ್ ನಂ.40ರ ವ್ಯಾಪ್ತಿಯ ಕರಿವೋಬನಹಳ್ಳಿ ಗ್ರಾಮದ ಎಸ್‌ಎಲ್‌ಎನ್ ಎನ್‌ಕ್ಲೇವ್ ಬಡಾವಣೆಯಲ್ಲಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಗೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಸ್ಥಳೀಯರಾದ ಸುವರ್ಣಮ್ಮ ಮತ್ತು ಅವರ ಮಕ್ಕಳಾದ ಚೇತನ್ ಹಾಗೂ ಸೌಮ್ಯ ಕಾಮಗಾರಿಗೆ ಅಡ್ಡಿಪಡಿಸಿ, ರಸ್ತೆಯನ್ನು ಒತ್ತುವರಿ ಮಾಡಿದ್ದಾರೆ. ಜತೆಗೆ, ಜಲಮಂಡಳಿ ಅಳವಡಿಸಿದ್ದ ಒಳಚರಂಡಿ ಪೈಪ್ ಅನ್ನು ಕಿತ್ತು ಹಾಕಿದ್ದಾರೆ. ಮನೆಗಳಿಗೆ ಅಳವಡಿಸಿರುವ ಕೊಳವೆ ಬಾವಿ ನೀರಿನ ಪೈಪ್ ಸಂಪರ್ಕವನ್ನು ಕಿತ್ತು ಹಾಕಿದ್ದಾರೆ ಎಂದು ದೂರಿದ್ದಾರೆ.

ಈ ಬಗ್ಗೆ ಪೀಣ್ಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಹಾಗೂ ಬಿಬಿಎಂಪಿ ಅಧಿಕಾರಿಗಳ ಗಮನಕ್ಕೂ ತರಲಾಗಿದೆ. ಆದರೆ ಇದು ವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದ್ದಾರೆ.

ಫಿಕ್ಸ್ ಮೈ ಸ್ಟ್ರೀಟ್ ಆ್ಯಪ್ ಮೂಲಕ ಸಮೀಕ್ಷೆ ನಡೆಸಲು ಮುಖ್ಯ ಆಯುಕ್ತರ ಸಲಹೆ

ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ರಸ್ತೆ ಗುಂಡಿಗಳಿವೆ ಎಂಬುದನ್ನು 'ಫಿಕ್ಸ್ ಮೈ ಸ್ಟ್ರೀಟ್' ಆ್ಯಪ್ ಮೂಲಕ ಸಮೀಕ್ಷೆ ನಡೆಸಿ ತ್ವರಿತಗತಿಯಲ್ಲಿ ಅವುಗಳನ್ನು ಮುಚ್ಚಬೇಕು' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಸಂಬಂಧ ಸೋಮವಾರ ಅವರು ಅಧಿಕಾರಿಗಳ ಸಭೆ ನಡೆಸಿದರು.

'ಸಹಾಯಕ ಕಂದಾಯ ಅಧಿಕಾರಿಗಳು ಯಾವ ರಸ್ತೆಯಲ್ಲಿ ಗುಂಡಿಗಳಿವೆ, ಎಷ್ಟು ಗುಂಡಿಗಳಿವೆ ಎಂಬುದನ್ನು ಭೌಗೋಳಿಕ ಸ್ಥಳದ ಮಾಹಿತಿ ಹಾಗೂ ಛಾಯಾಚಿತ್ರಗಳ ಸಮೇತ ಫಿಕ್ಸ್ ಮೈ ಸ್ಟ್ರೀಟ್ ಆ್ಯಪ್‌ನಲ್ಲಿ ಅಪ್ಲೋಡ್ ಮಾಡಬೇಕು. ಇದರ ಆಧಾರದಲ್ಲಿ ಡಾಂಬರು ಮಿಶ್ರಣ ಘಟಕದಿಂದ ಸ್ಥಳೀಯ ಎಂಜಿನಿಯರ್‌ಗಳು ಡಾಂಬರು ಪಡೆದುಕೊಳ್ಳಬೇಕು. ನಿಯಮಾನುಸಾರ ಗುಂಡಿಯ ಅಂಚುಗಳನ್ನು ಚೌಕ ಅಥವಾ ಆಯತಾಕಾರದಲ್ಲಿ ಕತ್ತರಿಸಿ ಡಾಂಬರು ಮಿಶ್ರಣ ಹಾಕಿ ಮುಚ್ಚಬೇಕು' ಎಂದು ಅವರು ನಿರ್ದೇಶನ ನೀಡಿದರು.

ನಗರದ ಮುಖ್ಯ ರಸ್ತೆಗಳು ಹಾಗೂ ಉಪಮುಖ್ಯ ರಸ್ತೆಗಳಲ್ಲಿ ಯಾವುದೇ ರಸ್ತೆಗುಂಡಿಗಳು ಇಲ್ಲದಂತೆ ನೋಡಿಕೊಳ್ಳಬೇಕು.182 ಕಿ.ಮೀ ಉದ್ದದ ಮುಖ್ಯ ರಸ್ತೆಗಳು ಹಾಗೂ ಉಪಮುಖ್ಯ ರಸ್ತೆ ಗಳನ್ನು ಗುಂಡಿಗಳನ್ನು ಪೈಥಾನ್ ಯಂತ್ರ ಬಳಸಿ ಮುಚ್ಚಬೇಕು ಎಂದು ಸೂಚನೆ ನೀಡಿದರು.

ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಬೇಕಿರುವ ರಸ್ತೆಗಳಲ್ಲೂ ಗುಂಡಿಗಳನ್ನು ಮುಚ್ಚಿ ವಾಹನಗಳ ಸಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ದೋಷ ಮುಕ್ತ ಅವಧಿ ಪೂರ್ಣಗೊಳ್ಳ ರಸ್ತೆಗಳಲ್ಲಿ ಗುಂಡಿ ಕಾಣಿಸಿಕೊಂಡರೆ ಗುತ್ತಿಗೆದಾರರ ಮೂಲಕವೇ ಅವುಗಳನ್ನು ಮುಚ್ಚಿಸಬೇಕು ಎಂದು ಸ್ಪಷ್ಟಪಡಿಸಿದರು.

'ಮುಚ್ಚಿರುವ ಗುಂಡಿಗಳಲ್ಲಿ ಶೇ 1 ರಷ್ಟನ್ನು ವಲಯ ಆಯುಕ್ತರು, ಶೇ 5 ರಷ್ಟನ್ನು ಮುಖ್ಯ ಎಂಜಿನಿಯರ್‌ಗಳು, ಶೇ 30 ರಷ್ಟನ್ನು ಕಾರ್ಯಪಾಲಕ ಎಂಜಿನಿಯರ್‌ಗಳು ನಡೆಸಲು 'ಫಿಕ್ಸ್ ಮೈ ಆ್ಯಪ್'ನಲ್ಲಿ ವ್ಯವಸ್ಥೆ ಕಲ್ಪಿಸಬೇಕೆಂದು. ರಸ್ತೆ ಗುಂಡಿಗಳನ್ನು ಮುಚ್ಚುತ್ತಿರುವುದನ್ನು ನಾಗರಿಕರು ವೀಕ್ಷಣೆ ಮಾಡಲು ಆ್ಯಪ್‌ನಲ್ಲಿ ಅವಕಾಶ ಕಲ್ಪಿಸಬೇಕು ಎಂದು ಅವರು ತಿಳಿಸಿದರು.

ಕೋಟಿಗಾನಹಳ್ಳಿ ರಾಮಯ್ಯ ಸೇರಿ ನಾಲ್ವರಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪತ್ರಿಕಾ ಸಂಪಾದಕರ ಸಂಘದ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಕೋಲಾರದ ಕೋಟಿಗಾನಹಳ್ಳಿ ರಾಮಯ್ಯ ಅವರನ್ನು 'ಬಿ ರಾಚಯ್ಯ ದತ್ತಿನಿಧಿ ವಾರ್ಷಿಕ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ಮೈಸೂರಿನ 'ನಿಜ ದನಿ' ಪತ್ರಿಕೆ ಸಂಪಾದಕ ಶಾಂತರಾಜ್, ಬಾಗಲಕೋಟೆಯ 'ಮಲಪ್ರಭ ಎಕ್ಸ್‌ಪ್ರೆಸ್' ಪತ್ರಿಕೆ ಸಂಪಾದಕ ಮುತ್ತು ನಾಯ್ಕರ್ ಮತ್ತು ಕಲಬುರಗಿಯ 'ಕರ್ನಾಟಕ ಸಂಧ್ಯಾಕಾಲ' ಪತ್ರಿಕೆ ಸಂಪಾದಕ ಡಿ. ಶಿವಲಿಂಗಪ್ಪ ಅವರನ್ನು 'ವಾರ್ಷಿಕ ಪ್ರಶಸ್ತಿ'ಗೆ ಆಯ್ಕೆ ಮಾಡ ಲಾಗಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಬೆಂಗಳೂರಿನ ಗಾಂಧಿ ಭವನದಲ್ಲಿ ಶುಕ್ರವಾರ (ಮೇ 13) ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಎಲ್ಲ ಪ್ರಶಸ್ತಿಗಳೂ ನಗದು ಮತ್ತು ಫಲಕ ಒಳಗೊಂಡಿವೆ ಎಂದು ಪ್ರಶಸ್ತಿ ಪ್ರದಾನ ಸಮಾರಂಭದ ಸಂಯೋಜಕ ಎನ್. ರವಿಕುಮಾರ್ ಟೆಲೆಕ್ಸ್ ತಿಳಿಸಿದ್ದಾರೆ.

ತ್ಯಾಗರಾಜ ಬ್ಯಾಂಕ್‌ನಿಂದ ಗೃಹ ಸಾಲ ಯೋಜನೆ

ಬೆಂಗಳೂರು: ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್, ನಾಗರಿಕರ ಅನುಕೂಲಕ್ಕಾಗಿ 'ಶ್ರೀ ತ್ಯಾಗರಾಜ ಗೃಹ ಸಾಲ' ಹಾಗೂ 'ಶ್ರೀ ತ್ಯಾಗರಾಜ ಅಡಮಾನ ಸಾಲ' ಯೋಜನೆಗಳನ್ನು ಪರಿಚಯಿಸಿದೆ.

'ಈ ಯೋಜನೆಗಳ ಅಡಿ ಶೇ 7.25 ಬಡ್ಡಿದರದಲ್ಲಿ ಗೃಹ ಸಾಲ ಹಾಗೂ ಶೇ 8.50 ಬಡ್ಡಿದರದಲ್ಲಿ ಅಡಮಾನ ಸಾಲ ನೀಡಲಾಗುತ್ತದೆ. ಸಾಲಕ್ಕಾಗಿ ಅರ್ಜಿ ಸಲ್ಲಿಸುವವರಿಗೆ ಅಕ್ಷಯ ತೃತೀಯ ಪ್ರಯುಕ್ತ ಪ್ರೊಸೆಸಿಂಗ್ ಶುಲ್ಕದಲ್ಲಿ ಶೇ 0.50ರಷ್ಟು ರಿಯಾಯಿತಿ ನೀಡಲು ನಿರ್ಧರಿಸಲಾಗಿದೆ. ಗುಂಪು ಸಾಲದ ಯೋಜನೆಯ ಅಡಿಯಲ್ಲಿ ಸಣ್ಣ ವ್ಯಾಪಾರಿಗಳು ಹಾಗೂ ಸ್ವ–ಉದ್ಯೋಗ ಕೈಗೊಳ್ಳುವವರಿಗೆ ಸಾಲ–ಸೌಲಭ್ಯ ಒದಗಿಸಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

'2021–22ನೇ ಸಾಲಿನಲ್ಲಿ ಬ್ಯಾಂಕ್‌ನಲ್ಲಿ ಸುಮಾರು ₹4,621 ಕೋಟಿಗೂ ಅಧಿಕ ವಹಿವಾಟು ನಡೆದಿದೆ. ಕೋವಿಡ್ ನಡುವೆಯೂ ₹602 ಕೋಟಿಗೂ ಅಧಿಕ ಠೇವಣಿ ಸಂಗ್ರಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ₹14.12 ಕೋಟಿಗೂ ಹೆಚ್ಚು ಲಾಭ ಗಳಿಸಲಾಗಿದೆ' ಎಂದೂ ಹೇಳಿದೆ.

ನಗರದಲ್ಲಿ ಇಂದು

ಪಟ್ಟದಮ್ಮ ದೇವಿ ಜಾತ್ರಾ ಮಹೋತ್ಸವ: ದೇವರ ಮೆರವಣಿಗೆ, ಸ್ಥಳ–ದೇವಸ್ಥಾನದ ಆವರಣ, ನಾಗರಬಾವಿ ಮುಖ್ಯರಸ್ತೆ, ಜ್ಯೋತಿ ನಗರ, ಬೆಳಿಗ್ಗೆ 8ರಿಂದ

ಮಹಾ ಸಂಪ್ರೋಕ್ಷಣ ಮಹೋತ್ಸವ: ವೈದಿಕ ಕಾರ್ಯಕ್ರಮ ಮತ್ತು ಕಲಶ ಸ್ಥಾಪನೆ, ಆಯೋಜನೆ ಮತ್ತು ಸ್ಥಳ–ತಿರುಮಲ ತಿರುಪತಿ ದೇವಸ್ಥಾನ, ವೈಯಾಲಿಕಾವಲ್, ಬೆಳಿಗ್ಗೆ 8.30ರಿಂದ

ಕಲ್ಯಾಣಮ್ಮ ಮತ್ತು ಕೆ.ಟಿ.ಬನಶಂಕರಮ್ಮ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ–ಕೆ.ಮೋಹನ್ ದೇವ್ ಆಳ್ವ, ಪ್ರಶಸ್ತಿ ಪ್ರದಾನ–ಸಿ.ಜಿ. ಶ್ರೀನಿವಾಸ್, ಅತಿಥಿ–ಬಿ.ವಿ.ಸುಬ್ಬರಾವ್, ಪುರಸ್ಕೃತರು–ಇಂದಿರಾ ಕೃಷ್ಣಪ್ಪ, ಎಚ್. ವಿ.ನಾಗರಾಜ್, ಆಯೋಜನೆ ಮತ್ತು ಸ್ಥಳ–ಅಖಿಲ ಕರ್ನಾಟಕ ಮಕ್ಕಳ ಕೂಟ, ಬೆಳಿಗ್ಗೆ 10

ಆಚಾರ್ಯತ್ರಯರ ಜಯಂತ್ಯುತ್ಸವ: ಸಪ್ತರ್ಷಿ ಪ್ರಶಸ್ತಿ ಪ್ರದಾನ, ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಶಿವರಾಂ ಹೆಬ್ಬಾರ್, ಆಯೋಜನೆ–ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ಶಾಂತವೀರ ಸ್ವಾಮೀಜಿ ಅವರ ಶಿವಗಣರಾಧನೆ ಮತ್ತು ನುಡಿನಮನ: ಸಾನ್ನಿಧ್ಯ–ಶಿವಮೂರ್ತಿ ಮುರುಘಾ ಶರಣರು, ನೇತೃತ್ವ–ಶಿವರುದ್ರ ಸ್ವಾಮೀಜಿ, ಮುಮ್ಮಡಿ ಶಿವರುದ್ರ ಸ್ವಾಮೀಜಿ, ವಿವಿಧ ಸ್ವಾಮೀಜಿಗಳಿಂದ ನುಡಿನಮನ, ಆಯೋಜನೆ–ಕೊಳದ ಮಠ ಮಹಾಸಂಸ್ಥಾನ, ಸ್ಥಳ–ಆತ್ಮಶ್ರೀ ಮಂಟಪ, ಮಠದ ಆವರಣ, ಎಚ್.ಸಿದ್ಧಯ್ಯ ರಸ್ತೆ, ಬೆಳಿಗ್ಗೆ 10.30

ಎಂ.ಚಿದಾನಂದಮೂರ್ತಿ ಜನ್ಮದಿನ: ಉದ್ಘಾಟನೆ–ಹಂ.ಪ.ನಾಗರಾಜಯ್ಯ, ಅತಿಥಿಗಳು–ಫಾದರ್ ಸೈಮನ್ ಬರ್ತಲೋಮಿಯೊ, ರಾ.ನಂ. ಚಂದ್ರಶೇಖರ, ವ.ಚ.ಚನ್ನೇಗೌಡ, ರಫಾಯಲ್ ರಾಜ್, ಪ್ರಶಸ್ತಿ ಪುರಸ್ಕೃತರು–ಎಂ.ತಿಮ್ಮಯ್ಯ, ಬಿ.ಎನ್. ನರಸಿಂಹಮೂರ್ತಿ, ಆಯೋಜನೆ–ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಬೆಳಿಗ್ಗೆ 11

ಭೀಮೋತ್ಸವ–2022: ಅಕ್ಕೈ ಪದ್ಮಶಾಲಿ ಅವರಿಗೆ ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮತ್ತು ನಯನ ಸೂಡ



ಅಭಿನಯಿಸುವ 'ಅಕ್ಕಯ್ ಕರುಣೆಗೊಂದು ಸವಾಲು' ನಾಟಕ ಪ್ರದರ್ಶನ: ನಿರ್ದೇಶನ–ಬೇಲೂರು ರಘುನಂದನ, ಆಯೋಜನೆ–ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿ ಸಂಘ, ಸ್ಥಳ–ಕುವೆಂಪು ಸಭಾಂಗಣ, ಜಿಕೆವಿಕೆ, ಮಧ್ಯಾಹ್ನ 2ರಿಂದ

ಬೋಧಿ ಸಪ್ತಾಹದ ಉದ್ಘಾಟನೆ: ಅತಿಥಿಗಳು–ಮಗ್ಗವಿಹಾರಿ ಥೆರೊ, ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಆಯೋಜನೆ–ಮಹಾಬೋಧಿ ಸೊಸೈಟಿ, ಸ್ಥಳ–ಮಹಾಬೋಧಿ ಲೋಕಶಾಂತಿ ಬುದ್ಧವಿಹಾರ, ಗಾಂಧಿನಗರ, ಸಂಜೆ 4

ಊರಹಬ್ಬ ಮತ್ತು ಗ್ರಾಮದೇವತೆಗಳ ಮಹೋತ್ಸವ: ಆಯೋಜನೆ ಮತ್ತು ಸ್ಥಳ–ದೊಡ್ಡಮ್ಮ, ಗಂಗಮ್ಮ, ಮಾರಮ್ಮ, ಸೊಲ್ಲಾಪುರದಮ್ಮ ಮತ್ತು ನಂದೀಶ್ವರ ದೇವಾಲಯಗಳ ಟ್ರಸ್ಟ್, ಮರಿಯಪ್ಪನಪಾಳ್ಯ, ಸಂಜೆ 5.30ರಿಂದ

ನಿಧನ ವಾರ್ತೆ

ಪಂಡಿತ ಸುಧಾಕರ ಶರ್ಮ

ಬೆಂಗಳೂರು: ವೇದ, ವಿಜ್ಞಾನ ಮತ್ತು ವೈಚಾರಿಕ ತೆಯನ್ನು ಮೇಳೈಸಿ ಕೊಂಡಿದ್ದ ಪಂಡಿತ ಸುಧಾಕರ ಶರ್ಮ (64) ಅವರು ಸೋಮವಾರ ನಿಧನರಾದರು.



ಇವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. 'ಚಂದನ' ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಹೊಸ ಬೆಳಕು' ಕಾರ್ಯಕ್ರಮವನ್ನು ಸುಧಾಕರ ಶರ್ಮ ಅವರು ನಡೆಸಿಕೊಡುತ್ತಿದ್ದರು. 1973ರಿಂದಲೂ ಬೆಂಗಳೂರು ಆಕಾಶವಾಣಿಯ ನಾಟಕ ಕಲಾವಿದರಾಗಿದ್ದರು.

'ಮದುವೆ-ಏಕೆ-ಯಾವಾಗ-ಹೇಗೆ?', 'ಮೃತ್ಯುವೇ ನಮಸ್ಕಾರ', 'ಜ್ಯೋತಿಷಿಗಳೇ ಸತ್ಯದ ಕೊಲೆ ಮಾಡಬೇಡಿ!', 'ವಾಸ್ತು ಬೀಳದಿರಿ ಬೇಸ್ತು!"; 'ಜನಿವಾರದಲ್ಲಿ ಬ್ರಾಹ್ಮಣ್ಯ ವಿಲ್ಲ' ಕೃತಿಗಳನ್ನು ರಚಿಸಿದ್ದರು.

ಅವೈಜ್ಞಾನಿಕ ಸಂಪ್ರದಾಯಗಳನ್ನು ಅವರು ಬಲವಾಗಿ ವಿರೋಧಿಸುತ್ತಿದ್ದರು. ವೇದಗಳ ಕುರಿತಾದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದ ಅವರು, ವೇದ ಮಂತ್ರಗಳ ಅರ್ಥ ವಿವರಣೆ ಸಹಿತವಾಗಿ ಬ್ರಾಹ್ಮಣೇತರರು, ಮಹಿಳೆಯರು ಹಾಗೂ ಬಾಲಕಿಯರಿಗೂ ಉಪನಯನ ಸಂಸ್ಕಾರ ಮಾಡಿಸಿದ್ದರು. ಇವರ ಅಂತ್ಯಸಂಸ್ಕಾರ ನಗರದ ಚಾಮರಾಜಪೇಟೆಯಲ್ಲಿ ಸೋಮವಾರ ಸಂಜೆ ನಡೆಯಿತು.


ಮಳೆ: ಅಡಿಕೆ ತೋಟಕ್ಕೆ ಹಾನಿ

ದಾವಣಗೆರೆ: ಜಿಲ್ಲೆಯ ಜಗಳೂರು ತಾಲ್ಲೂಕಿನ ಬಿಳಿಚೋಡು ಹೋಬಳಿ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಭಾರಿ ಗಾಳಿ, ಮಳೆಯಿಂದಾಗಿ 67 ಎಕರೆಯಲ್ಲಿ ತೋಟಗಾರಿಕೆ ಬೆಳೆಗಳು ನಾಶವಾಗಿದ್ದು, 14 ಮನೆಗಳಿಗೆ ಹಾನಿಯಾಗಿದೆ.

ಖಾದ್ಯ ತೈಲ ಬೆಲೆ ಗಗನಕ್ಕೇರಿದ್ದರೂ ಶಿವಮೊಗ್ಗದಲ್ಲಿ ಭಾರಿ ಅಗ್ಗ

ಲೀಟರ್ ಅಡುಗೆ ಎಣ್ಣೆ ₹126!

• ಚಂದ್ರಹಾಸ ಹಿರೇಮಳಲಿ



ಪ್ರಜಾವಾಣಿ ವಿಶೇಷ

ಶಿವಮೊಗ್ಗ: ಉಕ್ರೇನ್ ಮೇಲೆ ರಷ್ಯಾ ಯುದ್ಧ ಸಾರಿದ ನಂತರ ಜಾಗತಿಕ ಮಟ್ಟದಲ್ಲಿ ಅಡುಗೆ ಎಣ್ಣೆಯ ಬೆಲೆ ಗಗನಕ್ಕೇರಿದ್ದರೂ, ಸಮಾಜ ಕಲ್ಯಾಣ ಇಲಾಖೆ ಅಧೀನದ ಜಿಲ್ಲೆಯ ಹಾಸ್ಟೆಲ್‌ಗಳಿಗೆ ಮಾತ್ರ ಅತ್ಯಂತ ಕಡಿಮೆ ಬೆಲೆಗೆ ಪೂರೈಕೆಯಾಗುತ್ತಿದೆ.

ವಿವಿಧ ಕಂಪನಿಗಳ ಸೂರ್ಯಕಾಂತಿ, ತಾಳೆ, ಶೇಂಗಾ ಎಣ್ಣೆ ಕೆಲವು ತಾಲ್ಲೂಕುಗಳಲ್ಲಿ ಲೀಟರ್‌ಗೆ ₹ 126ಕ್ಕೆ, ಕೆಲವೆಡೆ ₹ 136ಕ್ಕೆ ಪೂರೈಕೆ ಆಗುತ್ತಿದೆ. ಹಾಸ್ಟೆಲ್‌ಗಳಿಗೆ ಅಗ್ಗದ ದರದಲ್ಲಿ ಪೂರೈಸಲು ಗುತ್ತಿಗೆದಾರರು ಸಲ್ಲಿಸಿದ ಟೆಂಡರ್‌ಗೆ ಜಿಲ್ಲಾಡಳಿತವೂ ಅನುಮೋದನೆ ನೀಡಿದೆ.

ಅಡುಗೆ ಎಣ್ಣೆ ಸೇರಿದಂತೆ ದಿನಸಿ ಸಾಮಗ್ರಿಗಳು ಅತ್ಯಂತ ಕಡಿಮೆ ಬೆಲೆಗೆ ಪೂರೈಸುವುದಕ್ಕೆ ಸಂಬಂಧಿಸಿದ ಟೆಂಡರ್ ಪಟ್ಟಿ ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿದೆ.

ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ.ಗೆ ₹ 350 ಇರುವ ಕೆಂಪು ಮೆಣಸಿನ ಪುಡಿ ₹ 105ಕ್ಕೆ, ₹ 150 ಇರುವ ಡಾಲ್ಡಾ ₹ 80ಕ್ಕೆ, ₹ 65 ಇರುವ ಬ್ಲೀಚಿಂಗ್ ಪೌಡರ್ ₹ 25ಕ್ಕೆ, ₹ 165 ಇರುವ ಶೌಚಾಲಯ ಶುಚಿಗೊಳಿಸುವ ಹಾರ್ಪಿಕ್ ₹ 70ಕ್ಕೆ, ₹ 1,400 ಇರುವ ಮರಾಠಿ ಮೊಗ್ಗು ₹ 350ಕ್ಕೆ, ₹ 200 ಇರುವ ಸೋಂಪಿನ ಕಾಳು ₹ 50ಕ್ಕೆ, ₹ 60 ಇರುವ ಅಡುಗೆ ಸೋಡಾ ₹ 35ಕ್ಕೆ ಹಾಗೂ ₹ 30ಕ್ಕೆ ಇರುವ ಒಂದು ತೆಂಗಿನ ಕಾಯಿಯನ್ನು ₹ 14ಕ್ಕೆ ಪೂರೈಸಲಾಗುತ್ತಿದೆ.

ಮಾರುಕಟ್ಟೆಯಲ್ಲಿ ನಿತ್ಯ ಏರಿಕೆ ಆಗುತ್ತಿರುವ ತರಕಾರಿಗಳನ್ನೂ ಶೇ 50ರ ರಿಯಾಯಿತಿಯಲ್ಲಿ ಪೂರೈಸಲು ದರ ನಮೂದಿಸಲಾಗಿದೆ. ಕೆ.ಜಿ.ಗೆ ₹ 80 ಇರುವ ಬೆಳ್ಳುಳ್ಳಿ ₹ 40ಕ್ಕೆ, ₹ 1,800 ಇರುವ ಚಕ್ರಮೊಗ್ಗು ₹ 400ಕ್ಕೆ ದೊರಕುತ್ತಿದೆ. ಪ್ರಸಿದ್ಧ ಕಂಪನಿಗಳ ದಿನಸಿ ಸಾಮಗ್ರಿಗಳೂ ಗರಿಷ್ಠ ಮಾರಾಟ ದರಕ್ಕಿಂತಲೂ ಕಡಿಮೆ ಬೆಲೆಗೆ ಸಿಗುತ್ತಿವೆ. ₹ 445 ಇರುವ ಎಂಟಿಆರ್ ಸಾಂಬಾರು ಮಸಾಲ ಪೌಡರ್ ₹ 300ಕ್ಕೆ ನೀಡಲಾಗುತ್ತಿದೆ.

ಕೋಳಿಮಾಂಸ, ಮೊಟ್ಟೆಯನ್ನು ಮಾರುಕಟ್ಟೆ ದರಕ್ಕಿಂತ ಶೇ 30 ರಷ್ಟು ಕಡಿಮೆ ಬೆಲೆಗೆ ಪೂರೈಸಲಾಗುತ್ತಿದೆ. ರಾಗಿ, ಜೋಳದಹಿಟ್ಟು ಮಾಡಿಸುವ ಮಿಲ್ ದರಗಳೂ ಕಡಿಮೆ ಇವೆ. ಬಲ್ಬ್, ಫ್ಯಾನ್ ಸೇರಿ ವಿವಿಧ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನೂ ಕಡಿಮೆ ಬೆಲೆಗೆ ನಮೂದಿಸಲಾಗಿದೆ.

‘ಅಗ್ಗದ ದರ ನಮೂದಿಸಿ ಟೆಂಡರ್ ಪಡೆಯುವುದರ ಹಿಂದೆ ದೊಡ್ಡ ಲಾಬಿಯೇ ಇದೆ. ಯಾವ ವ್ಯಾಪಾರಿ ನಷ್ಟ ಮಾಡಿಕೊಂಡು ಸಾಮಗ್ರಿ ಪೂರೈಸಲು ಸಾಧ್ಯ? ಮಾರುಕಟ್ಟೆ ದರಕ್ಕಿಂತ ಅತ್ಯಂತ ಕಡಿಮೆ ನಮೂದಿಸುವ ಟೆಂಡರ್ ಪರಿಗಣಿಸಬಾರದು ಎಂದು ನಿರ್ದೇಶನ ನೀಡಿದ್ದರೂ ಮತ್ತೆ ಅದೇ ಪ್ರವೃತ್ತಿ ಮುಂದು ವರಿದಿದೆ’ ಎನ್ನುತ್ತಾರೆ ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಅಧಿಕಾರಿ ರಾಮಕೃಷ್ಣ.

ಕರ್ನಾಟಕ ಪಾರದರ್ಶಕ ಅಧಿನಿಯಮದನ್ವಯವೇ ಟೆಂಡರ್ ಕರೆಯಲಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯ ಆಹಾರ ಸಾಮಗ್ರಿ ಖರೀದಿ ಸಮಿತಿ ಅನುಮೋದನೆ ನೀಡಿದೆ.
ನಾಗರಾಜ್, ಉಪ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ

ಕಡಿಮೆ ಬೆಲೆಯ ವಂಚನೆ ಹೇಗೆ?

ಗುತ್ತಿಗೆದಾರರು ಕಡಿಮೆ ಬೆಲೆ ನಮೂದಿಸಿ ಟೆಂಡರ್ ಪಡೆದರೂ ಪೂರೈಕೆಯ ಲೆಕ್ಕದಲ್ಲಿ ವ್ಯತ್ಯಾಸ ಮಾಡುತ್ತಾರೆ. 500 ಲೀಟರ್ ಅಡುಗೆ ಎಣ್ಣೆ ಪೂರೈಸಿ, ಎರಡು ಸಾವಿರ ಲೀಟರ್‌ಗೂ ಅಧಿಕ ಲೆಕ್ಕ ತೋರಿಸಲಾಗುತ್ತದೆ. ಈ ಅಕ್ರಮದಲ್ಲಿ ಇಲಾಖೆಯ ಉನ್ನತಾಧಿಕಾರಿಗಳು, ಹಾಸ್ಟೆಲ್ ವಾರ್ಡನ್‌ಗಳು, ಇತರೆ ಸಿಬ್ಬಂದಿ ಭಾಗಿಯಾಗಿರುತ್ತಾರೆ. ಹಣ ಕೊಡದ ಟೆಂಡರ್‌ಗಳನ್ನು ಮಾನ್ಯ ಮಾಡುವುದೇ ಇಲ್ಲ. ಕೋಟ್ಯಂತರ ರೂಪಾಯಿ ವ್ಯವಹಾರ ನಡೆಯುತ್ತದೆ ಎನ್ನುತ್ತಾರೆ ಆಹಾರ ಪೂರೈಕೆ ಗುತ್ತಿಗೆದಾರ ಬಸಪ್ಪ.

ಪಠ್ಯಪುಸ್ತಕ ಪೂರೈಕೆ: ಶಿಕ್ಷಣ ಇಲಾಖೆ ಕ್ರಮಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಠ್ಯಪುಸ್ತಕಗಳನ್ನು ಪೂರೈಸಲು ವಿಳಂಬ ಮಾಡಿದರೆ ದಂಡ ವಿಧಿಸುವ ಶಿಕ್ಷಣ ಇಲಾಖೆ ಕ್ರಮಕ್ಕೆ ಮುದ್ರಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮುದ್ರಣ ಕಾಗದದ ತೀವ್ರ ಅಭಾವ ದಿಂದ ಪಠ್ಯ ಪುಸ್ತಕಗಳು ಸಕಾಲಕ್ಕೆ ಮುದ್ರಣವಾಗುವ ಸಾಧ್ಯತೆಗಳು ಕಡಿಮೆ. ಈ ಸಮಸ್ಯೆ ಬಗ್ಗೆ ಶಿಕ್ಷಣ ಸಚಿವರಿಗೂ ಮತ್ತು ಆಯುಕ್ತರಿಗೆ ತಿಳಿಸಲಾಗಿತ್ತು. ಆದರೂ, ಸಚಿವರು ಸಮಸ್ಯೆ ಇತ್ಯರ್ಥಗೊಳಿಸದೆ ದಂಡ ವಿಧಿಸುವುದಾಗಿ ಹೇಳಿದ್ದಾರೆ. ಇದು ಮುದ್ರಕರ ತಪ್ಪಲ್ಲ. ಕಾಗದವೇ ಇಲ್ಲದಿದ್ದರೆ ಪಠ್ಯಪುಸ್ತಕಗಳನ್ನು ಮುದ್ರಣ ಮಾಡುವುದು ಹೇಗೆ ಎಂದು ಮುದ್ರಕರು ಅಳಲು ತೋಡಿಕೊಂಡಿದ್ದಾರೆ.

ಸರ್ಕಾರ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಹೆಚ್ಚು ಸಮಯಾವ ಕಾಶ ನೀಡಬೇಕು. ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರದ ಜತೆ ಮಾತುಕತೆನಡೆಸಿ ‘ಎ’ ಗ್ರೇಡ್‌ನ ನಾಲ್ಕು ಮಿಲ್‌ಗಳನ್ನು ಬಳಸಿಕೊಳ್ಳಬೇಕು. ಉತ್ತರ ಭಾರತದಲ್ಲೂ ನಾಲ್ಕೈದು ಮಿಲ್‌ಗಳಿವೆ. ಇವುಗಳಿಂದಲೂ ಪೂರೈಸಲು ನೆರವಾಗಬೇಕು. ಇದರಿಂದ, ಕಡಿಮೆ ಅವಧಿಯಲ್ಲಿ ಸರಬರಾಜು ಮಾಡಬಹುದು ಎಂದು ಅಭಿಮಾನಿ ಪ್ರಕಾಶನದ ಸಿಇಒ ಶ್ರೀನಿವಾಸ್ ಹೇಳಿದ್ದಾರೆ.

‘ನಿಯಮಗಳನ್ನು ಪಾಲಿಸುತ್ತಿದ್ದೇವೆ’

‘ಪಠ್ಯಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ನಿಯಮಗಳನ್ನು ಪಾಲಿಸುತ್ತಿದೆ. ರಾಜ್ಯದವರಿಗೆ ಆದ್ಯತೆ ನೀಡುವ ದೃಷ್ಟಿಯಿಂದ ಜಾಗತಿಕ ಟೆಂಡರ್ ಕರೆಯುವುದನ್ನು ಸಹ ಕೈಬಿಟ್ಟಿದೆ. ಇದರಿಂದ, ಸ್ಥಳೀಯರಿಗೆ ಅನುಕೂಲವಾಗಿದೆ. ಕಾಗದ ಪೂರೈಕೆ ಸಮಸ್ಯೆ ಷರತ್ತುಗಳಲ್ಲಿ ಇರಲಿಲ್ಲ. ಮುದ್ರಕರು ತಮ್ಮ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿದರೆ ಮುಖ್ಯಮಂತ್ರಿ ಜತೆ ಚರ್ಚಿಸಬಹುದು’ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.

ದೇಗುಲಗಳಲ್ಲಿ ಹನುಮಾನ್ ಚಾಲೀಸಾ, ಭಜನೆ

ಪ್ರಜಾವಾಣಿ ವಾರ್ತೆ





ದಾವಣಗೆರೆಯ ವಿನೋಬನಗರದ ಗಣಪತಿ ದೇವಸ್ಥಾನದ ಮುಂಭಾಗದಲ್ಲಿ ಶ್ರೀರಾಮಸೇನೆ ಸ್ಥಳೀಯ ಮುಖಂಡ ಮಣಿ ನೇತೃತ್ವದಲ್ಲಿ ಆಜಾನ್‌ಗೆ ಪ್ರತಿಯಾಗಿ ಹನುಮಾನ್ ಚಾಲೀಸಾ ಪಠಣೆ ನಡೆಯಿತು (ಎಡಚಿತ್ರ) ಕಲಬುರಗಿ ನಗರದಲ್ಲಿ ಸೂಪರ್ ಮಾರ್ಕೆಟ್ ಬಳಿ ಇರುವ ಮಸೀದಿಗೆ ಸೋಮವಾರ ದಲಿತ ಸೇನೆ ವಿವಿಧ ದಲಿತ ಪರ ಸಂಘಟನೆಗಳ ಕಾರ್ಯಕರ್ತರು ಕಾವಲು ನಿಂತಿರುವುದು —ಪ್ರಜಾವಾಣಿ ಚಿತ್ರಗಳು

ದಾವಣಗೆರೆ: ಇಲ್ಲಿನ ವಿನೋಬನಗರದ ಗಣಪತಿ ಮತ್ತು ಆಂಜನೇಯ ದೇವಸ್ಥಾನದಲ್ಲಿ ಸಂಜೆ 6ರಿಂದ 6.10ರ ವರೆಗೆ ಹನುಮಾನ್ ಚಾಲೀಸಾ ಅಲ್ಲದೇ ಡೊಳ್ಳು, ನಾದಸ್ವರ, ಮೇಳ, ತಮಟೆ ಇನ್ನಿತರ ವಾದ್ಯಗಳನ್ನು ನುಡಿಸಲಾಯಿತು. ದೇವಸ್ಥಾನದ ಗೋಪುರಕ್ಕೆ ಮೈಕ್ ಕಟ್ಟಲಾಗಿತ್ತು.

ಪೊಲೀಸರು ಬಂದು ವಾದ್ಯ ನುಡಿಸದಂತೆ ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ. ‘ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಮಸೀದಿಗಳಲ್ಲಿ ಧ್ವನಿವರ್ಧಕ ಬಳಸಿ ಆಜಾನ್ ಮಾಡುತ್ತಿದ್ದಾರೆ. ಹೀಗಾಗಿ ನಾವೂ ಹನುಮಾನ್ ಚಾಲೀಸಾ ಹಾಕುತ್ತಿದ್ದೇವೆ’ ಎಂದರು.

‘ವಿನೋಬನಗರದಲ್ಲಿ ಸುತ್ತಮುತ್ತ ನಾಲ್ಕೈದು ಮಸೀದಿಗಳಿದ್ದು, ಎಲ್ಲ ಕಡೆ ಆಜಾನ್ ಕೇಳುತ್ತದೆ’ ಎಂದು ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್ ತಿಳಿಸಿದರು.

‘ಕಾನೂನು ಎಲ್ಲರಿಗೂ ಒಂದೇ’: ಪಾವಗಡ (ತುಮಕೂರು) ವರದಿ: ಇಲ್ಲಿಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಶ್ರೀರಾಮ ಸೇನೆ ಪದಾಧಿಕಾರಿಗಳು ಧ್ವನಿವರ್ಧಕದಲ್ಲಿ ಹನುಮಾನ್ ಚಾಲೀಸಾ ಪಠಿಸಿದರು.

‘ಕಾನೂನು ಎಲ್ಲರಿಗೂ ಒಂದೇ. ಸುಪ್ರೀಂ ಕೋರ್ಟ್ ಆದೇಶ ಪಾಲಿಸಿ ಶಬ್ದ ಕಡಿಮೆ ಮಾಡಿದ ನಂತರ ನಾವೂ ಶಬ್ದ ಕಡಿಮೆ ಮಾಡುತ್ತೇವೆ. ಇಲ್ಲವಾದರೆ ಇದು ಮುಂದುವರಿಯುತ್ತಲೇ ಇರುತ್ತದೆ’ ಎಂದು ಶ್ರೀರಾಮಸೇನೆ ತಾಲ್ಲೂಕು ಘಟಕದ ಅಧ್ಯಕ್ಷ ಕಾವಲಗೆರೆ ರಾಮಾಂಜಿ ಹೇಳಿದರು.

ಆಜಾನ್‌ಗೆ ಪ್ರತಿಯಾಗಿ ಭಜನೆ, ಸುಪ್ರಭಾತ

ಹುಬ್ಬಳ್ಳಿ ವರದಿ: ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲೂ ವಿವಿಧೆಡೆ ದೇವಸ್ಥಾನ, ಗುಡಿಗಳಲ್ಲಿ ಭಜನೆ ಮಾಡಿ, ಪೂಜೆ ಸಲ್ಲಿಸಿ, ಧ್ವನಿವರ್ಧಕ ಬಳಸಿ ಹನುಮಾನ್ ಚಾಲೀಸಾ ಪಠಿಸಿದರು.

ಇತ್ತೀಚೆಗೆ ಗಲಭೆ ನಡೆದಿದ್ದ ಹಳೇಹುಬ್ಬಳ್ಳಿ ಪೊಲೀಸ್ ಠಾಣೆ ಸಮೀಪದ ದಿಡ್ಡಿ ಹನುಮಂತ ದೇವಸ್ಥಾನ, ಜಂಗ್ಲಿಪೇಟೆಯ ಬಸವಣ್ಣ ಗುಡಿ, ಬನ್ನಿಮಹಾಕಾಳಿ ದೇವಸ್ಥಾನ ಹಾಗೂ ಸಿದ್ಧಾರೂಢಮಠದಲ್ಲಿ ಶ್ರೀರಾಮ ಸೇನೆ ಕಾರ್ಯಕರ್ತರು ಧ್ವನಿವರ್ಧಕ ಬಳಸಿ ಭಜನೆ ಮಾಡಿದರು.

‘20 ಮಂದಿಯ ಎರಡು ತಂಡ ರಚಿಸಿಕೊಂಡು ಬೆಳಿಗ್ಗೆ 5ರಿಂದ 6ರವರೆಗೆ ಧ್ವನಿವರ್ಧಕದ ಮೂಲಕ ಭಜನೆ ಮಾಡಿದ್ದೇವೆ’ ಎಂದು ಶ್ರೀರಾಮ ಸೇನೆ ಕಾರ್ಯಕರ್ತರು ಹೇಳಿದರು.

ಧಾರವಾಡ, ಬೆಳಗಾವಿಯ ಹನುಮಾನ್ ಮಂದಿರ, ವಿಜಯಪುರದ ಮರಡಿ ಬಸವೇಶ್ವರ ದೇವಸ್ಥಾನ ಹಾಗೂ ಬಾದಾಮಿಯ ವೀರಾಂಜನೇಯ ದೇವಸ್ಥಾನ, ಹೊಸಪೇಟೆಯ ಪಾದಗಟ್ಟೆ ಆಂಜನೇಯ ದೇವಸ್ಥಾನ, ಗದಗ ನಗರದಲ್ಲಿ ವಿವಿಧ 16 ದೇವಸ್ಥಾನಗಳಲ್ಲಿ ಭಜನೆ ಮೊಳಗಿತು.

ಮೈಸೂರಿನಲ್ಲಿ ಮುತಾಲಿಕ್ ‘ಓಂಕಾರ’

ಮೈಸೂರು/ಮಂಡ್ಯ: ಮದ್ದೂರಿನಲ್ಲಿ ಸುಪ್ರಭಾತ, ಭಜನೆ ನಡೆಸುವುದಾಗಿ ಹೇಳಿದ್ದ ಶ್ರೀರಾಮಸೇನೆ ಮುಖಂಡ ಪ್ರಮೋದ್ ಮುತಾಲಿಕ್, ಕೊನೇ ಮೈಸೂರಿನ ಶಿವರಾಂಪೇಟೆಯ ಆಂಜನೇಯ ಸ್ವಾಮಿ ದೇಗುಲದಲ್ಲಿ ನಸುಕಿನ 5 ಗಂಟೆಗೆ ಸುಪ್ರಭಾತ, ಓಂಕಾರ ಮೊಳಗಿಸಿದರು.

‘ಸುಪ್ರಭಾತ ಪಠಣ ಮಾಡಲು ಮದ್ದೂರಿನ ದೇವಾಲಯದ ಆಡಳಿತ ಮಂಡಳಿ ಸದಸ್ಯರು ಒಪ್ಪದ ಕಾರಣ ಕಾರ್ಯಕ್ರಮವನ್ನು ಮೈಸೂರಿಗೆ ಸ್ಥಳಾಂತರಿಸಿದರು’ ಎಂಬ ವಿಷಯ ಈಗ ಚರ್ಚೆಗೆ ಗ್ರಾಸವಾಗಿದೆ.

ಮಂಡ್ಯದಲ್ಲಿ ಭಾನುವಾರ ಭಜರಂಗಸೇನೆ ಅಭ್ಯಾಸವರ್ಗದಲ್ಲಿ ಪಾಲ್ಗೊಂಡಿದ್ದ ಮುತಾಲಿಕ್, ‘ರಾಜ್ಯದ ಸಾವಿರ ದೇವಾಲಯಗಳಲ್ಲಿ ಸುಪ್ರಭಾತ ಪಠಣ ನಡೆಯಲಿದ್ದು, ಮದ್ದೂರಿನ ದೇವಾಲಯದಿಂದ ಚಾಲನೆ ನೀಡಲಾಗುವುದು’ ಎಂದಿದ್ದರು. ದೇವಾಲಯದ ಹೆಸರು ಹೇಳಿರಲಿಲ್ಲ.

ಮೈಸೂರಿನಲ್ಲಿ ಅವರೇ ಮೈಕ್ ಆನ್ ಮಾಡಿ ಅಭಿಯಾನಕ್ಕೆ ಚಾಲನೆ ನೀಡಿದರು. ನಂತರ ಸುಮಾರು ಒಂದು ಗಂಟೆ ಶ್ರೀರಾಮ, ಶಿವನ ಭಜನೆ ನಡೆಯಿತು. ಹಿಂದೂ ಸಂಘಟನೆಗಳ ಕಾರ್ಯಕರ್ತರು ಮಂತ್ರ ಪಠಿಸಿ ಜೈಕಾರ ಹಾಕಿದರು. ಮುಂಜಾಗ್ರತೆಯಾಗಿ ಬಿಗಿಭದ್ರತೆ ವಹಿಸಲಾಗಿತ್ತು.

ಮಸೀದಿಗೆ ದಲಿತ ಸೇನೆ ಕಾವಲು

ಕಲಬುರಗಿ: ಮಸೀದಿಗಳಲ್ಲಿ ಆಜಾನ್ ಮಾಡುವುದಕ್ಕೆ ಪ್ರತಿಯಾಗಿ ಹನುಮಾನ್ ಮಂದಿರದ ಬಳಿ ಭಜನೆ ಮಾಡುತ್ತ ಹೊರಟಿದ್ದ ಶ್ರೀರಾಮ ಸೇನೆಯ ಕಾರ್ಯಕರ್ತರನ್ನು ಪೊಲೀಸರು ಇಲ್ಲಿನ ಜಗತ್ ವೃತ್ತದಲ್ಲಿ ವಶಕ್ಕೆ ಪಡೆದರು. ಮತ್ತೊಂದೆಡೆ ಸೂಪರ್ ಮಾರ್ಕೆಟ್ ಬಳಿ ಇರುವ ಮಸೀದಿಗೆ ದಲಿತ ಸೇನೆ ಕಾರ್ಯಕರ್ತರು ಹಾಗೂ ಪೊಲೀಸರು ಕಾವಲಾಗಿದ್ದರು.

ದೇವಸ್ಥಾನಗಳಲ್ಲಿ ಭಜನೆ, ಹನುಮಾನ್ ಚಾಲೀಸಾ ಪಠಿಸುವಂತೆ ಶ್ರೀರಾಮಸೇನೆ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ಕರೆಗೆ ಸ್ಪಂದಿಸಿ ಕಾರ್ಯಕರ್ತರು ಹನುಮಾನ್ ಮಂದಿರದ ಬಳಿ ತೆರಳುತ್ತಿದ್ದರು.

‘ಕೋಮುಗಲಭೆಯ ಉದ್ದೇಶದಿಂದ ಶ್ರೀರಾಮಸೇನೆ ಸಂಘಟನೆ ಇಂತಹ ವಿವಾದ ಸೃಷ್ಟಿಗೆ ಮುಂದಾಗಿದೆ. ಶ್ರೀರಾಮ ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಆಂದೋಲಾ ಸಿದ್ದಲಿಂಗ ಸ್ವಾಮೀಜಿ ಅವರನ್ನು ಬಂಧಿಸಬೇಕು’ ಎಂದು ದಲಿತ ಸೇನೆ ಸಂಘಟನೆಯ ಅಧ್ಯಕ್ಷ ಹಣಮಂತ ಯಳಸಂಗಿ ಒತ್ತಾಯಿಸಿದರು.

ಯಾದಗಿರಿಯ ಬಸವೇಶ್ವರ ಮಂದಿರದಲ್ಲಿ ಹನುಮಾನ್ ಚಾಲೀಸಾ ಪಠಣ, ಏಕದಂಡಿಗೆ ಮಠದಲ್ಲಿ ಸುಪ್ರಭಾತ ಅಭಿಯಾನ ನಡೆಯಿತು. ಕೊಪ್ಪಳ ಜಿಲ್ಲೆ ಕಾರಟಗಿಯ ಕೋಟೆ ಆಂಜನೇಯ ದೇವಸ್ಥಾನದಲ್ಲಿ ಹನುಮಾನ್ ಚಾಲೀಸಾ ಪಠಿಸಿದರು.

ಧ್ವನಿವರ್ಧಕ ಬಳಕೆ: ಹೊಸ ಸುತ್ತೋಲೆ

ಒಂದನೇ ಪುಟದಿಂದ

ಗೃಹ ಇಲಾಖೆ ಮತ್ತು ಕಾನೂನು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರ ಉನ್ನತ ಮಟ್ಟದ ಸಭೆ ನಡೆಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಧ್ವನಿವರ್ಧಕಗಳ ಬಳಕೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶವನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಚರ್ಚಿಸಿದರು.ಸುಪ್ರೀಂಕೋರ್ಟ್‌ಆದೇಶ,ನಂತರ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶ ಹಾಗೂ 2002ರಲ್ಲಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಆಧಾರವಾಗಿಟ್ಟುಕೊಂಡು ಹೊಸ ಸುತ್ತೋಲೆ ಹೊರಡಿಸುವ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, ‘ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿವರ್ಧಕ ಬಳಕೆ ನಿಯಂತ್ರಣ ಕುರಿತು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ. 2002ರಲ್ಲಿ ರಾಜ್ಯ ಸರ್ಕಾರವೂ ಒಂದು ಆದೇಶ ಹೊರಡಿಸಿತ್ತು. ಅವುಗಳನ್ನು ಅತ್ಯಂತ ಸೌಹಾರ್ದಯುತವಾಗಿ ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿವರ್ಧಕವನ್ನು ಹೇಗೆ ಬಳಸಬೇಕು ಎಂಬುದಕ್ಕೆ ಸುಪ್ರೀಂಕೋರ್ಟ್ ಆದೇಶವಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಶಿಫಾರಸಿನಂತೆ ಕೇಂದ್ರ ಸರ್ಕಾರವೂ ಆದೇಶ ಹೊರಡಿಸಿದೆ. ಇವೆಲ್ಲವನ್ನೂ ಜಾರಿಗೊಳಿಸಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಮುಸ್ಲಿಂ ಶಾಸಕರಿಂದ ಸಿಎಂ ಭೇಟಿ

ಬೆಂಗಳೂರು: ಕಾಂಗ್ರೆಸ್‌ನ ಮುಸ್ಲಿಂ ಶಾಸಕರು ಮತ್ತು ರಾಜ್ಯಸಭೆ ಸದಸ್ಯರ ನಿಯೋಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸೋಮವಾರ ಭೇಟಿಮಾಡಿ, ಆಜಾನ್- ಹನುಮಾನ್ ಚಾಲೀಸಾ ಹೆಸರಿನಲ್ಲಿ ಸಮಾಜದಲ್ಲಿ ಶಾಂತಿ ಕದಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿತು.

ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ರಾಜ್ಯಸಭೆ ಸದಸ್ಯ ಡಾ. ಸೈಯದ್ ನಾಸೀರ್ ಹುಸೇನ್, ಶಾಸಕ ಎನ್.ಎ. ಹ್ಯಾರಿಸ್ ಮತ್ತು ವಿಧಾನ ಪರಿಷತ್ ಸದಸ್ಯ ಅಬ್ದುಲ್ ನಜೀರ್ ನಿಯೋಗದಲ್ಲಿದ್ದರು. ಸುಪ್ರೀಂ ಕೋರ್ಟ್ ಆದೇಶ ಪಾಲನೆಗೆ ಎಲ್ಲ ಮಸೀದಿಗಳೂ ಸಿದ್ಧವಾಗಿವೆ ಎಂದು ನಿಯೋಗದ ಸದಸ್ಯರು ತಿಳಿಸಿದರು. ಬಳಿಕ ಮಾತನಾಡಿದ ಖಾದರ್, ‘ಶ್ರೀರಾಮ ಸೇನೆ ವಿರುದ್ಧ ನಾವು ಹೋರಾಟ ಮಾಡುವುದಿಲ್ಲ. ಶಾಂತಿಗೆ ಭಂಗ ತರುವವರ ವಿರುದ್ಧ ಕ್ರಮಜರುಗಿಸುವುದಾಗಿ ಸಿಎಂ ಹೇಳಿದ್ದಾರೆ ಎಂದರು.

ಧರ್ಮದ ಹೆಸರಿನಲ್ಲಿ ದ್ವೇಷ ಬಿತ್ತಿ, ಶಾಂತಿ, ಸೌಹಾರ್ದ ಕದಡುವವರು ಭಯೋತ್ಪಾದಕರು. ಆಜಾನ್ ವಿರೋಧಿಸಿ ಅಭಿಯಾನ ನಡೆಸುವವರು ಅದೇ ವರ್ಗ ದವರು
ಬಿ.ಕೆ.ಹರಿಪ್ರಸಾದ್
ಮೇಲ್ಮನೆ ವಿರೋಧ ಪಕ್ಷದ ನಾಯಕ

ಆಜಾನ್ ನೀಡಲು ಧ್ವನಿವರ್ಧಕ ಬಳಸುವ ವಿಷಯವನ್ನು ಕೆಲವರು ಉದ್ದೇಶಪೂರ್ವಕವಾಗಿ ಕೆದಕಿ ಜಗಳ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರದ ವೈಫಲ್ಯವೇ ಇದಕ್ಕೆ ಕಾರಣ
ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ

‘ಎಂಎಲ್‌ಸಿ ಅವಧಿ ಮುಗಿದ ಬಳಿಕ ಜೆಡಿಎಸ್‌ಗೆ ವಿದಾಯ’

ಮಂಡ್ಯ: ‘ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರ ಧೋರಣೆಯಿಂದಾಗಿ ನಾಲ್ಕು ವರ್ಷಗಳಿಂದ ನಿತ್ಯ ಕಿರುಕುಳ, ಹಿಂಸೆ ಅನುಭವಿಸುತ್ತಿದ್ದೇನೆ’ ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನನ್ನ ಮಾತು, ಸಲಹೆಗಳಿಗೆ ಕಿಂಚಿತ್ತೂ ಬೆಲೆ ಇಲ್ಲ. ಇವರ ವರ್ತನೆಯಿಂದ ಬೇಸರವಾಗಿದೆ. ನನ್ನ ಅವಧಿ ಮುಗಿಯುವವರೆಗೆ ಜೆಡಿಎಸ್‌ನಲ್ಲಿ ಇರುತ್ತೇನೆ. ಬಳಿಕ ಹಿತೈಷಿಗಳ ಜೊತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ’ ಎಂದರು.

‘ನೇರ ದತ್ತು–ಪೋಷಣೆ ಅಪರಾಧವಲ್ಲ’

ಬೆಂಗಳೂರು: ‘ಮಗುವನ್ನು ಪೋಷಕರಿಂದ ನೇರವಾಗಿ ದತ್ತು ಪಡೆದು ಪೋಷಿಸುವುದು ಬಾಲ ನ್ಯಾಯ ಕಾಯ್ದೆ–2015ರ ಕಲಂ 80ರಡಿ ಅಪರಾಧವಲ್ಲ’ ಎಂದು ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

‘ನಿಯಮ ಪಾಲಿಸದೆ ನೇರವಾಗಿ ಪೋಷಕರಿಂದ ದತ್ತು ತೆಗೆದುಕೊಂಡು ಮಗುವನ್ನು ಸಾಕುತ್ತಿದ್ದಾರೆ’ ಎಂದು ದೂರಿದ್ದ ಪ್ರಕರಣವನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ರದ್ದುಗೊಳಿಸಿದೆ.

ಈ ಸಂಬಂಧ, ‘ದತ್ತು ಪಡೆಯುವಾಗ ನಿಯಮ ಉಲ್ಲಂಘಿಸಲಾಗಿದೆ ಎಂದು ನಮ್ಮ ವಿರುದ್ಧ ಹೂಡಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಗಂಗಾವತಿ ತಾಲ್ಲೂಕಿನ ಬನ್ನಿಗಿಡ ಕ್ಯಾಂಪ್ ನಿವಾಸಿ ಬಾನು ಬೇಗಂ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿದೆ.

‘ಬಾಲ ನ್ಯಾಯ ಕಾಯ್ದೆ–2015 ರ (ಆರೈಕೆ ಮತ್ತು ಮಕ್ಕಳ ರಕ್ಷಣೆ) ಕಲಂ 80ರ ಅಡಿಯಲ್ಲಿ; ಮಗು ಅನಾಥವಾಗಿದ್ದರೆ, ನಿರಾಶ್ರಿತವಾಗಿದ್ದರೆ ಅಥವಾ ಬಾಲಮಂದಿರಗಳಿಗೆ ಒಪ್ಪಿಸಿರುವ ಮಗುವಾಗಿದ್ದರೆ ಅಂತಹ ಮಗುವನ್ನು ದತ್ತು ಪಡೆಯಬೇಕಾದ ಸಂದರ್ಭಗಳಲ್ಲಿ ಮಾತ್ರ ನಿಯಮಗಳು ಅನ್ವಯವಾಗುತ್ತವೆ’ ಎಂದು ನ್ಯಾಯಪೀಠ ವಿವರಿಸಿದೆ.

ಜಿ.ಪಂ. ಸಿಇಒಗಳ ಸಭೆಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ

‘ಬಜೆಟ್ ಅನುಷ್ಠಾನದಲ್ಲಿ ವಿಳಂಬಕ್ಕೆ ಅವಕಾಶವಿಲ್ಲ’

ಪ್ರಜಾವಾಣಿ ವಾರ್ತೆ



ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಜತೆ ಸಭೆ ನಡೆಸಿದರು. ಸಚಿವರಾದ ಗೋವಿಂದ ಕಾರಜೋಳ, ಸಿ.ಸಿ. ಪಾಟೀಲ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಬಜೆಟ್ ಘೋಷಣೆಗಳ ಅನುಷ್ಠಾನದಲ್ಲಿ ವಿಳಂಬಕ್ಕೆ ಅವಕಾಶವಿಲ್ಲ. ಹತ್ತು ತಿಂಗಳ ಕಾಲಮಿತಿಯಲ್ಲೇ ಬಜೆಟ್ ಅನುಷ್ಠಾನಕ್ಕೆ ಸಿದ್ಧರಾಗಬೇಕು ಎಂದು ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ (ಸಿಇಒ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳ ತ್ವರಿತ ಅನುಷ್ಠಾನ ಕುರಿತು ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿಗಳ ಸಿಇಒಗಳ ಜತೆ ಸೋಮವಾರ ಸಭೆ ನಡೆಸಿದ ಅವರು, ‘ಎಲ್ಲರನ್ನೂ ನಾನು ಗಮನಿಸುತ್ತಿದ್ದೇನೆ. ಸಾರ್ವಜನಿಕರಿಗೆ ಅನುಕೂಲವಾಗುವ ರೀತಿ ಕೆಲಸ ಮಾಡಿದರೆಸರ್ಕಾರನಿಮ್ಮಜತೆಇರುತ್ತದೆ. ವಿಳಂಬ ಮಾಡುವವರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದರು.

ಜಿಲ್ಲಾ ಪಂಚಾಯಿತಿಗಳ ಸಿಇಒಗಳು ಸ್ವತಂತ್ರವಾಗಿ ಕೆಲಸ ಮಾಡಬೇಕು. ಎಲ್ಲ ವಿಚಾರಗಳಲ್ಲೂ ನಿರ್ದೇಶನಕ್ಕಾಗಿ ಕಾಯಬಾರದು. ಗ್ರಾಮ ಪಂಚಾಯಿತಿಗಳ ಆಡಳಿತದ ಮೇಲೆ ಹಿಡಿತ ಇಟ್ಟುಕೊಳ್ಳಬೇಕು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಶಿಸ್ತಿನಿಂದ ಕೆಲಸ ಮಾಡುವಂತೆ ನಿಗಾ ಇರಿಸಬೇಕು ಎಂದು ತಾಕೀತು ಮಾಡಿದರು.

ವಸತಿ ಯೋಜನೆಗಳು, ಪಡಿತರ ವಿತರಣೆ, ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣ, ಶಾಲೆ ಹಾಗೂ ಅಂಗನವಾಡಿಗಳ ಕಟ್ಟಡ ನಿರ್ಮಾಣ, ರಸ್ತೆ ಮತ್ತು ಸೇತುವೆಗಳ ಕಾಮಗಾರಿಗಳಲ್ಲಿ ವಿಳಂಬ ಆಗದಂತೆ ಎಚ್ಚರ ವಹಿಸಬೇಕು. ಗ್ರಾಮ ಒನ್ ಕೇಂದ್ರಗಳ ಆರಂಭಕ್ಕೆ ವಿಶೇಷ ಆಸಕ್ತಿ ತೋರಬೇಕು ಎಂದರು.

ತಿಂಗಳ ಗಡುವು: ಜಲ ಜೀವನ್ ಮಿಷನ್ ಅಡಿಯಲ್ಲಿ ಕೈಗೊಂಡಿರುವ ಮೊದಲ ಹಂತದ ಕಾಮಗಾರಿಗಳನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸಬೇಕು. ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮುಖ್ಯ ಎಂಜಿನಿಯರ್‌ಗಳ ಬಳಿ ಬಾಕಿ ಇರುವ ಕಡತಗಳನ್ನು ಒಂದು ವಾರದೊಳಗೆ ವಿಲೇವಾರಿ ಮಾಡಬೇಕು ಎಂದು ಮುಖ್ಯಮಂತ್ರಿ ಗಡುವು ನೀಡಿದರು.

ಜಲ ಜೀವನ್ ಮಿಷನ್ ಎರಡನೇ ಹಂತದ ಕಾಮಗಾರಿಗಳನ್ನು ತ್ವರಿತವಾಗಿ ಆರಂಭಿಸಬೇಕು. ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಬೇಕು. ಯೋಜನೆಯ ಅನುಷ್ಠಾನದಲ್ಲಿ ದೂರುಗಳು ಬರದಂತೆ ಕೆಲಸ ಮಾಡಬೇಕು ಎಂದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಜಾರಿಗೆ ತಂದಿರುವ ಅಮೃತ ಗ್ರಾಮ ಪಂಚಾಯಿತಿ, ಅಮೃತ ಸರೋವರ ಯೋಜನೆಗಳ ಅನುಷ್ಠಾನಕ್ಕೆ ವೇಗ ನೀಡಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿ ಹೆಚ್ಚು ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು. ಅನುದಾನ ದುರ್ಬಳಕೆ ಆಗದಂತೆ ನಿಗಾ ವಹಿಸಬೇಕು. ಎಲ್ಲ ಯೋಜನೆಗಳಲ್ಲೂ ಕಾಮಗಾರಿ ಪೂರ್ಣಗೊಳಿಸಿ, ಬಿಲ್ ಪಾವತಿಯಾಗಿದ್ದರೆ ಮಾತ್ರವೇ ಪ್ರಗತಿಯಾಗಿದೆ ಎಂಬುದಾಗಿ ಪರಿಗಣಿಸಲಾಗುವುದು ಎಂದು ಹೇಳಿದರು.

ಸಚಿವರಾದ ಗೋವಿಂದ ಕಾರಜೋಳ, ಸಿ.ಸಿ. ಪಾಟೀಲ, ಉಮೇಶ ಕತ್ತಿ, ವಿ.ಸುನಿಲ್ ಕುಮಾರ್, ಬಿ.ಸಿ. ನಾಗೇಶ್, ಡಾ.ಕೆ. ಸುಧಾಕರ್, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಕೆಲವು ಜಿಲ್ಲಾ ಪಂಚಾಯಿತಿಗಳ ಸಿಇಒಗಳು ನೇರವಾಗಿ ಸಭೆಯಲ್ಲಿ ಭಾಗವಹಿಸಿದ್ದರು. ಉಳಿದವರು ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು.

‘ಎರಡೇ ಹಂತದ ಪರಿಶೀಲನೆ ಸಾಕು’

‘ವಿವಿಧ ವಸತಿ ಯೋಜನೆಗಳ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಮೂರು ಹಂತಗಳಲ್ಲಿ ಪರಿಶೀಲಿಸುವ ಅಗತ್ಯವಿಲ್ಲ. ಗ್ರಾಮ ಪಂಚಾಯಿತಿಯಿಂದ ಸಲ್ಲಿಸಿದ ಪಟ್ಟಿಯನ್ನು ತಾಲ್ಲೂಕು ಪಂಚಾಯಿತಿಯಲ್ಲಿ ಪರಿಶೀಲನೆ ನಡೆಸಿದ ಬಳಿಕ ನೇರವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಕಳುಹಿಸುವ ವ್ಯವಸ್ಥೆ ಮಾಡಬೇಕು’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

₹4 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಗ್ಯಾಲರಿಯ ಚಾವಣಿ

ಕಳಪೆ ಕಾಮಗಾರಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಸ್‌ಆರ್ ಲೇಔಟ್‌ನ ಸೆಕ್ಟರ್–2ರಲ್ಲಿ ನಿರ್ಮಿಸಲಾಗಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ಗ್ಯಾಲರಿಯ ಚಾವಣಿಯು ಭಾನುವಾರ ಸುರಿದ ಬಿರುಗಾಳಿ ಸಹಿತ ಮಳೆಗೆ ಕುಸಿದಿದ್ದು, ಇದಕ್ಕೆ ಕಳಪೆ ಕಾಮಗಾರಿಯೇ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ.


‘ಸುಮಾರು ₹4 ಕೋಟಿ ವೆಚ್ಚದಲ್ಲಿ ಗ್ಯಾಲರಿಯ ಚಾವಣಿ ನಿರ್ಮಿಸಲಾಗಿತ್ತು. ಮಾರ್ಚ್ 1ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದನ್ನು ಉದ್ಘಾಟಿಸಿದ್ದರು. ಲೋಕಾರ್ಪಣೆಗೊಂಡ ಎರಡೇ ತಿಂಗಳಲ್ಲಿ ಚಾವಣಿ ಮುರಿದು ಬಿದ್ದಿದೆ. ಮಳೆಯಿಂದಾಗಿ ಬಿಬಿಎಂಪಿ ಕಾಮಗಾರಿಯ ಗುಣಮಟ್ಟದ ಬಣ್ಣ ಬಯಲಾಗಿದೆ’ ಎಂದು ದೂರಿದ್ದಾರೆ.

‘ಗಾಳಿಯ ರಭಸಕ್ಕೆ ಕಬ್ಬಿಣದ ಕಂಬಗಳೇ ಮುರಿದಿವೆ. ಅಲ್ಲಲ್ಲಿ ಸಿಮೆಂಟ್ ಕೂಡ ಕಿತ್ತು ಹೋಗಿದೆ. ಗ್ಯಾಲರಿಯಲ್ಲಿ ಹಾಕಲಾಗಿದ್ದ ಟೈಲ್ಸ್‌ಗಳೂ ಮೇಲಕ್ಕೆದ್ದಿವೆ. ಕಾಮಗಾರಿಯು ಕಳಪೆ ಗುಣಮಟ್ಟದಿಂದ ಕೂಡಿರುವುದನ್ನು ಇವು ಸಾಕ್ಷೀಕರಿಸುವಂತಿವೆ. ಚಾವಣಿ ಕುಸಿತದಿಂದ ಕೆಲವರಿಗೆ ಸಣ್ಣಪುಟ್ಟ ಗಾಯಗಳೂ ಆಗಿವೆ’ ಎಂದು ತಿಳಿಸಿದ್ದಾರೆ.

‘ಒಟ್ಟು ₹140 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಚಾವಣಿ ನಿರ್ಮಾಣಕ್ಕಾಗಿಯೇ ₹4 ಕೋಟಿ ವಿನಿಯೋಗಿಸಲಾಗಿದೆ. ಕಾಮಗಾರಿಯಲ್ಲಿ ಶೇ 40ರಷ್ಟು ಕಮಿಷನ್ ವ್ಯವಹಾರ ನಡೆದಿರುವುದು ಸ್ಪಷ್ಟವಾಗಿದೆ. ಕಳಪೆ ಕಾಮಗಾರಿಯ ಸಂಪೂರ್ಣ ಹೊಣೆಯನ್ನು ಬೊಮ್ಮನಹಳ್ಳಿ ಶಾಸಕ ಎಂ. ಸತೀಶ್ ರೆಡ್ಡಿ ಅವರೇ ಹೊರಬೇಕು’ ಎಂದು ಸ್ಥಳೀಯರಾದ ಕವಿತಾ ರೆಡ್ಡಿ ಒತ್ತಾಯಿಸಿದ್ದಾರೆ.

‘ಶಾಸಕರು ಸ್ಥಳೀಯರ ವಿರೋಧವನ್ನೂ ಲೆಕ್ಕಿಸದೆ ಕ್ರೀಡಾಂಗಣ ನಿರ್ಮಿಸಿದ್ದು ಏಕೆ. ಕ್ರೀಡಾಂಗಣವನ್ನು ಸುತ್ತು ಹಾಕಿದರೆ ಎಲ್ಲೆಡೆಯೂ ಕಳಪೆ ಕಾಮಗಾರಿಯ ದರ್ಶನವಾಗುತ್ತದೆ. ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ ನಿರ್ಮಾಣಕ್ಕೆ ಬಳಸಿರುವ ಸಲಕರಣೆಗಳೂ ಕಳಪೆ ಗುಣಮಟ್ಟದಿಂದ ಕೂಡಿವೆ’ ಎಂದು ಆರೋಪಿಸಿದ್ದಾರೆ.

ಶಾಸಕ ಎಂ.ಸತೀಶ್ ರೆಡ್ಡಿ, ‘ಕ್ರೀಡಾಂಗಣದ ಸುತ್ತಲೂ ಸಾಕಷ್ಟು ಮರಗಳಿವೆ. ಈ ಪೈಕಿ ಒಂದು ಮರ, ಕಬ್ಬಿಣದ ಕಂಬದ ಮೇಲೆ ಉರುಳಿಬಿದ್ದಿದ್ದರಿಂದ ಇಡೀ ಚಾವಣಿಯೇ ಮುರಿದು ಹೋಗಿದೆ. ಇದನ್ನು ಸ್ವಂತ ಹಣದಲ್ಲೇ ದುರಸ್ತಿಗೊಳಿಸುವಂತೆ ಸಂಬಂಧಪಟ್ಟ ಗುತ್ತಿಗೆದಾರನಿಗೆ ಸೂಚಿಸಲಾಗಿದೆ. ಮುಂದೆ ಇಂತಹ ಘಟನೆ ಮರುಕಳಿಸದಂತೆ ತಡೆಯುವಸಲುವಾಗಿ ಚಾವಣಿಯ ವಿನ್ಯಾಸ ಬದಲಾವಣೆ ಮಾಡಲು ತೀರ್ಮಾನಿಸಲಾಗಿದೆ’ ಎಂದಿದ್ದಾರೆ.



ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದಲ್ಲಿ ನಿರ್ಮಿಸಲಾಗಿದ್ದ ಗ್ಯಾಲರಿಯ ಚಾವಣಿ ಕುಸಿದಿರುವುದು –ಪ್ರಜಾವಾಣಿ ಚಿತ್ರ

ಆಮ್ ಆದ್ಮಿ ಪಕ್ಷದ ಪ್ರತಿಭಟನೆ ಇಂದು

ಕ್ರೀಡಾಂಗಣದ ಕಳಪೆ ಕಾಮಗಾರಿಯನ್ನು ಖಂಡಿಸಿ ಆಮ್ ಆದ್ಮಿ ಪಕ್ಷವು ಮಂಗಳವಾರ ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ. ‘ಜನರ ತೆರಿಗೆ ಹಣವನ್ನು ಜನಪ್ರತಿನಿಧಿಗಳು ದುರ್ಬಳಕೆ ಮಾಡಿದ್ದಾರೆ. ಕಳಪೆ ಕಾಮಗಾರಿಯನ್ನು ಪ್ರಶ್ನಿಸಲು ಹೋದ ಪಕ್ಷದ ಕಾರ್ಯಕರ್ತರ ಮೇಲೆ ಬಿಜೆಪಿ ಮುಖಂಡರು ದಬ್ಬಾಳಿಕೆ ನಡೆಸಿದ್ದಾರೆ. ಶಾಸಕರ ಬೆಂಬಲಿಗರು ಗೂಂಡಾಗಿರಿ ಪ್ರದರ್ಶಿಸಿದ್ದಾರೆ. ಹೀಗಾಗಿ ಸ್ಥಳೀಯರ ಸಹಕಾರದೊಂದಿಗೆ, ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ಗಾಳಿ ಸಹಿತ ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿಯೂ ಜೋರು ಗಾಳಿ ಸಹಿತ ಮಳೆ ಸುರಿಯಿತು.

ನಗರದಲ್ಲಿ ಹಲವು ದಿನಗಳಿಂದ ಬಿಡುವು ಕೊಡುತ್ತಲೇ ಮಳೆಯಾಗುತ್ತಿದ್ದು, ಗುಡುಗು–ಸಿಡಿಲು ಹಾಗೂ ಗಾಳಿ ಅಬ್ಬರವೂ ಹೆಚ್ಚಿದೆ. ಸೋಮವಾರವೂ ಆಗಾಗ ಬಿಸಿಲು ಕಾಣಿಸಿಕೊಂಡರೂ ಮೋಡ ಕವಿದ ವಾತಾವರಣವೇ ಹೆಚ್ಚಿತ್ತು.

ಸಂಜೆಯಿಂದಲೇ ತಂಪಾದ ಜೋರು ಗಾಳಿ ಬೀಸಲಾರಂಭಿಸಿತ್ತು. ಕೆಲವೆಡೆ ತುಂತುರು ಮಳೆ ಆರಂಭವಾಗಿತ್ತು. ರಾತ್ರಿ 8 ಗಂಟೆ ನಂತರ ಜೋರು ಗಾಳಿ ಜೊತೆಯಲ್ಲಿ ಮಳೆ ಅಬ್ಬರ ಹೆಚ್ಚಾಗಿತ್ತು.

ಕೆಂಗೇರಿ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಪುಟ್ಟೇನಹಳ್ಳಿ, ಜಯನಗರ, ಬಸವನಗುಡಿ, ಗಿರಿನಗರ, ಹನುಮಂತನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಕಾಟನ್‌ಪೇಟೆ, ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ಅಶೋಕನಗರ, ಎಂ.ಜಿ. ರಸ್ತೆ, ಶಿವಾಜಿನಗರ, ಕೋರಮಂಗಲ, ಮಡಿವಾಳ, ಶಾಂತಿನಗರ, ವಿಲ್ಸನ್ ಗಾರ್ಡನ್, ಎಚ್‌ಎಸ್‌ಆರ್ ಲೇಔಟ್ ಭಾಗದಲ್ಲೂ ಜೋರು ಮಳೆ ಆಯಿತು.

ಚಿಕ್ಕಪೇಟೆ, ಕಾಟನ್‌ಪೇಟೆ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಕಾಮಗಾರಿಗಳು ನಡೆಯುತ್ತಿದೆ. ಅದಕ್ಕಾಗಿ ಗುಂಡಿಗಳನ್ನು ತೆಗೆಯಲಾಗಿದೆ. ಮಳೆಯಿಂದಾಗಿ ಗುಂಡಿಯಲ್ಲಿ ನೀರು ತುಂಬಿಕೊಂಡು, ರಸ್ತೆಗೆ ಹರಿಯಿತು. ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

ಚಾಲುಕ್ಯ ವೃತ್ತ, ಕೆ.ಆರ್. ವೃತ್ತ, ಸ್ವಾತಂತ್ರ್ಯ ಉದ್ಯಾನ, ಮೆಜೆಸ್ಟಿಕ್‌ನ ರೈಲ್ವೆ ಕೆಳಸೇತುವೆ ಸೇರಿದಂತೆ ಹಲವೆಡೆ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ಒಡಿಶಾದಿಂದ ಗಾಂಜಾ ತಂದು ಮಾರಾಟ

ಬೆಂಗಳೂರು: ಒಡಿಶಾದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ಶ್ಯಾಮಾನಂದ್ ದಿಗಲ್ (34) ಎಂಬಾತನನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದಾರೆ.

‘ಒಡಿಶಾದ ಶ್ಯಾಮಾನಂದ್, ಮೇ 5ರಂದು ನಗರಕ್ಕೆ ಬಂದಿದ್ದ. ಕುಮಾರಪಾರ್ಕ್ ಬಳಿಯ ಬಿಬಿಎಂಪಿ ಆಟದ ಮೈದಾನದಲ್ಲಿ ಗಾಂಜಾ ಮಾರುತ್ತಿದ್ದ. ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ. 20 ಕೆ.ಜಿ ಗಾಂಜಾ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

26 ಮಂದಿಗೆ ಗಾಯ • ಮೆಟ್ರೊ ಕಾರ್ಯಾಚರಣೆ ಸುರಕ್ಷಿತ: ಬಿಎಂಆರ್‌ಸಿಎಲ್

ಮೆಟ್ರೊ ಪಿಲ್ಲರ್‌ಗೆ ಗುದ್ದಿದ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಮೆಟ್ರೊ ಪಿಲ್ಲರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಗುದ್ದಿ ಅಪಘಾತ ಸಂಭವಿಸಿದ್ದು, ಚಾಲಕ ಸೇರಿ 26 ಮಂದಿ ಗಾಯಗೊಂಡಿದ್ದಾರೆ.

‘ಸೋಮವಾರ ನಸುಕಿನಲ್ಲಿ ಅಪಘಾತ ಸಂಭವಿಸಿದೆ. 26 ಮಂದಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಲಕ ವೆಂಕಟರಾಮ್ ಸೇರಿ ಮೂವರು ತೀವ್ರವಾಗಿ ಗಾಯಗೊಂಡಿದ್ದಾರೆ’ ಎಂದು ಕೆಂಗೇರಿ ಸಂಚಾರ ಪೊಲೀಸರು ಹೇಳಿದರು.

‘ಮೈಸೂರು ವಿಭಾಗದ ಕೆ.ಆರ್. ನಗರ ಡಿಪೊಗೆ ಸೇರಿದ್ದ ಬಸ್ (ಕೆಎ 09 ಎಫ್ 5230), ಮಡಿಕೇರಿಯಿಂದ ಬೆಂಗಳೂರಿಗೆ ಬರುತ್ತಿತ್ತು. 45 ಪ್ರಯಾಣಿಕರು ಬಸ್ಸಿನಲ್ಲಿದ್ದರು.’



ಮೆಟ್ರೊ ಪಿಲ್ಲರ್‌ಗೆ ಗುದ್ದಿದ್ದ ಕೆಎಸ್‌ಆರ್‌ಟಿಸಿ ಬಸ್

‘ಜ್ಞಾನಭಾರತಿ ಬಳಿಯ ಪೂರ್ಣಿಮಾ ಪ್ಯಾಲೇಸ್ ಬಳಿ ಚಾಲಕ ವೆಂಕಟರಾಮ್, ಅತೀ ವೇಗವಾಗಿ ಬಸ್ ಚಲಾಯಿಸಿದ್ದರು. ಇದರಿಂದಾಗಿ ನಿಯಂತ್ರಣ ತಪ್ಪಿದ್ದ ಬಸ್, ಜ್ಞಾನಭಾರತಿ ಹಾಗೂ ಪಟ್ಟಣಗೆರೆ ಮೆಟ್ರೊ ನಿಲ್ದಾಣ ನಡುವಿನ ಪಿಲ್ಲರ್‌ಗೆ ಗುದ್ದಿತ್ತು’ ಎಂದೂ ತಿಳಿಸಿದರು.

‘ಪಿಲ್ಲರ್ ಸುತ್ತಲೂ ಗ್ರಿಲ್ ಅಳವಡಿಸಲಾಗಿದೆ. ಬಸ್, ಆರಂಭದಲ್ಲಿ ಗ್ರಿಲ್‌ಗೆ ಗುದ್ದಿದೆ. ನಂತರ ಪಿಲ್ಲರ್‌ಗೂ ತಾಗಿ ನಿಂತಿದೆ. ಇದರಿಂದಾಗಿ ಬಸ್ಸಿನ ಮುಂಭಾಗ ಜಖಂಗೊಂಡಿದೆ. ಬಸ್ ಚಾಲಕನ ಅಜಾಗರೂಕತೆ ಹಾಗೂ ಅತೀ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅವರ ವಿರುದ್ಧವೇ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದರು.

ಆಸ್ಪತ್ರೆ ವೆಚ್ಚ ಭರಿಸಿದ ಕೆಎಸ್‌ಆರ್‌ಟಿಸಿ: ‘ಚಾಲಕರಾದ ವೆಂಕಟರಾಮ ಹಾಗೂ ಮಂಜುನಾಥ್ ತೀವ್ರವಾಗಿ ಗಾಯಗೊಂಡಿದ್ದು, ಅವರಿಬ್ಬರು ಬಿಜಿಎಸ್ ಆಸ್ಪತ್ರೆಯಲ್ಲಿದ್ದಾರೆ. ಇನ್ನುಳಿದ ಗಾಯಾಳುಗಳಾದ ಸುಪ್ರಾ, ಪಿನಾಕಲ್ ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರೆಲ್ಲರ ಚಿಕಿತ್ಸಾ ವೆಚ್ಚವನ್ನು ಕೆಎಸ್‌ಆರ್‌ಟಿಸಿ ವತಿಯಿಂದ ಭರಿಸಲಾಗುತ್ತಿದೆ’ ಎಂದು ನಿಗಮದ ಪ್ರಕಟಣೆ ತಿಳಿಸಿದೆ.

ಗಂಭೀರ ಹಾನಿಯಾಗಿಲ್ಲ: ‘ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಪಿಲ್ಲರ್ ಮೇಲೆ ಗೀರುಗಳು ಮಾತ್ರ ಕಂಡುಬಂದಿವೆ. ಉಳಿದಂತೆ, ಯಾವುದೇ ಗಂಭೀರ ಹಾನಿಯಾಗಿಲ್ಲ. ಮೆಟ್ರೊ ಕಾರ್ಯಾಚರಣೆ ಸುರಕ್ಷಿತವಾಗಿದೆ’ ಎಂದು ಬಿಎಂಆರ್‌ಸಿಎಲ್ ಹಿರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಹತ್ಯೆಗೆ ಸಂಚು: ಪೆಟ್ರೋಲ್ ಬಾಂಬ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರ ಹತ್ಯೆಗೆ ಸಂಚು ರೂಪಿಸಿದ್ದ ಆರೋಪದಡಿ ಮೂವರನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದು, ಅವರಿಂದ ಪೆಟ್ರೋಲ್ ಬಾಂಬ್‌ಗಳನ್ನು ಜಪ್ತಿ ಮಾಡಿದ್ದಾರೆ.

ಸ್ಥಳೀಯ ನಿವಾಸಿಗಳಾದ ಸೈಯದ್ ಅಸ್ಗರ್, ಫಯಾಜ್ ಉಲ್ಲಾ ಹಾಗೂ ಮುನಾವರ್ ಬಂಧಿತರು.

‘ಆರೋಪಿ ಫಯಾಜ್ ಉಲ್ಲಾ, ಸಾರಾಯಿಪಾಳ್ಯದ ಬಾಡಿಗೆ ಮನೆಯೊಂದರಲ್ಲಿ ಹಲವು ವರ್ಷಗಳಿಂದ ವಾಸವಿದ್ದ. ಮನೆ ಖಾಲಿ ಮಾಡುವಂತೆ ಮಾಲೀಕರು ಹೇಳಿದರೂ ಕ್ಯಾರೆ ಎಂದಿರಲಿಲ್ಲ. ಮಾಲೀಕರಿಗೇ ಬೆದರಿಕೆ ಹಾಕುತ್ತಿದ್ದ. ಇದು ಗೊತ್ತಾಗುತ್ತಿದ್ದಂತೆ ಮಹಮ್ಮದ್ ಅಜೀಮುದ್ದಿನ್ ಎಂಬುವವರು, ಫಯಾಜ್‌ಗೆ ಎಚ್ಚರಿಕೆ ನೀಡಿ ಮನೆ ಖಾಲಿ ಮಾಡಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಅಪರಾಧ ಹಿನ್ನೆಲೆಯುಳ್ಳ ಫಯಾಜ್, ಮನೆ ಖಾಲಿ ಮಾಡಿಸಿದರೆಂಬ ಕಾರಣಕ್ಕೆ ಮಹಮ್ಮದ್ ಅಜೀಮುದ್ದಿನ್ ಅವರನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದ. ಇತರ ಆರೋಪಿಗಳಿಂದಲೂ ಸಹಕಾರ ಪಡೆದಿದ್ದ’ ಎಂದೂ ತಿಳಿಸಿದರು.

‘ವ್ಯಕ್ತಿಯೊಬ್ಬರನ್ನು ಹತ್ಯೆ ಮಾಡಲು ಹಾಗೂ ಸಮಾಜದ ಸ್ವಾಸ್ಥ್ಯ ಹಾಳು ಮಾಡಲು ಸಂಚು ರೂಪಿಸಿದ್ದ ಬಗ್ಗೆ ಮಾಹಿತಿ ಬಂದಿತ್ತು. ಪಿಎಸ್‌ಐ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಿದೆ. ನಾಡ ಪಿಸ್ತೂಲ್, ಮಚ್ಚು, 2 ಲಾಂಗ್, ಜೀವಂತ ಪೆಟ್ರೋಲ್ ಗುಂಡು ಹಾಗೂ ಪೆಟ್ರೋಲ್ ತುಂಬಿಟ್ಟಿದ್ದ 10 ಬಿಯರ್ ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

8 ಪ್ರಕರಣದಲ್ಲಿ ಆರೋಪಿ: ‘ಬಂಧಿತ ಫಯಾಜ್ ವಿರುದ್ಧ ಬಾಗಲೂರು, ಸಿಟಿ ಮಾರ್ಕೆಟ್, ಬಾಣಸವಾಡಿ ಹಾಗೂ ಕಾಟನ್ ಪೇಟೆ ಠಾಣೆಗಳಲ್ಲಿ 8 ಪ್ರಕರಣಗಳು ದಾಖಲಾಗಿವೆ. ಇನ್ನೊಬ್ಬ ಬಂಧಿತ ಸೈಯದ್ ಅಸ್ಗರ್ ವಿರುದ್ಧವೂ ಸಂಪಿಗೆಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು’ ಎಂದೂ ತಿಳಿಸಿದರು.

ರೇವ್ ಪಾರ್ಟಿ: ಪಬ್ ಮೇಲೆ ದಾಳಿ

ಬೆಂಗಳೂರು: ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯ ಪಬ್ ಮೇಲೆ ಪೊಲೀಸರು ದಾಳಿ ಮಾಡಿದ್ದು, 33 ಮಂದಿಯನ್ನು ಬಂಧಿಸಿದ್ದಾರೆ.

‘ಓಟ್ಸ್’ ಹೆಸರಿನ ಪಬ್‌ನಲ್ಲಿ ಭಾನುವಾರ ರಾತ್ರಿ ‘ರೇವ್ ಪಾರ್ಟಿ’ ಆಯೋಜಿಸಲಾಗಿತ್ತು. ಮದ್ಯ ಹಾಗೂ ಡ್ರಗ್ಸ್ ಪೂರೈಕೆಯೂ ಇತ್ತು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹರಿಕೃಷ್ಣ ಎಂಬುವವರು ಆಯೋಜಿಸಿದ್ದ ಪಾರ್ಟಿಯಲ್ಲಿ ಸುಮಾರು 50 ಮಂದಿ ಪಾಲ್ಗೊಂಡಿದ್ದರು. ಜೋರಾದ ಸಂಗೀತ ಹಾಕಿಕೊಂಡು ಎಲ್ಲರೂ ನೃತ್ಯ ಮಾಡುತ್ತಿದ್ದರು. ಅದೇ ವೇಳೆ ದಾಳಿ ಮಾಡಿ, ಎಲ್ಲರನ್ನೂ ವಶಕ್ಕೆ ಪಡೆಯಲಾಯಿತು.’

‘ವಶಕ್ಕೆ ಪಡೆದಿದ್ದ ಎಲ್ಲರನ್ನೂ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಆ ಪೈಕಿ 31 ಮಂದಿ ಡ್ರಗ್ಸ್ ಸೇವನೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆರೋಪಿ ಹರಿಕೃಷ್ಣ, ಡಿಜೆ (ಡಿಸ್ಕ್ ಜಾಕಿ) ಸೆಂಥಿಲ್ ಕುಮಾರ್ ಸೇರಿ 33 ಮಂದಿಯನ್ನು ಬಂಧಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘₹ 3 ಲಕ್ಷ ಮೌಲ್ಯದ ಎಂಡಿಎಂಎ, ಚರಸ್ ಹಾಗೂ ಗಾಂಜಾವನ್ನೂ ಜಪ್ತಿ ಮಾಡಲಾಗಿದೆ. ಬಂಧಿತರ ಪೈಕಿ ಕೆಲವರು ಡ್ರಗ್ಸ್ ಮಾರಾಟಗಾರರೂ ಇದ್ದಾರೆ. ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದೂ ಹೇಳಿವೆ.

ಬಾಲಕರ ತಂಡ ಕಟ್ಟಿಕೊಂಡು ವಾಹನ ಕಳ್ಳತನ

ಬೆಂಗಳೂರು: ಬಾಲಕರ ತಂಡ ಕಟ್ಟಿಕೊಂಡು ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ಶಶಾಂಕ್ (20) ಎಂಬುವವರನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಹಳೇ ಪೊಲೀಸ್ ಠಾಣೆ ರಸ್ತೆಯ ನಿವಾಸಿ ಶಶಾಂಕ್, 17 ವರ್ಷದ ಬಾಲಕರನ್ನು ಬಳಸಿಕೊಂಡು ವಾಹನಗಳ ಕಳ್ಳತನ ಮಾಡುತ್ತಿದ್ದ. ಈತನಿಂದ ₹ 9 ಲಕ್ಷ ಮೌಲ್ಯದ 17 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಳ್ಳತನ ಪ್ರಕರಣದಲ್ಲಿ ಇಬ್ಬರು ಬಾಲಕರನ್ನೂ ವಶಕ್ಕೆ ಪಡೆಯಲಾಗಿದ್ದು, ಅವರನ್ನು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ. ಕೆ.ಆರ್. ಪುರ, ಮಹದೇವಪುರ, ರಾಮಮೂರ್ತಿನಗರ, ಬೈಯಪ್ಪನಹಳ್ಳಿ, ಹಲಸೂರು, ಹನುಮಂತನಗರ, ಗಿರಿನಗರ, ಸಿಟಿ ಮಾರ್ಕೆಟ್, ಬ್ಯಾಟರಾಯನಪುರ, ಅವಲಹಳ್ಳಿ, ಚೆನ್ನರಾಯನಪಟ್ಟಣ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ದ್ವಿಚಕ್ರ ವಾಹನಗಳನ್ನು ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ತಿಳಿಸಿದರು.

‘ದ್ವಿಚಕ್ರ ವಾಹನ ಕಳವಾದ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ಹೇಳಿದರು.

ಪ್ರಮೋದ್ ಮುತಾಲಿಕ್ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಒತ್ತಾಯಿಸಿ ಮೇ 11ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಕ್ರೈಸ್ತ ಮುಖಂಡರು ಪ್ರತಿಭಟನೆ ಹಮ್ಮಿಕೊಂಡಿದ್ದೇವೆ’ ಎಂದು ಕರ್ನಾಟಕ ಕ್ರೈಸ್ತರ ಸಾಮಾಜಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹ್ಯಾರಿ ಡಿಸೋಜ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,‘ಪ್ರಮೋದ್ ಮುತಾಲಿಕ್ ಅವರು ಕ್ರೈಸ್ತರ ಮೇಲೆ ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ. ಚರ್ಚ್, ಸಮಾರಂಭಗಳಿಗೆ ನುಗ್ಗಿ ಶಾಂತಿ ಕದಡುತ್ತಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕು’ ಎಂದರು.

‘ಸರ್ಕಾರ ಈ ದೌರ್ಜನ್ಯಗಳನ್ನು ಕಂಡೂ ಕಾಣದಂತೆ ಇರುವುದು ಕ್ರೈಸ್ತ ಸಮುದಾಯದಲ್ಲಿ ಆತಂಕ ತರಿಸಿದೆ. ಈ ರೀತಿ ಗಲಭೆ ಸೃಷ್ಟಿಸಲು ಸರ್ಕಾರವೇ ಪರವಾನಗಿ ನೀಡಿದೆಯಾ ಎಂಬ ಅನುಮಾನ ಮೂಡುತ್ತಿದೆ’ ಎಂದು ಹೇಳಿದರು.

‘ಮತಾಂತರಕ್ಕೂ ಮತ ಪ್ರಚಾರಕ್ಕೂ ವ್ಯತ್ಯಾಸವಿದೆ. ಮತ ಪ್ರಚಾರವನ್ನೇ ಮತಾಂತರ ಎಂದು ತಪ್ಪಾಗಿ ತಿಳಿದಿರುವ ಕೆಲ ಕಿಡಿಗೇಡಿಗಳು ಕ್ರೈಸ್ತರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿವೆ’ ಎಂದರು.

ಮಂಗಳವಾರದ ಉಷ್ಣಾಂಶ
32° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಅಲ್ಲಲ್ಲಿ ಮಳೆ ಆಗಲಿದೆ.

ಹವಾಮಾನ

ಬುಧವಾರ	ಗುರುವಾರ	ಶುಕ್ರವಾರ
32° 21°	33° 21°	33° 20°

ಸೂರ್ಯೋದಯ:5:56 ಸೂರ್ಯಾಸ್ತ:6:36 ಚಂದ್ರೋದಯ: ಮ.12:37 ಚಂದ್ರಾಸ್ತ: ರಾ.12:53 ಸೋಮವಾರದ ಹವಾಮಾನ : ಗರಿಷ್ಠ 32° ಕನಿಷ್ಠ 21°

ಮಳೆಯಿಂದ ಆವಕ ಕುಸಿತ • ಹಸಿಮೆಣಸಿನಕಾಯಿ ದರ ಕುಸಿತ

ಟೊಮೆಟೊ, ಬೀನ್ಸ್ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಟೊಮೆಟೊ, ಬೀನ್ಸ್ ಸೇರಿದಂತೆ ಕೆಲ ತರಕಾರಿಗಳ ದರ ದಿಢೀರ್ ಏರಿದೆ.

ಎರಡು ವಾರಗಳ ಹಿಂದೆ ಟೊಮೆಟೊ ದರ ಕೆ.ಜಿ.ಗೆ ₹20ರಷ್ಟಿತ್ತು. ಗಣನೀಯ ಏರಿಕೆ ಕಂಡಿರುವ ಟೊಮೆಟೊ ಸದ್ಯ ₹60ರಿಂದ ₹70ರವರೆಗೆ ಮಾರಾಟವಾಗುತ್ತಿದೆ. ಬೀನ್ಸ್ ದರವೂ ಏರಿದ್ದು, ಕೆ.ಜಿ.ಗೆ ₹80ರಂತೆ ಸೋಮವಾರ ಮಾರಾಟವಾಗಿದೆ.

ಸುಮಾರು ಎರಡು ತಿಂಗಳಿನಿಂದ ಏರುಗತಿಯಲ್ಲೇ ಇದ್ದ ಹಸಿಮೆಣಸಿನಕಾಯಿ ದರ ₹40ಕ್ಕೆ ಕುಸಿದಿದೆ. ದಪ್ಪ ಮೆಣಸಿನಕಾಯಿ (ಕ್ಯಾಪ್ಸಿಕಂ) ₹50ರಂತೆ ಮಾರಾಟವಾಗುತ್ತಿದೆ.





ಬೆಳ್ಳುಳ್ಳಿ, ಶುಂಠಿ ₹50ರ ಗಡಿ ದಾಟಿವೆ. ಬದನೆ, ಬೀಟ್‌ರೂಟ್, ಕ್ಯಾರೆಟ್, ಎಲೆಕೋಸು, ಬೆಂಡೆ, ತೊಂಡೆಕಾಯಿ, ಆಲೂಗೆಡ್ಡೆ, ಮೂಲಂಗಿ, ಈರುಳ್ಳಿ ದರಗಳೆಲ್ಲ ₹30ರ ಆಸುಪಾಸಿನಲ್ಲಿವೆ.

'ಇತ್ತೀಚೆಗೆ ಸುರಿದ ಭಾರಿ ಮಳೆಗೆ ಟೊಮೆಟೊ ಮತ್ತು ಬೀನ್ಸ್ ಬೆಳೆಗಳಿಗೆ ಹಾನಿಯಾಗಿದೆ. ಇದರಿಂದಾಗಿ ಟೊಮೆಟೊ ಮತ್ತು ಬೀನ್ಸ್ ದರ ದಿಢೀರ್ ಏರಿಕೆಯಾಗಿದೆ. ನಗರದ ವಿವಿಧ ಬಡಾವಣೆಗಳಲ್ಲಿರುವ ಚಿಲ್ಲರೆ ವ್ಯಾಪಾರಿಗಳು ಕೆ.ಜಿ. ಟೊಮೆಟೊ ₹80ರವರೆಗೆ ಮಾರಾಟ ಮಾಡುತ್ತಿದ್ದಾರೆ. ಇನ್ನೂ ಒಂದು ತಿಂಗಳು ಬೆಲೆ ಏರಿಕೆ ಮುಂದುವರಿಯುವ ಸಾಧ್ಯತೆ ಇದೆ' ಎಂದು ಎಪಿಎಂಸಿ ಮಾರುಕಟ್ಟೆಯ ತರಕಾರಿ ವರ್ತಕ ಕುಮಾರ್ ಹೇಳಿದರು.

ಸೊಪ್ಪಿನ ದರ ಏರುಪೇರು: ಮೆಂತ್ಯ ಸೊಪ್ಪು ದುಬಾರಿಯಾಗಿದ್ದು, ಪ್ರತಿ ಕಟ್ಟಿಗೆ ₹35ರವರೆಗೆ ಏರಿದೆ. ಕೊತ್ತಂಬರಿ, ಸಬ್ಬಕ್ಕಿ ₹20 ಹಾಗೂ ದಂಟು, ಪಾಲಕ್ ₹15ರಂತೆ ಮಾರಾಟವಾಗುತ್ತಿವೆ. ಬೇಸಿಗೆ ಇರುವುದರಿಂದ ಹಣ್ಣಿನ ದರಗಳೆಲ್ಲ ತಿಂಗಳಿನಿಂದಲೂ ಏರಿವೆ. ಮಾವಿನ ಅವಧಿ ಆರಂಭವಾಗಿರುವುದರಿಂದ 10ಕ್ಕೂ ಹೆಚ್ಚು ತಳಿಯ ಮಾವು ಮಾರುಕಟ್ಟೆಗಳಿಗೆ ಲಗ್ಗೆ ಇಟ್ಟಿವೆ. ಮಾವಿಗೆ ₹ 80ರಿಂದ ₹ 220ರವರೆಗೆ ಬೆಲೆ ಇದೆ.

ದೇವಾಂಗ ಸಮುದಾಯ ಭವನಕ್ಕೆ ₹4 ಕೋಟಿ ಅನುದಾನ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಆಧುನಿಕರಣದ ಮಧ್ಯದಲ್ಲಿಯೂ ದೇವಾಂಗ ಜನಾಂಗವು ನೇಕಾರಿಕೆಯನ್ನು ಮುಂದುವರಿಸುತ್ತಿದ್ದು, ಅಸಂಘಟಿತರಾದ ಸಮುದಾಯದೊಂದಿಗೆ ನಾವು ಇದ್ದೇವೆ. ಸಮುದಾಯ ಭವನದ ಕಟ್ಟಡಕ್ಕೆ ₹1 ಕೋಟಿ ಅನುದಾನ ನೀಡಿದ್ದು, ಇನ್ನೂ ₹4 ಕೋಟಿ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ತಾಲ್ಲೂಕಿನ ಕೆಂಪಲಿಂಗನಹಳ್ಳಿಯಲ್ಲಿರುವ ದೇವಾಂಗ ಶಾಖಾ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದರು.

'ದೇವರ ದಾಸಿಮಯ್ಯ ಪೀಠಕ್ಕೆ ₹1ಕೋಟಿ ಅನುದಾನ ನೀಡಲಾಗುವುದು. ಪಿಯುಸಿಯಿಂದ ಸ್ನಾತಕೋತ್ತರದ ವರೆಗೆ ವಿದ್ಯಾರ್ಥಿವೇತನ ಯೋಜನೆಯನ್ನು ಜನಾಂಗಕ್ಕೆ ಜಾರಿಗೆ ತರಲಿದ್ದೇವೆ. ಈಗಾಗಲೇ ಕೃಷಿಕರ ಮಕ್ಕಳು ಈ ಸೌಲಭ್ಯ ಪಡೆಯುತ್ತಿದ್ದಾರೆ, ಮೀನುಗಾರರಿಗೂ ಇದನ್ನು ವಿಸ್ತರಿಸಲಾಗುವುದು' ಎಂದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮುದಾಯ ಭವನವನ್ನು ಉದ್ಘಾಟಿಸಿದರು. ಮದುರೆ ಪುರುಷೋತ್ತಮಾನಂದ ಸ್ವಾಮೀಜಿ, ಸಚಿವ ಬಿ.ಸಿ. ನಾಗೇಶ್, ದಯಾನಂದ ಪುರಿ ಸ್ವಾಮೀಜಿ, ಗಾಯತ್ರಿ ಪೀಠ ಟ್ರಸ್ಟ್‌ನ ಕಾರ್ಯದರ್ಶಿ ಕೆ.ಸಿ.ತಿಮ್ಮಶೆಟ್ಟಿ, ಸಚಿವ ಡಾ.ಕೆ. ಸುಧಾಕರ್, ದೇವಾಂಗ ಸಂಘದ ರಾಜ್ಯ ಅಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ರವೀಂದ್ರ ಕಲಬುರ್ಗಿ ಇದ್ದಾರೆ.

ಕಾಲೇಜು ಕಟ್ಟಡ ಉದ್ಘಾಟಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ದಯವೇ ಧರ್ಮದ ಮೂಲವಾಗಬೇಕು. ಸಮ ಸಮಾಜ ಸೃಷ್ಟಿಗೆ ಡಾ.ಅಂಬೇಡ್ಕರ್ ಅವಕಾಶ ಕಲ್ಪಿಸಿದ್ದು ಅಧಿಕಾರ ವಂಚಿತ ಸಮಾಜಕ್ಕೆ ನನ್ನ ಅವಧಿಯಲ್ಲಿ ಮಾನ್ಯತೆ ನೀಡಿದ್ದೆ. ಮೀಸಲಾತಿ ಇಲ್ಲದೆ ಸಮ ಸಮಾಜ ಸೃಷ್ಟಿ ಹೇಗೆ' ಎಂದು ಪ್ರಶ್ನಿಸಿದರು.

ಕಚೇರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶಂಕುಸ್ಥಾಪನೆ ನೆರವೇರಿಸಿ, 'ದೇವಾಂಗ ಜನಾಂಗಕ್ಕೆ ರಾಜ್ಯದ 51 ಕ್ಷೇತ್ರಗಳಲ್ಲಿ ಶಾಸಕರನ್ನು ಆಯ್ಕೆ ಮಾಡುವ ಶಕ್ತಿ ಇದ್ದು ಒಗ್ಗಟ್ಟಾಗಿ ಚುನಾವಣೆ ಎದುರಿಸಬೇಕು' ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಮದುರೆ ಪುರುಷೋತ್ತಮಾನಂದ ಸ್ವಾಮೀಜಿ, ರಾಣೆಬೆನ್ನೂರು ಪ್ರಭುಲಿಂಗ ಸ್ವಾಮೀಜಿ, ನೊಣವಿನಕೆರೆ ಕರಿವೃಷಭ ಸ್ವಾಮೀಜಿ, ಆರೋಗ್ಯ ಡಾ.ಕೆ. ಸಚಿವ ಸುಧಾಕರ್, ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಶಾಸಕರಾದ ಸಿ.ಟಿ.ರವಿ, ವೆಂಕಟರಮಣಪ್ಪ, ಬಿಎಂಎಲ್ ಕಾಂತರಾಜು, ಮಸಾಲೆ ಜಯರಾಂ, ಮಾಜಿ ಶಾಸಕ ಎಂ.ವಿ.ನಾಗರಾಜು, ಲಕ್ಷ್ಮೀನಾರಾಯಣ, ದೇವಾಂಗ ರಾಷ್ಟ್ರೀಯ ಅಧ್ಯಕ್ಷ ಅರುಣ್ ವರೋಡೆ ಇದ್ದರು.

ಗಾಯತ್ರಿ ಪೀಠದ ಅಧ್ಯಕ್ಷ ಗಿರಿಯಪ್ಪ, ಕಾರ್ಯದರ್ಶಿ ಕೆ.ಸಿ.ತಿಮ್ಮಶೆಟ್ಟಿ, ಸಂಘದ ರಾಜ್ಯ ಅಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ರವೀಂದ್ರ ಕಲಬುರ್ಗಿ ಮತ್ತು ದಾನಿಗಳನ್ನು ಮುಖ್ಯಮಂತ್ರಿ ಸನ್ಮಾನಿಸಿದರು.

'ಬಹಳ ಹಿಂದೆಯೇ ತಮಿಳರಿಗೆ ಕಬ್ಬಿಣ ತಂತ್ರಜ್ಞಾನ ತಿಳಿದಿತ್ತು'

ಚೆನ್ನೈ: ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಮೈಲಾದುಂಪರೈನಲ್ಲಿ ನಡೆದ ಉತ್ಖನನದ ವೇಳೆ ದೊರೆತ ವಸ್ತುಗಳ ಕಾರ್ಬನ್ ಡೇಟಿಂಗ್ ಪ್ರಕಾರ ತಮಿಳರಿಗೆ ಸುಮಾರು 4,200 ವರ್ಷಗಳ ಹಿಂದೆಯೇ, ಅಂದರೆ ಕ್ರಿ.ಪೂ 2172ರಲ್ಲಿಯೇ ಕಬ್ಬಿಣ ತಂತ್ರಜ್ಞಾನದ ಪರಿಚಯವಿತ್ತು ಎಂಬುದು ತಿಳಿದು ಬಂದಿದೆ.

ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಈ ಕುರಿತ ಮಾಹಿತಿಯನ್ನು ವಿಧಾನಸಭೆಗೆ ನೀಡಿದರು. 2020–21ರಲ್ಲಿನಡೆದಮೊದಲಹಂತದ ಉತ್ಖನನವು ಕ್ರಿ.ಪೂ 1615 ಮತ್ತು ಕ್ರಿ.ಪೂ 2172 ಕಾಲಮಾನದ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲುತ್ತದೆ ಎಂದರು.

ತಮಿಳುನಾಡಿನ ಕೀಲಾಡಿಯಲ್ಲಿನ ಕಲಾಕೃತಿಗಳ ಕಾರ್ಬನ್ ಡೇಟಿಂಗ್, ಮದುರೈ ಬಳಿಯ ಸಂಗಂ ಯುಗಕ್ಕೆ ಸಂಬಂಧಿಸಿದ ನಿಕ್ಷೇಪದಲ್ಲಿನ ಉತ್ಖನನ, ತೂತುಕುಡಿ ಜಿಲ್ಲೆಯ ಶಿವಕಲೈನಲ್ಲಿನ ಸಮಾಧಿಯಲ್ಲಿ ಕಂಡು ಬಂದಿರುವ ಭತ್ತದ ಹೊಟ್ಟುಗಳ ಸಂಶೋಧನೆಯು ಅವುಗಳ ಕಾಲಮಾನವನ್ನು ಕ್ರಿ.ಪೂ 2,600 ಮತ್ತು 3,200ಕ್ಕೆ ತೆಗೆದುಕೊಂಡು ಹೋಗಿದೆ ಎಂದರು.

ಮುದಲಿಯಾರ್ ಸೇವಾ ಸಂಘದ ವಜ್ರ ಮಹೋತ್ಸವ ಆಚರಣೆ

6,500 ಶಾಲಾ ಕಟ್ಟಡ ನಿರ್ಮಾಣ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ವರ್ಷ ರಾಜ್ಯದಾದ್ಯಂತ 6500 ಶಾಲಾ ಕಟ್ಟಡಗಳ ನಿರ್ಮಾಣ ಕಾರ್ಯ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಈ ಯೋಜನೆ ಕರ್ನಾಟಕದ ಶಿಕ್ಷಣ ಕ್ಷೇತ್ರಕ್ಕೆ ಶಕ್ತಿಯನ್ನು ತುಂಬುವ ಕ್ರಾಂತಿಕಾರಿ ಹೆಜ್ಜೆಯಾಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪ್ರಕಾಶ ನಗರದಲ್ಲಿ ಭಾನುವಾರ ನಡೆದ ಮುದಲಿಯಾರ್ ಸೇವಾ ಸಂಘದ ವಜ್ರ ಮಹೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಮುದಲಿಯಾರ್ ಸಮುದಾಯ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಉತ್ತಮ ಯೋಜನೆಗಳನ್ನು ರೂಪಿಸಬೇಕು. ಬೆಂಗಳೂರಿನಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಮೂಲಕ ಈ ಕ್ಷೇತ್ರಕ್ಕೆ ಕೊಡುಗೆ ನೀಡಬೇಕು' ಎಂದು ಸಲಹೆ ನೀಡಿದರು.

'ನಗರಪ್ರದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಆದರೆ, ಕಡಿಮೆ ಶಾಲೆಗಳಿವೆ. ಜತೆಗೆ, ಖಾಸಗಿ ಶಾಲೆಗಳಲ್ಲಿ ದುಬಾರಿ ಶುಲ್ಕ ವಿಧಿಸಲಾಗುತ್ತಿದೆ. ಹೀಗಾಗಿ, ಬೆಂಗಳೂರಿನಲ್ಲಿ ಎಲ್ಲ ಸಂಘ-ಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಬೇಕು. ಈ ಮೂಲಕ ಬಡವರು, ಮಧ್ಯಮ ವರ್ಗದ ಜನರ ಮಕ್ಕಳಿಗೆ ಅತಿ ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡಬೇಕು. ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಮುಂದಾಗುವ ಸಂಘಗಳಿಗೆ ಸರ್ಕಾರವು ಸಹಕಾರ ನೀಡಲಿದೆ' ಎಂದರು.



ಮುದಲಿಯಾರ್ ಸೇವಾ ಸಂಘದ ಮಾಜಿ ಅಧ್ಯಕ್ಷರಾಗಿದ್ದ ಸಿ. ಅರುಣಾಚಲಂ ಅವರ ಪುತ್ಥಳಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅನಾವರಣಗೊಳಿಸಿ ಪುಷ್ಪನಮನ ಸಲ್ಲಿಸಿದರು. ಶಾಸಕ ಸುರೇಶ್ ಕುಮಾರ್, ಸಂಸದ ಪಿ.ಸಿ. ಮೋಹನ್ ಇದ್ದರು.

ಮುದಲಿಯಾರ್ ಸಮುದಾಯದ ಕೊಡುಗೆ: 'ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಅರ್ಕಾಟ್ ನಾರಾಯಣಸ್ವಾಮಿ ಅವರು ತಮ್ಮ ಛಾಪು ಮೂಡಿಸಿದ್ದಾರೆ. ಹೈಕೋರ್ಟ್ ಅಠಾರ ಕಚೇರಿ ಕಟ್ಟಡ ಸೇರಿದಂತೆ ಮೈಸೂರು, ಬೆಂಗಳೂರಿನ ಪ್ರಮುಖ ಕಟ್ಟಡಗಳ ನಿರ್ಮಾಣದಲ್ಲಿ ಅವರ ಪಾತ್ರ ಮಹತ್ವದ್ದು. ಬಿ.ಆರ್. ಮಾಣಿಕಂ ಮುದಲಿಯಾರ್ ವಿಧಾನಸೌಧ, ವಾಣಿವಿಲಾಸ ಆಸ್ಪತ್ರೆ, ರಸೆಲ್ ಮಾರುಕಟ್ಟೆ ನಿರ್ಮಾಣದಲ್ಲಿ ದೊಡ್ಡ ಪಾತ್ರ ವಹಿಸಿದ್ದರು. ಬೆಂಗಳೂರಿನ ನಿರ್ಮಾಣದಲ್ಲಿ ಮುದಲಿಯಾರ್ ಸಮುದಾಯ ಐತಿಹಾಸಿಕ ಕಾರ್ಯಗಳನ್ನು ಮಾಡಿದೆ' ಎಂದರು.



ಬನ್ನೇರುಘಟ್ಟ ಸಮೀಪದ ನಿಸರ್ಗ ಬಡಾವಣೆಯಲ್ಲಿ ನಡೆದ ವಿಎಲ್‌ಎನ್ ನವನಿರ್ಮಾಣ್ ಪ್ರಬುದ್ಧಾಲಯದ 14ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ರೇವತಿ ಎಂ. ಕಲಂಬಿ, ಡಾ. ಎನ್. ಅಪ್ಪಾಜಿರಾವ್, ಡಾ. ವಾಣಿರಾವ್, ಡಾ. ಸಿ.ಆರ್. ಶಾಮಲಾ ಮತ್ತು ಎನ್. ಶ್ರೀನಿವಾಸಮೂರ್ತಿ ಅವರಿಗೆ ವಿಎಲ್‌ಎನ್ ಹಿರಿಯ ನಾಗರಿಕರ ಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಿರ್ಮಾಣ್ ಸಂಸ್ಥೆಯ ಸಂಸ್ಥಾಪಕ ವಿ. ಲಕ್ಷ್ಮೀನಾರಾಯಣ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಗೀತ ವಿದ್ವಾಂಸ ಆರ್.ಕೆ. ಪದ್ಮನಾಭ, ಹೈಕೋರ್ಟ್ ಹಿರಿಯ ವಕೀಲ ಎಸ್.ಎಂ. ಪಾಟೀಲ್ ಇದ್ದರು.

ಹಿರಿಯ ನಾಗರಿಕರಿಗೆ ಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ

ಬೆಂಗಳೂರು: 'ಅವಿಭಕ್ತ ಕುಟುಂಬಗಳ ಸಂಖ್ಯೆ ಕುಸಿಯುತ್ತಿರುವುದು ಸಮಾಜದ ಹಿತದೃಷ್ಟಿಯಿಂದ ಅನಾರೋಗ್ಯಕರ ಸಂಗತಿ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಳವಳ ವ್ಯಕ್ತಪಡಿಸಿದರು.

ಬನ್ನೇರುಘಟ್ಟ ಸಮೀಪದ ನಿಸರ್ಗ ಬಡಾವಣೆಯಲ್ಲಿ ನಡೆದ ವಿಎಲ್‌ಎನ್ ನವನಿರ್ಮಾಣ್ ಪ್ರಬುದ್ಧಾಲಯದ 14ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಐವರು ಹಿರಿಯ ನಾಗರಿಕರಿಗೆ 'ವಿಎಲ್‌ಎನ್ ಹಿರಿಯ ನಾಗರಿಕರ ಜೀವಮಾನದ ಸಾಧನೆ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

ವಾರ್ಷಿಕೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಹಿರಿಯ ನಾಗರಿಕರಿಗೆ ಬಹುಮಾನ ವಿತರಿಸಲಾಯಿತು.

ಚಿತ್ರಾವಳಿ



ಹೆಬ್ಬಾಳ ಕ್ಷೇತ್ರದ ವಿವಿಧ ವಾರ್ಡ್‌ಗಳಲ್ಲಿ ಡಾಂಬರೀಕರಣ, ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬೈರತಿ ಸುರೇಶ್ ಸೋಮವಾರ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರು ಹಾಗೂ ಸಾರ್ವಜನಿಕರು ಇದ್ದಾರೆ



ಪೀಣ್ಯ ದಾಸರಹಳ್ಳಿ ಸಮೀಪದ ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್ ಮಂಜುನಾಥಸ್ವಾಮಿ ದೇವಸ್ಥಾನದ ಉದ್ಯಾನ ಅಭಿವೃದ್ಧಿ ಕಾಮಗಾರಿ ಹಾಗೂ ಬೀದಿ ದೀಪ ಅಳವಡಿಕೆ ಕಾಮಗಾರಿಗೆ ಶಾಸಕ ಆರ್. ಮಂಜುನಾಥ್ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಶಿವಪುರ ಗ್ರಾಮದಲ್ಲಿ ಕೊರೆಯಲಾಗಿದ್ದ ಕೊಳವೆಬಾವಿಯನ್ನು ಲೋಕಾರ್ಪಣೆ ಮಾಡಿದರು. ಜೆಡಿಎಸ್ ರಾಜ್ಯ ಘಟಕದ ಉಪಾಧ್ಯಕ್ಷ ಅಂದಾನಪ್ಪ, ರಾಜಗೋಪಾಲನಗರ ವಾರ್ಡ್ ಅಧ್ಯಕ್ಷ ರುದ್ರೇಗೌಡ, ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್ ಅಧ್ಯಕ್ಷ ಸಿ.ಜೆ. ರಮೇಶ್, ರಾಮಣ್ಣ ಇದ್ದರು.

ಪಿಎಸ್‌ಐ ಅಕ್ರಮ ನೇಮಕಾತಿ: ಸಿಐಡಿ ತನಿಖೆ ಚುರುಕು • ಮಗ ಆಯ್ಕೆಯಾಗದ್ದಕ್ಕೆ ಪೋಷಕರಿಂದ ವಾಗ್ವಾದ

ಹಣ ಪಡೆದೂ ನೌಕರಿ ಕೊಡಿಸದ ವೈಜನಾಥ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಸಿಐಡಿ ಬಂಧನದಲ್ಲಿರುವ ಕೆಎಸ್‌ಆರ್‌ಪಿ ಸಹಾಯಕ ಕಮಾಂಡೆಂಟ್ ವೈಜನಾಥ ಕಲ್ಯಾಣಿ ರೇವೂರ ತಮ್ಮದೇ ಊರಿನಲ್ಲಿ ವ್ಯಕ್ತಿಯೊಬ್ಬರಿಗೆ ನೌಕರಿ ಕೊಡಿಸುವುದಾಗಿ ಹೇಳಿ ಲಕ್ಷಾಂತರ ರೂಪಾಯಿ ಪಡೆದಿದ್ದ. ಅತ್ತ ನೌಕರಿಯೂ ಇಲ್ಲದೇ, ಇತ್ತ ಹಣವೂ ವಾಪಸ್ ಕೊಡದೇ ಇರುವ ಸಂಗತಿ ಈಗ ಮುನ್ನೆಲೆಗೆ ಬಂದಿದೆ.

ರೇವೂರ ಸ್ವಗ್ರಾಮ ಅಫಜಲಪುರ ತಾಲ್ಲೂಕಿನ ಮಾಶಾಳ ಗ್ರಾಮಸ್ಥರೊಬ್ಬ-ರು ಈ ವಿಷಯವನ್ನು 'ಪ್ರಜಾವಾಣಿ'ಗೆ ಖಚಿತಪಡಿಸಿದ್ದಾರೆ. ಎಫ್‌ಡಿಎ, ಎಸ್‌ಡಿಎ, ಪಿಎಸ್‌ಐ ಸೇರಿ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನೌಕರಿ ಕೊಡಿಸುವ ಬಗ್ಗೆ ವೈಜನಾಥ ಭರವಸೆ ನೀಡಿದ್ದರು. ಗ್ರಾಮಸ್ಥರು ಹಣ ನೀಡಿ ತಮ್ಮ ಮಗ ಅಥವಾ ಮಗಳಿಗೆ ನೌಕರಿ ಕೊಡಿಸುವಂತೆ ದುಂಬಾಲು ಬೀಳುತ್ತಿದ್ದರು.

ಇಂಥದ್ದೇ ಒಂದು ಪ್ರಕರಣದಲ್ಲಿ ಅಭ್ಯರ್ಥಿಯೊಬ್ಬರಿಂದ ವೈಜನಾಥ ₹5 ಲಕ್ಷ ಹಣ ಪಡೆದಿದ್ದರು. ಫಲಿತಾಂಶ ಬಂದಾಗ, ಮಗ ಆಯ್ಕೆಯಾಗದ ಕಾರಣ ಪೋಷಕರು ಸಿಟ್ಟಿಗೆದ್ದು ವಾಗ್ವಾದ ನಡೆಸಿದ್ದರು ಎಂದು ತಿಳಿದು ಬಂದಿದೆ.

ಬೆಂಗಳೂರಿನ ಕೆಎಸ್‌ಆರ್‌ಪಿ ನಾಲ್ಕನೇ ಬಟಾಲಿಯನ್‌ನಲ್ಲಿದ್ದ ವೈಜನಾಥ ರೇವೂರ 2019ರ ಅಕ್ಟೋ-ಬರ್‌ನಲ್ಲಿ ಕಲಬುರಗಿಯಲ್ಲಿ 6ನೇ ಬೆಟಾಲಿಯನ್‌ಗೆ ವರ್ಗಾವಣೆಯಾಗಿ-ದ್ದರು. ಈಗಾಗಲೇ ಬಂಧನದಲ್ಲಿರುವ ಅಫಜಲಪುರದ ರುದ್ರಗೌಡ ಪಾಟೀಲ ಮತ್ತು ವೈಜನಾಥ ಜಂಟಿಯಾಗಿ ನೇಮಕಾತಿ ದಂದೆ ನಡೆಸಿದ್ದರು ಎಂಬುದು ವಿಚಾರಣೆ ವೇಳೆ ಬೆಳಕಿಗೆ ಬಂದಿದ್ದು, ಸಿಐಡಿ ಅಧಿಕಾರಿಗಳು ಇನ್ನಷ್ಟು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಅಮಾನತಿಗೆ ಶಿಫಾರಸು: 'ಸಿಐಡಿ ಬಂಧನದಲ್ಲಿರುವ ವೈಜನಾಥಗೆ ಅಮಾನತಿಗೆ ಭಾನುವಾರವೇ ಕೆಎಸ್‌ಆರ್‌ಪಿ ಎಡಿಜಿಪಿ ಅವರಿಗೆ ಪತ್ರ ಬರೆಯಲಾಗಿದೆ' ಎಂದು ಕೆಎಸ್‌ಆರ್‌ಪಿ ಜಿಲ್ಲಾ ಕಮಾಂಡೆಂಟ್ ಬಸವರಾಜ ಜಿಳ್ಳೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಈಗಾಗಲೇ ಇಬ್ಬರು ಡಿವೈಎಸ್ಪಿ, ಇಬ್ಬರು ಪೊಲೀಸ್ ಇನ್‌ಸ್ಪೆಕ್ಟರ್, ಇಬ್ಬರು ಪಿಎಸ್‌ಐ ಮತ್ತು ಎಂಟು ಕೆಳಹಂತದ ಸಿಬ್ಬಂದಿ ಅಮಾನತು-ಗೊಂಡಿದ್ದಾರೆ.



ಪಿಎಸ್‌ಐ ಪರೀಕ್ಷೆ ನಡೆದ ಕಲಬುರಗಿಯ ಜ್ಞಾನಜ್ಯೋತಿ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಅವರೊಂದಿಗೆ ಪೊಲೀಸ್ ಅಧಿಕಾರಿಗಳು ಹಾಗೂ ಶಾಲಾ ಸಿಬ್ಬಂದಿ ಛಾಯಾಚಿತ್ರ ತೆಗೆಸಿಕೊಂಡಿರುವುದು

ಮಾಜಿ ಎಂಎಲ್‌ಸಿ ಸಂಬಂಧಿಗೂ ಪಂಗನಾಮ!

ವಿಧಾನಪರಿಷತ್ ಮಾಜಿ ಸದಸ್ಯರೊಬ್ಬರ ಸಂಬಂಧಿಕರಿಗೆ ಸೇರಿದ್ದ ಮರಳು ಬ್ಲಾಕ್ ಪಡೆದು, ಮರಳು ತೆಗೆದಿದ್ದ ಆರೋಪಿ ಸುರೇಶ ಕಾಟೇಗಾಂವ, ಬಳಿಕ ಹಣ ಕೊಡದಿರುವುದು ತಿಳಿದುಬಂದಿದೆ.

'ನಿಮ್ಮವರ ಮರಳು ಬ್ಲಾಕ್ ನಾವೇ ನಿರ್ವಹಿಸುತ್ತೇವೆ. ಬಂದ ಹಣದಲ್ಲಿ ಪಾಲು ಕೊಡುತ್ತೇವೆ ಎಂದಿದ್ದ. ಹೆಚ್ಚೂ ಕಡಿಮೆ ₹ 1 ಕೋಟಿ ಬರಬೇಕಿದೆ' ಎಂದು ವಿಧಾನಪರಿಷತ್ ಮಾಜಿ ಸದಸ್ಯರು ತಮ್ಮ ಆಪ್ತರ ಬಳಿ ಅಲವತ್ತುಕೊಂಡಿ-ದ್ದಾರೆ. ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದ ಪ್ರಮುಖ ಆರೋಪಿ ದಿವ್ಯಾ ಹಾಗರಗಿ ಅವರಿಗೆ ಆಶ್ರಯ ನೀಡಿದ್ದ ಆರೋಪದಲ್ಲಿ ಸುರೇಶ ಕಾಟೆಗಾಂವ ಮತ್ತು ಸಹೋದರ ಕಾಳಿದಾಸ ಸಿಐಡಿ ಬಂಧನದಲ್ಲಿದ್ದಾರೆ.

ದಿವ್ಯಾ, ಜ್ಯೋತಿ, ಶ್ರೀಧರ ಜೈಲಿಗೆ

ಸಿಐಡಿ ಕಸ್ಟಡಿಯಲ್ಲಿದ್ದ ಆರೋಪಿಗಳಾದ ದಿವ್ಯಾ ಹಾಗರಗಿ, ಜ್ಯೋತಿ ಪಾಟೀಲ ಮತ್ತು ಅಭ್ಯರ್ಥಿ ಶ್ರೀಧರ ಪವಾರ ಅವರನ್ನು ಸೋಮವಾರ ಕಾರಾಗೃಹಕ್ಕೆ ಕಳುಹಿಸಲಾಯಿತು.

ಸಿಐಡಿ ಕಸ್ಟಡಿ ಮುಗಿದ ಕಾರಣ ಮೂವರನ್ನೂ ಇಲ್ಲಿನ ಮೂರನೇ ಜೆಎಂಎಫ್‌ಸಿ ಕೋರ್ಟ್‌ನ ನ್ಯಾಯಾಧೀಶ ಬಸವರಾಜ ನೇಸರಗಿ ಎದುರು ಹಾಜರು ಪಡಿಸಲಾಯಿತು. ಕೋರ್ಟ್ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಪೊಲೀಸರ ಜೊತೆ ಗ್ರೂಪ್ ಫೋಟೊ: ಮುಖ್ಯ ಆರೋಪಿ ದಿವ್ಯಾ ಹಾಗರಗಿ ಶಾಲೆಯ ಪರೀಕ್ಷಾ ಕೇಂದ್ರಕ್ಕೆ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸ್ ಸಿಬ್ಬಂದಿ ಜೊತೆಗೆ ಗ್ರೂಪ್ ಫೋಟೊ ತೆಗೆಸಿಕೊಂಡಿದ್ದು, ಈಗ ಚರ್ಚೆಗೆ ಗ್ರಾಸವಾಗಿದೆ.

ಚಿತ್ರದಲ್ಲಿ ದಿವ್ಯಾ, ಅವರ ಪುತ್ರ, ಇತ್ತೀಚೆಗೆ ಕರ್ತವ್ಯಲೋಪದ ಕಾರಣಕ್ಕೆ ಅಮಾನತುಗೊಂಡ ಡಿವೈಎಸ್ಪಿ ಆರ್.ಆರ್. ಹೊಸಮನಿ, ಇನ್‌ಸ್ಪೆಕ್ಟರ್ ದಿಲೀಪ್ ಸಾಗರ್ ಸೇರಿ ಹಲವು ಸಿಬ್ಬಂದಿ, ಮುಖ್ಯ ಶಿಕ್ಷಕ ಕಾಶಿನಾಥ, ಸಿಬ್ಬಂದಿ ಇದ್ದಾರೆ.

ಜೆಡಿಎಸ್ ಮುಖಂಡ ಶಶಿಧರ್ ಶರಣು

ಹಾಸನ: ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿ ಮೂವರನ್ನು ಸಿಐಡಿ ಅಧಿಕಾರಿಗಳ ತಂಡ ಬಂಧಿಸಿದೆ.

ತಾಲ್ಲೂಕಿನ ಮಲ್ಲನೇಹಳ್ಳಿಯ ಅಭ್ಯರ್ಥಿ ಎಂ.ಸಿ.ಚೇತನ್ ಕುಮಾರ್ (21ನೇ ರ‍್ಯಾಂಕ್) ಮತ್ತು ಹೊಳೆನರಸೀಪುರ ತಾಲ್ಲೂಕಿನ ಅಭ್ಯರ್ಥಿಯೊಬ್ಬರ-ನ್ನು ಸೋಮವಾರ ಬಂಧಿಸಿ, ಬೆಂಗಳೂರಿಗೆ ಕರೆದೊಯ್ದಿದ್ದಾರೆ.

ಈ ಮಧ್ಯೆ ಜೆಡಿಎಸ್ ಮುಖಂಡ, ಚನ್ನರಾಯಪಟ್ಟಣ ಪುರಸಭೆ ಸದಸ್ಯ ಶಶಿಧರ್ ಅವರು ಭಾನುವಾರ ಸಿಐಡಿ ಅಧಿಕಾರಿಗಳಿಗ ಶರಣಾಗಿದ್ದಾರೆ. 'ನೇಮಕಾತಿ ಸಂಬಂಧ ಹಣ ವರ್ಗಾವಣೆಯಲ್ಲಿ ಶಶಿಧರ್ ಪಾತ್ರ ಇದೆ' ಎಂಬ ಆರೋಪ ಕೇಳಿ ಬಂದಿದೆ.

ಅಕ್ರಮ: 11 ಅಭ್ಯರ್ಥಿಗಳು ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ಬಂಧಿಸಿದ್ದ 11 ಅಭ್ಯ-ರ್ಥಿಗಳನ್ನು ಸೋಮವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇದೇ ಪ್ರಕರ-ಣದಲ್ಲಿ ತಲೆಮರೆಸಿಕೊಂಡಿರುವ ಐವರು ಅಭ್ಯರ್ಥಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ.

ಅಕ್ರಮ ಎಸಗಿದ್ದ 22 ಅಭ್ಯರ್ಥಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಏಪ್ರಿಲ್ 30ರಂದು ಪ್ರಕರಣ ದಾಖಲಾಗಿತ್ತು. ಆ ಪೈಕಿ 17 ಅಭ್ಯರ್ಥಿಗಳನ್ನು ಬಂಧಿಸಿದ್ದ ಸಿಐಡಿ ಅಧಿಕಾರಿಗಳು, ವಿಚಾರಣೆಗಾಗಿ ಕಸ್ಟಡಿಗೆ ಪಡೆದಿದ್ದರು. ಅವಧಿ ಮುಗಿದಿದ್ದರಿಂದ 11 ಅಭ್ಯರ್ಥಿಗಳನ್ನು ನ್ಯಾಯಾಲಯಕ್ಕೆ ಸೋಮವಾರ ಹಾಜ-ರುಪಡಿಸಿದ್ದರು.

'ಬಂಧಿತ ಅಭ್ಯರ್ಥಿಗಳು ಅಕ್ರಮಕ್ಕೆ ಸಂಬಂಧಪಟ್ಟಂತೆ ಮಾಹಿತಿ ನೀಡಿದ್ದಾರೆ. ಅವರಿಂದ ಲಿಖಿತ ಹೇಳಿಕೆಗಳನ್ನು ಪಡೆಯಲಾಗಿದ್ದು, ವಿಡಿಯೊ ಚಿತ್ರೀಕರಣ ಸಹ ಮಾಡಿಟ್ಟುಕೊಳ್ಳಲಾಗಿದೆ. ತನಿಖೆಯ ಕೆಲಸಂಗತಿಯನ್ನೇ ನ್ಯಾಯಾಲಯಕ್ಕೂ ತಿಳಿಸಲಾಗಿದೆ' ಎಂದೂ ಸಿಐಡಿ ಮೂಲಗಳು ಹೇಳಿವೆ.

ಸುಳಿವು ಪತ್ತೆಗೆ 90 ಮೊಬೈಲ್ ಪರಿಶೀಲನೆ: ಬಂಧಿತ ಅಭ್ಯರ್ಥಿಗಳು, ಏಜೆಂಟರು ಹಾಗೂ ಅವರ ಜೊತೆ ಒಡನಾಟ ಹೊಂದಿದ್ದವರ 90 ಮೊಬೈಲ್‌ಗಳನ್ನು ಸಿಐಡಿ ಅಧಿಕಾರಿಗಳು ಜಪ್ತಿ ಮಾಡಿದ್ದು, ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಆದರೆ, ಅಕ್ರಮದ ಬಗ್ಗೆ ಮೊಬೈಲ್‌ಗಳ ಮೂಲಕ ಸದ್ಯಕ್ಕೆ ಯಾವುದೇ ಸುಳಿವು ಸಿಕ್ಕಿಲ್ಲ.

'ಅಕ್ರಮ ಬಯಲಾಗುವ ಭೀತಿಯಲ್ಲಿ ಅಭ್ಯರ್ಥಿಗಳು, ಸಾಕ್ಷ್ಯ ನಾಶ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮೊಬೈಲ್ ಹೊರತುಪಡಿಸಿ ಇತರೆ ಆಯಾಮದಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಅವುಗಳ ಆಧಾರದಲ್ಲಿ ತನಿಖೆ ಮುಂದು-ವರಿಸಲಾಗಿದೆ' ಎಂದೂ ತಿಳಿಸಿವೆ.

ರಾಜಕಾರಣಿಗಳೇ ಮಧ್ಯವರ್ತಿಗಳು: 'ಬಂಧಿತ ಅಭ್ಯರ್ಥಿಗಳು, ಪರಿಚಯಸ್ಥ ರಾಜಕಾರಣಿಗಳನ್ನು ಮಧ್ಯವರ್ತಿಗಳನ್ನಾಗಿ ಮಾಡಿಕೊಂಡು ಹಣ ನೀಡಿದ್ದ ಸಂಗತಿ ಗೊತ್ತಾಗಿದೆ. ಅಭ್ಯರ್ಥಿಗಳ ಜೊತೆ ಒಡನಾಟ ಹೊಂದಿದ್ದ ರಾಜಕಾರಣಿಗಳ ಪಟ್ಟಿ ಸಿದ್ಧಪಡಿಸಲಾಗಿದ್ದು, ಕೆಲವರನ್ನು ಈಗಾಗಲೇ ಬಂಧಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಕೆಲ ರಾಜಕಾರಣಿಗಳು ಉನ್ನತ ಹುದ್ದೆಯಲ್ಲಿದ್ದಾರೆ. ಅವರಿಗೆ ನೋಟಿಸ್ ನೀಡಲು ಯೋಚಿಸಲಾಗುತ್ತಿದ್ದು, ಅವರ ಭಾಗಿ ಬಗ್ಗೆ ಪುರಾವೆಗಳನ್ನು ಸಂಗ್ರಹಿಸ-ಲಾಗುತ್ತಿದೆ' ಎಂದೂ ತಿಳಿಸಿವೆ.

ಬಿಳಿಹಾಳೆ ಮೇಲೆ ಸಹಿ: ಬಂಧಿತರ ದೂರು

ಸಿಐಡಿ ಅಧಿಕಾರಿಗಳ ವರ್ತನೆ ಬಗ್ಗೆ ನ್ಯಾಯಾಲಯದಲ್ಲಿ ಅಸಮಾಧಾನ ವ್ಯಕ್ತ-ಪಡಿಸಿದ ಬಂಧಿತ ಅಭ್ಯರ್ಥಿಗಳು, 'ವಿಚಾರಣೆ ನೆಪದಲ್ಲಿ ಸಾಕಷ್ಟು ತೊಂದರೆ ನೀಡಿದ್ದಾರೆ' ಎಂದು ದೂರಿದರು.

'ಸಂಬಂಧವಿಲ್ಲದ ಪ್ರಶ್ನೆಗಳನ್ನು ಕೇಳಿದ್ದಾರೆ. ಬಿಳಿ ಹಾಳೆ ಮೇಲೆ ಸಹಿ ಮಾಡಿಸಿಕೊಂಡಿದ್ದಾರೆ' ಎಂದೂ ಆರೋಪಿಸಿದರು. ಅಭ್ಯರ್ಥಿಗಳ ದೂರು ಆಲಿಸಿದ ನ್ಯಾಯಾಧೀಶರು, ಸಿಐಡಿ ಅಧಿಕಾರಿಗಳನ್ನು ವಿಚಾರಿಸಿ ಮಾಹಿತಿ ಪಡೆದುಕೊಂಡರು. ನಂತರವೇ ಅಭ್ಯರ್ಥಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಿದರು.

82.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 82.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ ಹೊಂದಲಾಗಿದ್ದು, ಇದುವರೆಗೆ 1.30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಪೂರ್ವ ಮುಂಗಾರು ಬಿತ್ತನೆ ಮಾಡಲಾಗಿದೆ.

ರಾಜ್ಯದಲ್ಲಿ ಬಿತ್ತನೆ ಬೀಜದ ಕೊರತೆ ಇಲ್ಲ. ಈಗಾಗಲೇ ವಿತರಣೆ ಕಾರ್ಯ ಪ್ರಗತಿಯಲ್ಲಿದೆ. 5.38 ಲಕ್ಷ ಕ್ವಿಂಟಲ್ ಬೇಡಿಕೆ ಇದ್ದು, 8.65 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಗಳು ಲಭ್ಯ ಇದೆ. ರಾಜ್ಯದಾದ್ಯಂತ ರೈತ ಸಂಪರ್ಕ ಕೇಂದ್ರಗಳ ಮೂಲಕ ಇಲ್ಲಿಯವರೆಗೆ 3,505.8 ಕ್ವಿಂಟಲ್ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ ಎಂದು ಕೃಷಿ ಇಲಾಖೆ ತಿಳಿಸಿದೆ.

ಮುಂಗಾರು ಹಂಗಾಮಿಗೆ 26.76 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಅಗತ್ಯ ಇದೆ. ಪ್ರಸ್ತುತ 7.15 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಖಾಸಗಿ ಮಾರಾಟಗಾರರು ಮತ್ತು ಸಹಕಾರ ಸಂಘಗಳಲ್ಲಿ ಸಂಗ್ರಹ ಇದೆ. ರಸಗೊಬ್ಬರದ ಕೊರತೆಯಾಗದಂತೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಳೆ ವಿಮೆ: 2021–22ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 1.267 ಲಕ್ಷ ರೈತರು ಬೆಳೆ ವಿಮೆಗೆ ನೋಂ-ದಾಯಿಸಿಕೊಂಡಿದ್ದರು. ಈಗಾಗಲೇ ಒಟ್ಟು 2.10 ಲಕ್ಷ ರೈತರಿಗೆ ₹135.72 ಕೋಟಿ ಬೆಳೆ ವಿಮೆ ಪರಿಹಾರವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲಾಗಿದೆ ಎಂದು ಕೃಷಿ ಇಲಾಖೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

'ಯತ್ನಾಳ ಸಾಕ್ಷ್ಯ ನೀಡಲಿ'

ಬೆಂಗಳೂರು: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಾಡಿರುವ ಆರೋಪಗಳಿಗೆ ಸಾಕ್ಷ್ಯಾಧಾರ ನೀಡುವುದು ಸೂಕ್ತ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಬಾಯಿ ಚಪಲಕ್ಕೆ ಯಾರ‍್ಯಾರೋ ಏನೇನೋ ಹೇಳುತ್ತಾ ಇರುತ್ತಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಪಕ್ಷ ನಿರ್ಧರಿಸುತ್ತದೆ' ಎಂದರು ಹೇಳಿದರು.

'ವಲಸೆ ಬಂದಿರುವ ನಾವ್ಯಾರೂ ಬೇಸರಗೊಂಡಿಲ್ಲ. ಬಿಜೆಪಿಗೆ ಬಂದ ಮೇಲೆ ಪಕ್ಷದ ಶಿಸ್ತನ್ನು ನೋಡಿದ್ದೇವೆ. ಪಕ್ಷದ ಸಂಘಟನೆ, ಬೂತ್ ಮಟ್ಟದ ಕಾರ್ಯಕ್ರಮ ಎಲ್ಲವನ್ನೂ ನೋಡಿ ಕಲಿತಿದ್ದೇವೆ. ಆದರೆ, ಅದೆಲ್ಲವೂ ಕಾಂಗ್ರೆಸ್‌ನಲ್ಲಿ ಇರಲಿಲ್ಲ. ನಮಗೆ ಅಸಮಾಧಾನ ಆಗಿದೆ ಎಂಬುದು ಸುಳ್ಳು' ಎಂದು ಪಾಟೀಲ ತಿಳಿಸಿದರು.

ಎಸ್ಸೆಸ್ಸೆಲ್ಸಿ: 19 ರಂದು ಫಲಿತಾಂಶ ಸಾಧ್ಯತೆ

ಬೆಂಗಳೂರು:ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶವನ್ನು ಮೇ 19ರಂದು ಪ್ರಕಟಿಸುವ ಸಾಧ್ಯತೆ ಇದೆ.

ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪೂರ್ಣಗೊಂಡಿದೆ ಎಂದು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ. ಮಾರ್ಚ್ 28 ರಿಂದ ಏಪ್ರಿಲ್ 12ರವರೆಗೆ ಪರೀಕ್ಷೆಗಳು ನಡೆದಿದ್ದವು. ಸುಮಾರು 8.5 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾ-ಯಿಸಿಕೊಂಡಿದ್ದರು.

ಸಾರಿಗೆ ಇಲಾಖೆ: ತಾತ್ಕಾಲಿಕ ಹುದ್ದೆ 1 ವರ್ಷ ಮುಂದುವರಿಕೆ

ಬೆಂಗಳೂರು:ಸಾರಿಗೆ ಇಲಾಖೆಯಲ್ಲಿನ 796 ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸಲು ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ 1.4.2022 ರಿಂದ 31.3.2023 ರವರೆಗೆ ಒಂದು ವರ್ಷದ ಅವಧಿಗೆ ಮುಂದವರೆಸಲು ಮಂಜೂರಾತಿ ನೀಡಲಾಗಿದೆ. ಹೆಚ್ಚುವರಿ ಸಾರಿಗೆ ಆಯುಕ್ತರ ಹುದ್ದೆಯಿಂದ ಹಿಡಿದು ವಾಚ್‌ಮನ್‌ವರೆಗೆ ಒಟ್ಟು 796 ಹುದ್ದೆಗಳಿವೆ.

ನೋಟಿಸ್ ಅಲ್ಲ, ಪ್ರಮೋಷನ್ ಸಿಗುತ್ತೆ: ಯತ್ನಾಳ

ಕಲಬುರಗಿ: '₹ 2,500 ಕೋಟಿ ಕೊಟ್ಟರೆ ಮುಖ್ಯಮಂತ್ರಿ ಹುದ್ದೆ ಸಿಗಲಿದೆ ಎಂಬ ಹೇಳಿಕೆ ಬಗ್ಗೆ ನನಗೆ ನೋಟಿಸ್ ಸಿಗಲ್ಲ. ಬದಲಾಗಿ ಪ್ರಮೋಷನ್ ಸಿಗುತ್ತದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

'ಕೇಂದ್ರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾ-ಗಿದ್ದ ವೇಳೆ ಶಾಸಕಾಂಗ ಸಭೆಯಲ್ಲಿ ಪ್ರಶ್ನಿಸಿದ್ದೆ. ಆಗ ಕೊಟ್ಟ ನೋಟಿಸ್‌ಗೆ 17 ಪುಟ ಉತ್ತರ ಬರೆದಿದ್ದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಆರಗ ಜ್ಞಾನೇಂದ್ರ ಅವರಿಗೆ ಗೃಹ ಖಾತೆ ನಿಭಾಯಿಸಲು ಆಗುವುದಿಲ್ಲ ಎಂದು ಮೊದಲೇ ಹೇಳಿದ್ದೆ. ಗೃಹ ಖಾತೆಯನ್ನು ಗಟ್ಟಿ ಇದ್ದವರಿಗೆ ಕೊಡಲು ತಿಳಿಸಿದ್ದೆ' ಎಂದರು.

ಸಿ.ಎಂ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಬೆಳಿಗ್ಗೆ ನವದೆಹಲಿಗೆ ತೆರಳಲಿದ್ದು, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ವಿವಿಧ ದೇಶಗಳ ರಾಯಭಾರಿಗಳ ಜತೆ ಸಭೆ ನಡೆಸಲಿದ್ದಾರೆ.

ನವೆಂಬರ್‌ನಲ್ಲಿ ಜಾಗತಿಕ ಹೂಡಿಕೆದಾರರ ಸಭೆ ಬೆಂಗಳೂರಿನಲ್ಲಿ ನಡೆಯಲಿದ್ದು, ವಿವಿಧ ದೇಶಗಳ ಹೂಡಿ-ಕೆದಾರರನ್ನು ಸೆಳೆಯುವ ಉದ್ದೇಶದಿಂದ ಈ ಸಭೆಯನ್ನು ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿಯ ಮೂಲಗಳು ತಿಳಿಸಿವೆ.

ಅಲ್ಲದೇ ಇದೇ ಸಂದರ್ಭದಲ್ಲಿ ಅವರು ವಿವಿಧ ಕೇಂದ್ರ ಸಚಿವರ ಭೇಟಿಗಾಗಿ ಸಮಯವನ್ನು ಕೇಳಿದ್ದು, ಸಮಯ ಸಿಕ್ಕರೆ ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ. ಅಲ್ಲದೆ ಪಕ್ಷದ ವರಿಷ್ಠರನ್ನೂ ಭೇಟಿ ಮಾಡಲು ಉದ್ದೇಶಿಸಿದ್ದಾರೆ. ಇದಕ್ಕೆ ಅವಕಾಶ ಸಿಕ್ಕಿದರೆ, ಸಂಪುಟ ಪುನರ್‌ರಚನೆ ಬಗ್ಗೆಯೂ ಮಾತುಕತೆ ನಡೆಸುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಬುಧವಾರ ಅವರು ದೆಹಲಿಯಿಂದ ನಗರಕ್ಕೆ ವಾಪಸ್ ಬರಲಿದ್ದಾರೆ.

ಮೊಬೈಲ್‌ನಲ್ಲಿ ರಾತ್ರಿ ಜೋರಾಗಿ ಮಾತಾಡುವಂತಿಲ್ಲ: ರೈಲ್ವೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆ ಪ್ರಯಾಣಿಕರು ರಾತ್ರಿ ಪ್ರಯಾಣದ ಸಂದರ್ಭದಲ್ಲಿ ಮೊಬೈಲ್‌ನಲ್ಲಿ ಏರಿದ ಧ್ವನಿಯಲ್ಲಿ ಮಾತನಾಡುವುದನ್ನು ಅಥವಾ 'ಲೌಡ್ ಸ್ಪೀಕರ್'ನಲ್ಲಿ ಸಂಗೀತ ಕೇಳುವುದನ್ನು ಭಾರತೀಯ ರೈಲ್ವೆ ನಿಷೇಧಿಸಿದೆ.

ಪ್ರಯಾಣಿಕರಿಗೆ ಆರಾಮದಾಯಕ ಪ್ರಯಾಣವನ್ನು ಖಾತರಿಪಡಿಸುವ ಉದ್ದೇಶ|ದಿಂದ ಭಾರತೀಯ ರೈಲ್ವೆ ಹೊಸದಾಗಿ ಪ್ರಯಾಣಿಕ ಸ್ನೇಹಿ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದರ ಪ್ರಕಾರ, ಪ್ರಯಾಣಿಕರು ದೂರು ನೀಡಿದರೆ, ಆ ಸಮಸ್ಯೆ ಪರಿಹರಿಸುವ ಜವಾಬ್ದಾರಿ ರೈಲಿನಲ್ಲಿರುವ ಸಿಬ್ಬಂದಿಯದ್ದಾಗಿರುತ್ತದೆ.

ರೈಲಿನಲ್ಲಿರುವ ರೈಲ್ವೆ ತಪಾಸಣೆ ಸಿಬ್ಬಂದಿ, ಆರ್‌ಪಿಎಫ್, ಎಲೆಕ್ಟ್ರಿಷಿಯನ್, ಅಡುಗೆ ಮತ್ತು ನಿರ್ವಹಣೆ ಸಿಬ್ಬಂದಿ ಈ ಜವಾಬ್ದಾರಿಯನ್ನು ಹೊಂದಿರುತ್ತಾರೆ ಎಂದು ರೈಲ್ವೆ ತಿಳಿಸಿದೆ.

ರಾತ್ರಿ 10 ಗಂಟೆಯ ನಂತರ ಪ್ರಯಾಣಿಕರು ಮೊಬೈಲ್‌ನಲ್ಲಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ರೈಲ್ವೆ ಸಚಿವಾಲಯ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಷರತ್ತುಗಳ ನಡುವೆಯೂ 60 ವರ್ಷ ಮೇಲಿನ ಹಿರಿಯ ನಾಗರಿಕರು, ಅಂಗವಿಕಲರು ಮತ್ತು ಒಂಟಿ ಮಹಿಳಾ ಪ್ರಯಾಣಿಕರಿಗೆ ರೈಲ್ವೆ ಸಿಬ್ಬಂದಿ ಅಗತ್ಯ ನೆರವು ನೀಡುತ್ತಾರೆ.

ಹೊಸ ಮಾರ್ಗಸೂಚಿಗಳ ಕುರಿತು ರೈಲ್ವೆ ವಲಯ ಮಟ್ಟದಲ್ಲಿ, ಪ್ರಯಾಣಿಕರಿಗೆ ಜಾಗೃತಿ ಮೂಡಿಸಬೇಕು. ರೈಲಿನಲ್ಲಿ ಏರಿದ ಧ್ವನಿಯಲ್ಲಿ ಮೊಬೈಲ್‌ನಲ್ಲಿ ಮಾತನಾಡದಂತೆ ಹಾಗೂ ಇಯರ್‌ಫೋನ್ ಇಲ್ಲದೆ ಸಂಗೀತ ಕೇಳದಂತೆ ಪ್ರಯಾಣಿಕರರಿಗೆ ಸಲಹೆಗಳನ್ನು ಟಿಕೆಟ್ ಪರಿಶೀಲಕರು ಮತ್ತು ಇತರ ರೈಲ್ವೆ ಸಿಬ್ಬಂದಿ ನೀಡಬೇಕು ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

ಅಂಗವಿಕಲ ಬಾಲಕನಿಗೆ ವಿಮಾನದಲ್ಲಿ ಪ್ರವೇಶ ನಿರಾಕರಣೆ

ಇಂಡಿಗೊ ವಿರುದ್ಧ ತನಿಖೆ



ನವದೆಹಲಿ (ಪಿಟಿಐ): ಅಂಗವಿಕಲ ಬಾಲಕನಿಗೆ 'ಇಂಡಿಗೊ' ವಿಮಾನದಲ್ಲಿ ಪ್ರಯಾಣಿಸಲು ಅವಕಾಶ ನಿರಾಕರಿಸಿದ್ದ ಪ್ರಕರಣದ ವಿಚಾರಣೆ ನಡೆಸುತ್ತಿರುವುದಾಗಿ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಇಂತಹ ವರ್ತನೆ ಸಹಿಸಲಾಗದು. ಯಾರಿಗೂ ಈ ಪರಿಸ್ಥಿತಿ ಎದುರಾಗಬಾರದು. ತನಿಖೆಯನ್ನು ಖುದ್ದು ಪರಿಶೀಲಿಸುತ್ತಿದ್ದು, ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದ್ದಾರೆ.

ಶನಿವಾರ ರಾಂಚಿ ವಿಮಾನ ನಿಲ್ದಾಣದಲ್ಲಿ ಈ ಘಟನೆ ನಡೆದಿತ್ತು. ಬಾಲಕನಿಗೆ ವಿಮಾನ ಪ್ರಯಾಣ ನಿರಾಕರಿಸಿದ ಘಟನೆಯ ವಿಡಿಯೊ ಅನ್ನು ಸಹ ಪ್ರಯಾಣಿಕ ಮನಿಶಾ ಗುಪ್ತಾ 'ಲಿಂಕ್ಡ್ ಇನ್' ಜಾಲತಾಣದಲ್ಲಿ ಭಾನುವಾರ ಹಂಚಿಕೊಂಡಿದ್ದರು.

ಇಂಡಿಗೊ ವಿಮಾನ ಸಿಬ್ಬಂದಿ ಬಾಲಕನಿಗೆ ಪ್ರವೇಶ ನಿರಾಕರಿಸಿದ್ದರಿಂದ ಆತನ ತಂದೆ-ತಾಯಿ ಸಹ ಹೈದರಾಬಾದ್‌ಗೆ ಆ ವಿಮಾನದಲ್ಲಿ ಪ್ರಯಾಣಿಸುವುದನ್ನು ಕೈಬಿಡಬೇಕಾಯಿತು.

'ವಿಮಾನ ಪ್ರವೇಶಿಸುವಾಗ ಬಾಲಕ ಹೆಚ್ಚು ದಿಗಿಲುಗೊಂಡಿದ್ದರಿಂದ ಸಹ ಪ್ರಯಾಣಿಕರಿಗೆ ತೊಂದರೆ ಆಗಬಹುದೆಂದು ಬಾಲಕನಿಗೆ ಪ್ರಯಾಣಕ್ಕೆ ಅವಕಾಶ ನೀಡಲಾಗುತ್ತಿಲ್ಲ' ಎಂದು ಸಿಬ್ಬಂದಿ ಪ್ರಕಟಿಸಿದ್ದರು.

ಆದರೆ, ಇದನ್ನು ಸಹ ಪ್ರಯಾಣಿಕರು ವಿರೋಧಿಸಿ, ಬಾಲಕ ಹಾಗೂ ಆತನ ಪೋಷಕರಿಗೆ ವಿಮಾನದಲ್ಲಿ ಪ್ರಯಾಣಕ್ಕೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದರು.

ತನಿಖೆಗೆ ತ್ರಿಸದಸ್ಯ ತಂಡ ರಚನೆ: ಪ್ರಕರಣದ ಸತ್ಯಾಸತ್ಯೆಯ ಕುರಿತು ತನಿಖೆಗೆ ನಾಗರಿಕ ವಿಮಾನಯಾನ ನಿರ್ದೇಶನಾಲಯ ಡಿಜಿಸಿಎ ಸೋಮವಾರ ತ್ರಿಸದಸ್ಯರ ತಂಡ ರಚಿಸಿದೆ.

ಡಿಜಿಸಿಎ ಮುಖ್ಯಸ್ಥ ಅರುಣ್ ಕುಮಾರ್, ಈ ಘಟನೆಗೆ ಸಂಬಂಧಿಸಿ ವರದಿ ಸಲ್ಲಿಸುವಂತೆ ಇಂಡಿಗೊ ಸಂಸ್ಥೆಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

'ತಂಡವು ರಾಂಚಿ ಮತ್ತು ಹೈದರಾಬಾದ್‌ಗೆ ತೆರಳಿ ವಾರದೊಳಗೆ ಸಾಕ್ಷ್ಯ ಸಂಗ್ರಹಿಸಲಿದೆ. ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದ್ದಾರೆ.

ವಿಷಾದ: ಬಾಲಕನಿಗೆ ವಿಮಾನ ಪ್ರಯಾಣ ನಿರಾಕರಿಸಿರುವುದಕ್ಕೆ ಇಂಡಿಗೊ ವಿಮಾನ ಸಂಸ್ಥೆಯ ಸಿಇಒ ರಣಜಾಯ್ ದತ್ತಾ ವಿಷಾದ ವ್ಯಕ್ತಪಡಿಸಿದ್ದಾರೆ. ಆದರೆ, 'ಕಠಿಣ ಪರಿಸ್ಥಿತಿಯಲ್ಲಿ ಸಿಬ್ಬಂದಿ ಇಂತಹ ನಿರ್ಧಾರ ತೆಗೆದುಕೊಂಡಿದ್ದಾರೆ' ಎಂದು ದತ್ತಾ ಹೇಳಿದ್ದಾರೆ.

'ಬಾಲಕನ ಆರೈಕೆ ಕುರಿತು ಪೋಷಕರ ಬದ್ಧತೆ ಶ್ಲಾಘನೀಯ. ಬಾಲಕನಿಗೆ ವಿದ್ಯುತ್ ಚಾಲಿತ ವ್ಹೀಲ್ ಚೇರ್ ಕೊಡುಗೆ ನೀಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

ಎಫ್‌ಐಆರ್ ದಾಖಲಿಸಲು ಸೂಚನೆ: ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ರಾಷ್ಟ್ರೀಯ ಆಯೋಗದ (ಎನ್‌ಸಿಪಿಸಿಆರ್) ಅಧ್ಯಕ್ಷ ಪ್ರಿಯಾಂಕ್ ಕನೂಂಗೊ, ಇದು ಅಂಗವಿಕಲರ ಹಕ್ಕುಗಳ ಕಾಯ್ದೆಯ ಸೆಕ್ಷನ್ 7ರ ಪ್ರಾಥಮಿಕ ಉಲ್ಲಂಘನೆ. ಇಂಡಿಗೊ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜಾರ್ಖಂಡ್ ಪೊಲೀಸರಿಗೆ ಸೂಚಿಸಿದ್ದಾರೆ.

'ಮರು ದಿನ ಪ್ರಯಾಣ': ಅಂದು ಪ್ರಯಾಣಕ್ಕೆ ಅವಕಾಶ ನಿರಾಕರಿಸಿದ ಕಾರಣಕ್ಕೆ ಬಾಲಕ ಮತ್ತು ಆತನ ಪೋಷಕರಿಗೆ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿ, ಮರುದಿನ ಬೆಳಿಗ್ಗೆ ಅವರು ಹೋಗಬೇಕಿದ್ದ ಸ್ಥಳಕ್ಕೆ ವಿಮಾನದಲ್ಲಿ ಕಳುಹಿಸಿಕೊಡಲಾಯಿತು ಎಂದು ಇಂಡಿಗೊ ಸಂಸ್ಥೆ ಹೇಳಿದೆ.

ಕ್ಯಾಸಲ್ ರಾಕ್– ಕೊಲ್ಲೆಂ ಜೋಡಿ ಹಳಿ: ಅನುಮತಿ ರದ್ದುಪಡಿಸಿದ 'ಸುಪ್ರೀಂ'

ಪಣಜಿ: ಕರ್ನಾಟಕದ ಕ್ಯಾಸಲ್ ರಾಕ್ ರೈಲು ನಿಲ್ದಾಣದಿಂದ ಗೋವಾದ ಕೊಲ್ಲೆಂ ರೈಲು ನಿಲ್ದಾಣದವರೆಗಿನ ನೈಋತ್ಯ ರೈಲ್ವೆಯ ಮಾರ್ಗವನ್ನು ಜೋಡಿ ಹಳಿ ಮಾರ್ಗವಾಗಿ ಪರಿವರ್ತಿಸುವ ವಿವಾದಾತ್ಮಕ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿದ್ದ ಹಸಿರು ನಿಶಾನೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಪಡಿಸಿದೆ.

ಜೋಡಿ ಹಳಿ ಮಾರ್ಗದ ಯೋಜನೆಯ ಪರಿಸರ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲು ನೇಮಿಸಿದ್ದ ಕೇಂದ್ರದ ಉನ್ನತಾಧಿಕಾರ ಸಮಿತಿ (ಸಿಇಸಿ) ನೀಡಿರುವ ಶಿಫಾರಸುಗಳನ್ನು ಆಧರಿಸಿ ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ.

ಈ ರೈಲು ಮಾರ್ಗ ಹಾದು ಹೋಗಿರುವ ಪಶ್ಚಿಮ ಘಟ್ಟಗಳು ಯುನೆಸ್ಕೊ ಅನುಮೋದಿಸಿರುವ ಪರಿಸರ ಸೂಕ್ಷ್ಮ ಪ್ರದೇಶವನ್ನು ಒಳಗೊಂಡಿದೆ. ಅಲ್ಲಿ ಹೆಚ್ಚುವರಿ ರೈಲು ಹಳಿ ಹಾದುಹೋದರೆ, ವನ್ಯಜೀವಿ ಮತ್ತು ಪಶ್ಚಿಮ ಘಟ್ಟಗಳ ಪರಿಸರ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಸಿಇಸಿ ತನ್ನ ವರದಿಯಲ್ಲಿ ಹೇಳಿದೆ.

ರೈಲ್ವೆ ಜೋಡಿ ಹಳಿ ಯೋಜನೆಯ ಹೊರತಾಗಿ, ಗೋವಾ-ಕರ್ನಾಟಕ ಅರಣ್ಯದ ಗಡಿಯಲ್ಲಿ ಬರುವ ವಿದ್ಯುತ್ ಮಾರ್ಗ ಮತ್ತು ರಾಷ್ಟ್ರೀಯ ಹೆದ್ದಾರಿ 4 ಎ ವಿಸ್ತರಣೆಯ ಎರಡು ಯೋಜನೆಗಳು ಪರಿಸರದ ಮೇಲೆ ಉಂಟುಮಾಡುವ ಪರಿಣಾಮವನ್ನು ಅಂದಾಜಿಸುವ ಹೊಣೆಯನ್ನು ಸಿಇಸಿಗೆ ವಹಿಸಲಾಗಿದೆ.

ಇಲ್ಲಿ ಈ ಮೂರು ಯೋಜನೆಗಳು ಜಾರಿಯಾದರೆ ಸುಮಾರು 50 ಸಾವಿರ ಮರಗಳ ಹನನವಾಗಲಿದೆ ಎಂದು ಬಿಜೆಪಿಯೇತರ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಸಂಘಟನೆಗಳು ವಾದಿಸಿ, ಯೋಜನೆಗಳ ಜಾರಿಗೆ ವಿರೋಧ ವ್ಯಕ್ತಪಡಿಸಿದ್ದವು. ಗೋವಾದ ಸ್ಥಳೀಯ ಗ್ರೀನ್ ಎನ್‌ಜಿಒ 'ಗೋವಾ ಫೌಂಡೇಶನ್' ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು.

ಗೋವಾ ಫೌಂಡೇಶನ್‌ನ ಕ್ಲೌಡ್ ಅಲ್ವಾರೆಸ್, ರೈಲ್ವೆಗೆ ಮರು ಅರ್ಜಿ ಸಲ್ಲಿಸಲು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಸಿಇಸಿ ಶಿಫಾರಸುಗಳನ್ನು ಸುಪ್ರೀಂಕೋರ್ಟ್ ಪರಿಗಣಿಸಿರುವುದು ಗೋವಾಕ್ಕೆ ಸಿಕ್ಕ ವಿಜಯವಾಗಿದೆ ಎಂದು ಹೇಳಿದ್ದಾರೆ.

ಶಾಹೀನ್‌ಬಾಗ್‌ಗೆ ಬಂದ ಬುಲ್ಡೋಜರ್‌ಗಳಿಗೆ ಸ್ಥಳೀಯರಿಂದ ತಡೆ

ಪ್ರತಿರೋಧ: ತೆರವು ಸ್ಥಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ದೆಹಲಿ ಮಹಾನಗರ ಪಾಲಿಕೆಯು (ಎಸ್‌ಡಿಎಂಸಿ) ಶಾಹೀನ್ ಬಾಗ್ ಪ್ರದೇಶದಲ್ಲಿ ಸೋಮವಾರ ನಡೆಸಲು ಉದ್ದೇಶಿಸಿದ್ದ 'ಅಕ್ರಮ ಕಟ್ಟಡ' ತೆರವು ಕಾರ್ಯಾಚರಣೆಯು ಪ್ರಕ್ಷುಬ್ಧ ಪರಿಸ್ಥಿತಿಗೆ ಕಾರಣವಾಯಿತು. ಭಾರಿ ಪೊಲೀಸ್ ಬಂದೋಬಸ್ತ್‌ನೊಂದಿಗೆ ಸ್ಥಳಕ್ಕೆ ಬುಲ್ಡೋಜರ್‌ಗಳು ಬಂದಾಗ ಮಹಿಳೆಯರು ಸೇರಿದಂತೆ ನೂರಾರು ಜನರು ಪ್ರತಿಭಟನೆ ನಡೆಸಿದರು. ಹೀಗಾಗಿ ತೆರವು ಕಾರ್ಯಾಚರಣೆಯ ಸಿಬ್ಬಂದಿ ಹಿಂದಿರುಗಬೇಕಾಯಿತು.

ಎಎಪಿ ಮತ್ತು ಕಾಂಗ್ರೆಸ್ ಮುಖಂಡರು ಸ್ಥಳಕ್ಕೆ ಧಾವಿಸಿ, ಧರಣಿ ನಡೆಸಿದರು. ಎಸ್‌ಡಿಎಂಸಿ ಸಿಬ್ಬಂದಿಗೆ ಸ್ಥಳೀಯರು ತಡೆ ಒಡ್ಡಿದರು. ಪರಿಣಾಮವಾಗಿ ಶಾಹೀನ್ ಬಾಗ್ ಮತ್ತು ಸುತ್ತಲಿನ ಪ್ರದೇಶದಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಪ್ರತಿಭಟನಕಾರರು ಹಿಂದೆ ಸರಿಯಲು ಒಪ್ಪಲಿಲ್ಲ. ಅವರು ಎಸ್‌ಡಿಎಂಸಿ ಮತ್ತು ಕೇಂದ್ರದ ವಿರುದ್ಧ ಘೋಷಣೆ ಕೂಗಿದರು. ಕೆಲವು ಮಹಿಳೆಯರು ಬುಲ್ಡೋಜರ್‌ಗಳ ಮುಂದೆ ನಿಂತರು. ಹೀಗಾಗಿ, ಸಿಬ್ಬಂದಿಯು ತೆರವು ಕಾರ್ಯಾಚರಣೆ ನಡೆಸದೆಯೇ ಹಿಂದಿರುಗಬೇಕಾಯಿತು.

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರೋಧಿಸಿ 2019ರ ಕೊನೆಯಿಂದ 2020ರ ಆರಂಭದವರೆಗೆ ನಡೆದ ವಿಶಿಷ್ಟ ಸ್ವರೂಪದ ಪ್ರತಿಭಟನೆಗೆ ಶಾಹೀನ್ ಬಾಗ್ ಸಾಕ್ಷಿಯಾಗಿತ್ತು. ವಾಯುವ್ಯ ದೆಹಲಿಯ ಜಹಾಂಗೀರ್‌ಪುರಿಯಲ್ಲಿ ತೆರವು ಕಾರ್ಯಾಚರಣೆಯನ್ನು ಇತ್ತೀಚೆಗೆ ನಡೆಸಲಾಗಿತ್ತು. ಆದರೆ, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದ ಬಳಿಕ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು.

'ಒತ್ತುವರಿ ತೆರವು ಯಾವುದೇ ಸ್ಥಳೀಯಾಡಳಿತ ಸಂಸ್ಥೆಯ ಅನಿವಾರ್ಯ ಕರ್ತವ್ಯ. ಪ್ರತಿಭಟನೆಯು ರಾಜಕೀಯ ಪ್ರೇರಿತ. ಒತ್ತುವರಿ ತೆರವಿಗೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ' ಎಂದು ಎಸ್‌ಡಿಎಂಸಿ ಕೇಂದ್ರ ವಲಯದ ಅಧ್ಯಕ್ಷ ರಾಜ್‌ಪಾಲ್ ಸಿಂಗ್ ಹೇಳಿದ್ದಾರೆ.

'ರೋಹಿಂಗ್ಯಾ ಸಮುದಾಯದವರು, ಬಾಂಗ್ಲಾದೇಶೀಯರು ಮತ್ತು ಸಮಾಜವಿರೋಧಿ ಶಕ್ತಿಗಳು ಮಾಡಿಕೊಂಡಿರುವ ಒತ್ತುವರಿಯನ್ನು ತೆರವು ಮಾಡಬೇಕು' ಎಂದು ದಕ್ಷಿಣ ಮತ್ತು ಪೂರ್ವ ದೆಹಲಿಯ ಮೇಯರ್‌ಗಳಿಗೆ ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಅವರು ಪತ್ರ ಬರೆದ ಬಳಿಕ ತೆರವು ಕಾರ್ಯಾಚರಣೆಗಳಿಗೆ ಚಾಲನೆ ಕೊಡಲಾಗಿದೆ.

ಓಖ್ಲಾ ಮತ್ತು ಜಸೋಲಾಗಳಲ್ಲಿಯೂ ತೆರವು ಕಾರ್ಯಾಚರಣೆ ನಡೆಸಲು ಎಸ್‌ಡಿಎಂಸಿ ಉದ್ದೇಶಿಸಿತ್ತು. ಆದರೆ, ಪೊಲೀಸ್ ಸಿಬ್ಬಂದಿ ಲಭ್ಯರಿಲ್ಲದ ಕಾರಣ ಅದು ಸಾಧ್ಯವಾಗಲಿಲ್ಲ. ನ್ಯೂ ಫ್ರೆಂಡ್ಸ್ ಕಾಲೊನಿಯಲ್ಲಿ ಮಂಗಳವಾರ, ಮೆಹರ್‌ಚಂದ್ ಮಾರ್ಕೆಟ್‌ನಲ್ಲಿ ಬುಧವಾರ ತೆರವು ಕಾರ್ಯಾಚರಣೆ ನಡೆಯಲಿದೆ ಎಂದು ಎಸ್‌ಡಿಎಂಸಿ ಘೋಷಿಸಿದೆ.



ದೆಹಲಿಯ ಶಾಹೀನ್ ಬಾಗ್‌ನಲ್ಲಿ ಬುಲ್ಡೋಜರ್‌ಗಳನ್ನು ತಡೆದ ಸ್ಥಳೀಯರನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಯತ್ನಿಸಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಎಎಪಿ ಶಾಸಕ ಅಮಾನತ್ ಉಲ್ಲಾ ಖಾನ್ ಮತ್ತು ಬೆಂಬಲಿಗರ ವಿರುದ್ಧ ದೂರು
- ಒತ್ತುವರಿ ತೆರವಿಗೆ ಅಡ್ಡಿ ಮಾಡಿದ ಆರೋಪ
- ಒಂದು ಸಮುದಾಯವನ್ನು ಗುರಿಯಾಗಿಸಿ ತೆರವು: ಸ್ಥಳೀಯರ ಆರೋಪ

ರಾಜಕೀಯ ಬಣ್ಣ

ಎಎಪಿ ಮತ್ತು ಕಾಂಗ್ರೆಸ್ ಪ್ರತಿಭಟನೆ ನಡೆಸಿದ್ದರಿಂದ ತೆರವು ಕಾರ್ಯಾಚರಣೆಗೆ ರಾಜಕೀಯ ಬಣ್ಣವೂ ಬಂದಿದೆ. ಪ್ರತಿಭಟನೆ ನಡೆಸಿದ ಹಲವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕಾಂಗ್ರೆಸ್‌ನ ಮಾಧ್ಯಮ ಘಟಕದ ಉಪಾಧ್ಯಕ್ಷ ಪರ್ವೇಜ್ ಆಲಂ ಅವರನ್ನೂ ವಶಕ್ಕೆ ಪಡೆಯಲಾಗಿತ್ತು.

'ಬಿಜೆಪಿಯ, ಒತ್ತುವರಿ ವಿರೋಧಿ ಎಂದು ಹೇಳಲಾಗುತ್ತಿರುವ ಕಾರ್ಯಾಚರಣೆಯು ಬಡವರು, ಅಲ್ಪಸಂಖ್ಯಾತರಿಗೆ ಕಿರುಕುಳ ನೀಡುವ ಹಾಗೂ ಕಾನೂನು ಅನುಸಾರ ಆಳ್ವಿಕೆಯನ್ನು ಅಣಕಿಸಿ ಸಮಾಜವನ್ನು ಧ್ರುವೀಕರಿಸುವ ಸ್ಪಷ್ಟ ಕಾರ್ಯಸೂಚಿಯನ್ನು ಹೊಂದಿದೆ. ಬಿಜೆಪಿಯು ಬಡವರಿಗೆ ಒತ್ತುವರಿದಾರರು ಎಂಬ ಹಣೆಪಟ್ಟಿ ಕಟ್ಟಿದೆ. ಆದರೆ, ಶ್ರೀಮಂತರು ನೆಲೆಸಿರುವ ಸೈನಿಕ್ ಫಾರ್ಮ್‌ನಂತಹ ಪ್ರದೇಶದ ಒತ್ತುವರಿ ಕುರಿತು ಮೌನವಾಗಿದೆ. ಏಕೆ?' ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಟ್ವೀಟ್ ಮಾಡಿದ್ದಾರೆ.

ಕಾರ್ಯಾಚರಣೆಯನ್ನು ವಿರೋಧಿಸಿರುವ ಕಾಂಗ್ರೆಸ್ ಮತ್ತು ಎಎಪಿಯನ್ನು ಆದೇಶ್ ಗುಪ್ತಾ ಟೀಕಿಸಿದ್ದಾರೆ. 'ರೋಹಿಂಗ್ಯಾ ಸಮುದಾಯ ಮತ್ತು ಬಾಂಗ್ಲಾದೇಶೀಯರನ್ನು ಎಎಪಿ ಮತ್ತು ಅದರ ಶಾಸಕ ಬೆಂಬಲಿಸುತ್ತಿರುವುದು ಈಗ ಸಾಬೀತಾಗಿದೆ. ಬುಲ್ಡೋಜರ್‌ಗೆ ಅಡ್ಡ ನಿಂತಿರುವವರಿಗೆ ಜನರು ತಕ್ಕ ಉತ್ತರ ನೀಡಲಿದ್ದಾರೆ. ತೆರವು ಕಾರ್ಯಾಚರಣೆಯನ್ನು ಧರ್ಮದ ಜತೆಗೆ ತಳಕು ಹಾಕುವುದು ಬೇಡ ಎಂದು ಎಎಪಿ ಮತ್ತು ಕಾಂಗ್ರೆಸ್ ಪಕ್ಷವನ್ನು ಕೇಳಿಕೊಳ್ಳುತ್ತಿದ್ದೇನೆ' ಎಂದು ಗುಪ್ತಾ ಹೇಳಿದ್ದಾರೆ. 'ಅಕ್ರಮ ವಲಸಿಗರ ವಸತಿಗಳ ಬಗ್ಗೆ ಮಾಹಿತಿ ಇದ್ದರೆ ದೂರು ನೀಡಿ. ಅವುಗಳನ್ನು ತೆರವು ಮಾಡಿಸುತ್ತೇವೆ' ಎಂದು ಗುಪ್ತಾ ಅವರು ಕರೆ ನೀಡಿದ್ದಾರೆ.

ಸಿಪಿಎಂಗೆ ಸುಪ್ರೀಂ ಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಹೀನ್ ಬಾಗ್ ಪ್ರದೇಶದಲ್ಲಿ ದಕ್ಷಿಣ ದೆಹಲಿ ನಗರ ಪಾಲಿಕೆ ಸೋಮವಾರ ಆರಂಭಿಸಿದ್ದ ಒತ್ತುವರಿ ತೆರವು ಕಾರ್ಯಾಚರಣೆಗೆ ತಡೆ ನೀಡಿ ಎಂದು ಅರ್ಜಿ ಸಲ್ಲಿಸಿದ್ದ ಸಿಪಿಎಂ ಪಕ್ಷವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

'ಸಿಪಿಎಂ ಈ ಅರ್ಜಿಯನ್ನೇಕೆ ಸಲ್ಲಿಸಿದೆ? ಪಕ್ಷದ ಮೂಲಭೂತ ಹಕ್ಕನ್ನು ಉಲ್ಲಂಘಿಸಲಾಗಿದೆಯೇ? ರಾಜಕೀಯ ಪಕ್ಷಗಳ ಮನವಿಯ ಮೇರೆಗೆ ಇಂತಹ ಆದೇಶ ಹೊರಡಿಸಲು ಸಾಧ್ಯವಿಲ್ಲ. ಇದು ಅದಕ್ಕೆ ಸರಿಯಾದ ವೇದಿಕೆಯಲ್ಲ' ಎಂದು ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರ ರಾವ್ ಮತ್ತು ಬಿ.ಆರ್.ಗವಾಯಿ ಅವರಿದ್ದ ಪೀಠವು ಹೇಳಿದೆ.

'ಈ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಸಲ್ಲಿಸಲಾಗಿದೆ. ಜತೆಗೆ ಬೀದಿ ವ್ಯಾಪಾರಿಗಳು ಎರಡನೇ ವಾದಿಗಳಾಗಿದ್ದಾರೆ' ಎಂದು ಸಿಪಿಎಂ ಪರ ವಕೀಲ ಪಿ.ವಿ.ಸುರೇಂದ್ರನಾಥ್ ಅವರು ಹೇಳಿದರು. ಆಗ ಪೀಠವು, 'ಬೀದಿ ವ್ಯಾಪಾರಿಗಳು ಒತ್ತುವರಿ ಮಾಡಿದ್ದರೆ, ಅದನ್ನು ತೆರವು ಮಾಡಲಾಗುತ್ತದೆ. ತೆರವು ಕಾರ್ಯಾಚರಣೆ ವೇಳೆ ಕಾನೂನು ಉಲ್ಲಂಘನೆಯಾಗಿದ್ದರೆ, ಬೀದಿ ವ್ಯಾಪಾರಿಗಳು ಹೈಕೋರ್ಟ್‌ಗೆ ಹೋಗಲಿ' ಎಂದು ಪೀಠವು ಹೇಳಿತು.

> ಇಲ್ಲಿ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸುವುದಿಲ್ಲ. ಅದರಲ್ಲೂ ರಾಜಕೀಯ ಪಕ್ಷದ ಮನವಿಯ ಮೇರೆಗೆ ಮಧ್ಯಪ್ರವೇಶ ಸಾಧ್ಯವೇ ಇಲ್ಲ
> **ಸುಪ್ರೀಂ ಕೋರ್ಟ್**

'ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ಆದೇಶಗಳ ಅನ್ವಯವೇ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದರಲ್ಲಿ ಯಾವುದೇ ಕಾನೂನನ್ನು ಉಲ್ಲಂಘಿಸಿಲ್ಲ' ಎಂದು ಸರ್ಕಾರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ಆಗ ಸುರೇಂದ್ರನಾಥ್ ಅವರು, 'ಜಹಾಂಗೀರ್‌ಪುರಿಯಲ್ಲಿ ತೆರವು ಕಾರ್ಯಾಚರಣೆ ಸ್ಥಗಿತಕ್ಕೆ ಕೋರ್ಟ್ ತಡೆ ನೀಡಿತ್ತು' ಎಂದು ಉಲ್ಲೇಖಿಸಿದರು. ಆಗ ಪೀಠವು, 'ಅಲ್ಲಿ ಕಟ್ಟಡಗಳನ್ನು ತೆರವು ಮಾಡಲಾಗುತ್ತಿತ್ತು. ಹೀಗಾಗಿ ತಡೆ ನೀಡಲಾಗಿತ್ತು. ಆ ಆದೇಶವನ್ನು ಎಲ್ಲದಕ್ಕೂ ಅನ್ವಯಿಸಿಕೊಳ್ಳಲು ಸಾಧ್ಯವಿಲ್ಲ. ನೀವು ಕಾನೂನುಬಾಹಿರವಾಗಿ ಕಟ್ಟಡ ನಿರ್ಮಿಸಿ, ನಾವು ಅದನ್ನು ರಕ್ಷಿಸುತ್ತೇವೆ ಎಂದುಕೊಂಡಿದ್ದೀರಾ. ನಾವು ಎಲ್ಲಾ ಒತ್ತುವರಿ ತೆರವು ಕಾರ್ಯಾಚರಣೆಗೆ ತಡೆ ನೀಡಿಲ್ಲ' ಎಂದು ಹೇಳಿತು.

ಆಗ ಸುರೇಂದ್ರನಾಥ್ ಅವರು, 'ಹೈಕೋರ್ಟ್ ಈ ವಿಷಯವನ್ನು ವಿಚಾರಣೆಗೆ ಎತ್ತಿಕೊಳ್ಳುವುದಿಲ್ಲ' ಎಂದರು. ಆಗ ಪೀಠವು ತೀವ್ರ ಆಕ್ಷೇಪ ವ್ಯಕ್ತಪಡಿಸಿತು. 'ಇದು ಸರಿಯಲ್ಲ. ಈ ರೀತಿ ಅರ್ಜಿ ಸಲ್ಲಿಸುವುದು ಸರಿಯಲ್ಲ. ನೀವು ಇಡೀ ಒಂದು ದಿನವನ್ನು ಇಲ್ಲಿ ಕಳೆದಿದ್ದೀರಿ, ಬದಲಿಗೆ ಹೈಕೋರ್ಟ್‌ಗೆ ಹೋಗಬಹುದಿತ್ತು. ಆದರೆ, ಇಲ್ಲಿಗೆ ಬಂದಿದ್ದೀರಿ. ಒಂದು ರಾಜಕೀಯ ಪಕ್ಷವು ಇಲ್ಲಿಗೆ ಬಂದು, ಹೈಕೋರ್ಟ್ ವಿಚಾರಣೆ ನಡೆಸುವುದಿಲ್ಲ ಎಂದು ಹೇಳುವುದು ತೀರಾ ಅತಿಯಾಯಿತು. ನೀವು ಹೀಗೆ ಹೇಗೆ ಹೇಳುತ್ತೀರಿ? ಇದು ಹೈಕೋರ್ಟ್‌ಗೆ ತೋರಿಸುತ್ತಿರುವ ಅಗೌರವ' ಎಂದು ಪೀಠವು ಆಕ್ಷೇಪ ವ್ಯಕ್ತಪಡಿಸಿತು.

ಮಂತ್ರದಂಡ ಇಲ್ಲ: ಸೋನಿಯಾ

ನವದೆಹಲಿ: ಪಕ್ಷದ ಪುನರ್ ಸಂಘಟನೆಗೆ ವೇಗ ನೀಡಲು ಎಲ್ಲರ ಒಗ್ಗಟ್ಟು ಹಾಗೂ ಬದ್ಧತೆ ಅಗತ್ಯವಿದ್ದು, ಈ ಸಂದೇಶವನ್ನು ರವಾನಿಸಲು ಉದಯಪುರದಲ್ಲಿ ನಡೆಯಲಿರುವ ಕಾಂಗ್ರೆಸ್ ಚಿಂತನ ಶಿಬಿರಕ್ಕೆ ಎಲ್ಲ ಮುಖಂಡರ ಸಹಕಾರ ಬೇಕು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹೇಳಿದ್ದಾರೆ.

ಉನ್ನತ ನಿರ್ಧಾರ ತೆಗೆದುಕೊಳ್ಳುವ 'ಕಾಂಗ್ರೆಸ್ ಕಾರ್ಯಕಾರಿ ಸಮಿತಿ' ಸಭೆ (ಸಿಡಬ್ಲ್ಯುಸಿ) ಉದ್ದೇಶಿಸಿ ಸೋಮವಾರ ಮಾತನಾಡಿದ ಅವರು, ಪಕ್ಷದ ತಕ್ಷಣದ ಪುನರುಜ್ಜೀವನಕ್ಕೆ ಯಾವುದೇ ಮಂತ್ರದಂಡವಿಲ್ಲ. ನಿಸ್ವಾರ್ಥ ಕೆಲಸ, ಶಿಸ್ತು, ಜಾಗೃತ ಪ್ರಜ್ಞೆಯಿಂದ ಇದು ಸಾಧ್ಯ ಎಂದರು. 'ಚಿಂತನ ಶಿಬಿರವು ಕೇವಲ ಒಂದು ಆಚರಣೆ ರೀತಿ ಆಗಬಾರದು. ಮುಂದಿರುವ ಸೈದ್ಧಾಂತಿಕ, ಚುನಾವಣಾ ಸವಾಲುಗಳನ್ನು ಎದುರಿಸುವ ದಿಸೆಯಲ್ಲಿ ಶಿಬಿರವು ಪಕ್ಷದ ಪುನರ್ ಸಂಘಟನೆಗೆ ಮಾರ್ಗ ಹಾಕಿಕೊಡಬೇಕು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ದೆಹಲಿಯಲ್ಲಿ ಸೋಮವಾರ ನಡೆದ ಸಿಡಬ್ಲ್ಯುಸಿ ಸಭೆಗೆ ಬಂದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ –ಪಿಟಿಐ ಚಿತ್ರ

ಇದೇ 13ರಿಂದ 15ರವರೆಗೆ ನಡೆಯಲಿರುವ ಶಿಬಿರದಲ್ಲಿ 400 ಕಾಂಗ್ರೆಸ್ ಸದಸ್ಯರು ಭಾಗಿಯಾಗಲಿದ್ದಾರೆ. ರಾಜಕೀಯ, ಆರ್ಥಿಕ, ಸಾಮಾಜಿಕ ನ್ಯಾಯ, ರೈತರು, ಯುವಜನಾಂಗ ಹಾಗೂ ಸಂಘಟನಾ ವಿಚಾರಗಳ ಚರ್ಚೆ ನಡೆಯಲಿದೆ. ಕೊನೆಯ ದಿನ 'ಉದಯಪುರ ನವ ಸಂಕಲ್ಪ'ವನ್ನು ಪಕ್ಷ ಮಾಡಲಿದೆ. ಡಿಜಿಟಲ್ ಸದಸ್ಯತ್ವ ಸೇರ್ಪಡೆ ಮಾಡಲು ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ಸೋನಿಯಾ ತಿಳಿಸಿದರು.

ಕ್ಷೇಮ ಕುಶಲ



ವಿಶ್ವಾಸವೆಂಬ ವಿಶ್ವನೀತಿ



‘ವಿಶ್ವಾಸ’ಕ್ಕೆ ಪದಕೋಶದಲ್ಲಿ ಭರವಸೆ, ನಂಬಿಕೆ, ನಿರೀಕ್ಷೆ, ಹಾರೈಕೆ ಎಂಬ ಅರ್ಥಗಳಿವೆ. ಎಲ್ಲ ಧಾರ್ಮಿಕ ಗ್ರಂಥಗಳಲ್ಲೂ ವಿಶ್ವಾಸದ ಬಗ್ಗೆ ಒತ್ತಿಹೇಳಲಾಗಿದೆ. ಯಾರು ವಿಶ್ವಾಸಿಗರೋ ಅವರು ವಿಜಯಿಗಳು ಎನ್ನಲಾಗಿದೆ.

ರಘು ವಿ.

ಬದುಕನ್ನು ಕಟ್ಟಿಕೊಡುವ ಹಲವಾರು ಆಯಾಮಗಳಲ್ಲಿ ವಿಶ್ವಾಸವೂ ಒಂದು. ವ್ಯಕ್ತಿಯನ್ನು ಆಂತರಿಕವಾಗಿ ಭದ್ರಗೊಳಿಸುವುದಲ್ಲದೇ ಶಕ್ತಿ ಉತ್ಸಾಹಗಳನ್ನೂ ತುಂಬಿಕೊಡುತ್ತದೆ. ವಿಶ್ವಾಸ ಗಳಿಸುವ, ಉಳಿಸುವ, ಬೆಳೆಸುವ ಮಾರ್ಗ ಮಾತ್ರ ಬಹಳ ಕಠಿಣವಾದದ್ದು. ಗಟ್ಟಿಯಾದರೆ ಅದರಂತಹ ಸಿಹಿಜೇನು ಮತ್ತೊಂದಿಲ್ಲ, ಕೆಟ್ಟರೆ ಅದಕ್ಕಿಂತ ಘೋರ ಕಹಿ ಮತ್ತೊಂದಿಲ್ಲ. ವಿಶ್ವಾಸವೆಂಬುದು ಒಂದು ಆಂತರಿಕ ಮೌಲ್ಯ. ವ್ಯಕ್ತಿಯ ಮಾನುಷ ಮತ್ತು ಸಾಮಾಜಿಕ ಸಂಬಂಧವನ್ನು ಕಟ್ಟಿಕೊಡುವ ಅಥವಾ ಕುಟ್ಟಿ ಕೆಡಹುವ ಕೆಲಸ ಅದರದ್ದು. ನಿಜ ಹೇಳಬೇಕೆಂದರೆ ವಿಶ್ವಾಸಕ್ಕೆ ವಿರುದ್ಧಪದ ಇಲ್ಲ. ‘ಅವಿಶ್ವಾಸ’ ಎಂದು ನಾವು ವಿರುದ್ಧಪದವನ್ನು ಗುರುತಿಸಿದರೂ ಭಾವಕೋಶದಲ್ಲಿ ಅವಿಶ್ವಾಸ ಎಂಬ ಪದವೇ ಇಲ್ಲ. ವಿಶ್ವಾಸ ಎಂಬುದು ಇದೆ ಅಥವಾ ಇಲ್ಲ, ಅಷ್ಟೆ. ಅವಿಶ್ವಾಸಕ್ಕೆ ಅಸ್ತಿತ್ವ ಇಲ್ಲ. ದುರ್ಯೋಧನ ಅವಿಶ್ವಾಸಿಯೇ? ಅವನು ಪಾಂಡವರ ಮೇಲೆ ವಿಶ್ವಾಸ ಇಡಲಿಲ್ಲ ಅಷ್ಟೆ. ಅದೇ ದುರ್ಯೋಧನ ಕರ್ಣ, ಶಕುನಿ ಮೊದಲಾದವರಲ್ಲಿ ವಿಶ್ವಾಸ ಇಟ್ಟಿದ್ದನಲ್ಲ!

‘ವಿಶ್ವಾಸ’ಕ್ಕೆ ಪದಕೋಶದಲ್ಲಿ ಭರವಸೆ, ನಂಬಿಕೆ, ನಿರೀಕ್ಷೆ, ಹಾರೈಕೆ ಎಂಬ ಅರ್ಥ ಕಾಣಿಸಲಾಗಿದೆ. ಎಲ್ಲ ಧಾರ್ಮಿಕ ಗ್ರಂಥಗಳಲ್ಲೂ ವಿಶ್ವಾಸದ ಬಗ್ಗೆ ಒತ್ತಿಹೇಳಲಾಗಿದೆ. ಯಾರು ವಿಶ್ವಾಸಿಗರೋ ಅವರು ವಿಜಯಿಗಳು ಎನ್ನಲಾಗಿದೆ. ಆದರೆ ಈ ವಿಶ್ವಾಸ ದುರ್ಯೋಧನ ಬಗೆಯ ವಿಶ್ವಾಸವಾಗಬೇಕೋ ಕೃಷ್ಣನ ಬಗೆಯ ವಿಶ್ವಾಸವಾಗಬೇಕೋ ಎಂಬುದು ನಮ್ಮ ವಿವೇಕಕ್ಕೆ ಬಿಟ್ಟ ವಿಚಾರ. ಈ ವಿಶ್ವಾಸಕ್ಕೂ ಒಂದು ಬೇರು ಇರಬೇಕಲ್ಲವೆ? ಅದು ವಿಶ್ವಾಸದ ಸ್ವರೂಪವನ್ನು ನಿರ್ಧರಿಸುತ್ತದೆ. ಈ ಬೇರೇ ನಮ್ಮ ಕರ್ಮದ ಬೀಜ. ದುರ್ಯೋಧನ ಕರ್ಣನನ್ನು ಏಕೆ ಆರಿಸಿಕೊಂಡ, ಪಾಂಡವರು ಕೃಷ್ಣನನ್ನು ಏಕೆ ಆರಿಸಿಕೊಂಡರು ಎಂಬುದಕ್ಕೂ ಇದೇ ಉತ್ತರ. ಬೈಬಲ್‌ನ ಒಂದು ಉಕ್ತಿ ಹೀಗಿದೆ: ‘ವಿಶ್ವಾಸ ವರ್ತಮಾನದ ಭರವಸೆ, ಕಾಣದುದರ ಬಗೆಗಿನ ನಂಬಿಕೆ’ (Hebrews 11:1 Faith is the assurance of things hoped for, the conviction of things not seen). ದುರ್ಯೋಧನ ಕರ್ಣನಲ್ಲಿ ಪಾಂಡವವೈರಿಯನ್ನು ಕಂಡು ಅವನಲ್ಲಿ ಪ್ರೀತಿ ಬೆಳೆಸಿದ, ವಿಶ್ವಾಸ ಸ್ಥಾಪಿಸಿದ. ಆದರೆ ಕೃಷ್ಣನು ಪಾಂಡವರಲ್ಲಿ ಅವರ ಹಿತದೊಂದಿಗೆ ಲೋಕಹಿತವನ್ನೂ ಸ್ಥಾಪಿಸುವುದಕ್ಕಾಗಿ ವಿಶ್ವಾಸ ಹೊಂದಿದ್ದ. ದುರ್ಯೋಧನ ಎಲ್ಲಿಯೂ ಕರ್ಣನನ್ನು ತಿದ್ದುವ ತೀಡುವ ಪ್ರಯತ್ನ ಮಾಡದೆ ಕೆರಳಿಸುತ್ತ, ಕೆಲವೊಮ್ಮೆ ದೂಷಿಸುತ್ತ ಅವನನ್ನು ಕುದಿಸಿ ಕಾಯಿಸಿದ. ಆದರೆ ಕೃಷ್ಣ ಎಷ್ಟೋ ಸಮಯದಲ್ಲಿ ಪಾಂಡವರನ್ನು ತರಾಟೆಗೆ ತೆಗೆದುಕೊಳ್ಳಲು ಹಿಂಜರಿಯಲಿಲ್ಲ. ಓಲೈಕೆಯೆಂಬುದು ಖಂಡಿತ ವಿಶ್ವಾಸವಾಗದು; ಹಾಗೇ ತುಷ್ಟೀಕರಣವೂ ವಿಶ್ವಾಸವಾಗದು. ಇದು ಅಂತರಂಗಕ್ಕೆ ಅರಿವಾಗುವ ವಿಚಾರ. ಲೋಕವ್ಯವಹಾರದಲ್ಲಿ ನಿಜವಾದ ವಿಶ್ವಾಸ ಆಚರಣೆಗೆ ಬಂದರೆ ಈ ಭೂಮಿ, ಈ ಬದುಕು ಮತ್ತಷ್ಟು ಹಸನಾಗುತ್ತದೆ.

‘ವಿಶ್ವಾಸವೆಂಬುದು ಹೃದಯದೊಳಗಿನ ಓಯಸಿಸ್, ಅದನ್ನು ನೀನು ಆಲೋಚನೆಯ ಪಯಣದ ಮೂಲಕ ಮುಟ್ಟಲಾರೆ’ ಎನ್ನುತ್ತಾನೆ, ಗಿಬ್ರಾನ್. ಅಂದರೆ, ತರ್ಕದಾಚೆಗಿನ ನಂಬುಗೆಯ ಎಳೆಯ ಮೂಲಕ ಹೃದಯವನ್ನು ತಲುಪಿದಾಗ ಅದು ವಿಶ್ವಾಸವನ್ನು ಕಾಣುತ್ತದೆ ಎಂಬುದು ಅವನ ಅಭಿಪ್ರಾಯ. ಇಲ್ಲಿ ಮತ್ತೂ ಒಂದು ಸೂಕ್ಷ್ಮವಿದೆ. ಈ ನಂಬುಗೆಯೆಂಬುದು ಕೂಡ ಸುಮ್ಮನೆ ಬರುವುದೆ? ಕೆಲವು ದಿನದ ಒಡನಾಟದಿಂದ, ಕೆಲವು ವ್ಯವಹಾರಗಳಿಂದ ಮೂಡುತ್ತದೆ. ನಂಬಿಕೆಯ ಫಲವಾಗಿ ವಿಶ್ವಾಸ. ಇವೆಲ್ಲ ರಮ್ಯ, ಸಾಧ್ಯ. ಆದರೆ ವಿಶ್ವಾಸದ ಜೊತೆಗೇ ಅದರ ನಕಾರಾತ್ಮಕ ಫಲ, ವಿಶ್ವಾಸದ್ರೋಹವೂ ಇದೆ ಅಲ್ಲವೆ? ಹೀಗಾದದ್ದು ಎಲ್ಲ ಕಡೆ ಉಂಟು. ಶಲ್ಯ ಕರ್ಣನಿಗೆ ವಿಶ್ವಾಸದ್ರೋಹ ಮಾಡಿದನೋ? ಸಾರಥಿಯಾದವನು ನಿರ್ಣಾಯಕ ಯುದ್ಧದ ವಿಷಮ ಸಂದರ್ಭದಲ್ಲಿ ರಥವನ್ನು ತ್ಯಜಿಸಿ ಹೋದನಲ್ಲ! ಅಥವಾ ಕರ್ಣ ಶಲ್ಯನ ವಿಶ್ವಾಸದ ಸಲಹೆ ತಿರಸ್ಕರಿಸಿ ಅವನು ವಿಶ್ವಾಸದ್ರೋಹ ಮಾಡಿದನೋ? ಇವುಗಳಿಗೆ ಉತ್ತರಿಸುವುದು ಕಷ್ಟ. ಆದರೆ ಇಬ್ಬರೂ ಉಬ್ಬುಬ್ಬಿ ಕೆಟ್ಟರು ಎಂಬುದೂ ನಿಜ. ಕೊನೆಗೆ ಕರ್ಣ ಅರ್ಜುನನಿಂದ ಹತನಾದರೆ, ಶಲ್ಯ ಯುಧಿಷ್ಠರನಿಂದ ಹತನಾದ.

ಹಾಗಾದರೆ ಈ ವಿಶ್ವಾಸದ ‘ವ್ಯವಹಾರ’ ಹೇಗೆ? ಈ ವಿಚಾರದಲ್ಲಿ ನಾವು ಕಗ್ಗದ ಪದ್ಯವನ್ನು ಆಧರಿಸಬಹುದು: ‘ಅಂದಿಗಂದಿನ ಕೆಲಸ, ಸಂದನಿತರಲಿ ತೃಪ್ತಿ, ಕಂದದುಬ್ಬದ ಮನಸು ಬಂದುದೇನಿರಲಿ, ಬಂಧುಮತಿ ಲೋಕದಲಿ, ಮುನ್ ದೃಷ್ಟಿ ಪರಮದಲಿ, ಹೊಂದಲಿರುವುದು ಪುಣ್ಯ – ಮಂಕುತಿಮ್ಮ’. ಆ ಹೊತ್ತಿನ ಬದುಕಿಗೆ ದೊರೆತುದರ ಬಗ್ಗೆ ಸಮಾಧಾನದಿಂದ, ಹಿಗ್ಗದೆ, ಕುಗ್ಗದೆ ಲೋಕದಲ್ಲಿ ಸಮಾನ ಪ್ರೀತಿ-ವಿಶ್ವಾಸಗಳನ್ನು ಹೊಂದಿ, ಉನ್ನತದತ್ತ ದೃಷ್ಟಿ ಕೇಂದ್ರೀಕರಿಸಿ ಜೀವನ ನಡೆಸಿದರೆ ಪುಣ್ಯಸಂಚಯವಾಗುತ್ತದೆ ಎನ್ನುತ್ತಾರೆ, ಕಗ್ಗದ ಕವಿ. ವಿಶ್ವಾಸವೆಂದರೆ ಅವಲಂಬನೆ ಎಂದೂ ಭಾವಿಸಬಾರದು. ಈ ದೃಷ್ಟಿಯಿಂದಲೇ ಕಗ್ಗದ ಕವಿ ‘ಬಂಧುಮತಿ ಲೋಕದಲಿ’ ಎನ್ನುತ್ತಾರೆ. ಕರ್ಣ-ದುರ್ಯೋಧನರದು ಅವಲಂಬನೆಯ ವಿಶ್ವಾಸ. ಕೃಷ್ಣ-ಪಾಂಡವರದು ಬಂಧುಮತಿಯ ವಿಶ್ವಾಸ. ಯಾವ ಯಾದವರನ್ನು ವಿಶ್ವಾಸದಿಂದ ಜೀವನವಿಡೀ ಕಾಪಿಟ್ಟನೋ ಅದೇ ಯಾದವರನ್ನು ಯಾದವೀಕಲಹದಲ್ಲಿ ಬಡಿದುಕೊಲ್ಲಲು ಕೃಷ್ಣ ಹಿಂಜರಿಯಲಿಲ್ಲ. ವಿಶ್ವಾಸವೆಂಬುದೊಂದು ಸೂಕ್ಷ್ಮ ಮೌಲ್ಯ. ಅದನ್ನು ರೂಢಿಸಿಕೊಳ್ಳುವ ಪ್ರಯತ್ನದಲ್ಲಿ ಬದುಕಿನ ಹೊಸಪಾಠಗಳು ಅಡಗಿರುತ್ತವೆ. ಅದರ ಸ್ಥಾಪನೆಯಾದಾಗವೊಂದು ಸೊಗ, ಕೈಜಾರಿದಾಗ ಒಂದು ಪಾಠ. ಕೊನೆಗೊಂದು ಸಮತೋಲನದಲ್ಲಿ ಸುಖ. ಇದನ್ನು ಪಡೆಯುವ ವಿಶ್ವಾಸ ಸಮಗಿರಲಿ! ❖

ಸಹಜ ಸೌಂದರ್ಯಕ್ಕೆ ಸರಳ ಸಾಧನಗಳು

ಡಾ. ವಿಜಯಲಕ್ಷ್ಮಿ ಪಿ.

‘ಅಜ್ಜೀ...’ ಅಂತಾ ಕೂಗ್ತಾ ಬಂದ್ಲು ಶ್ವೇತಾ. ಅಜ್ಜೀನ ನೋಡಿ ಪ್ರಶ್ನೆ ಕೇಳಕ್ಕೆ ಪ್ರಾರಂಭ ಮಾಡಿದಳು.

‘ಅಜ್ಜೀ ನಿನ್ನ ಸೌಂದರ್ಯದ ಗುಟ್ಟೇನು? ಚರ್ಮದ ಕಾಂತಿ ಇಷ್ಟು ವರ್ಷ ಆದ್ರೂ ಚೆನ್ನಾಗಿರೋದು ಹೇಗೆ? ದೇವಸ್ಥಾನಕ್ಕೆಲ್ಲಾ ನಡ್ಕೊಂಡೆ ಹೋಗಿ ಬರ್ತೀಯಾ. ಕಾಲುನೋವು, ಗಂಟುನೋವು ಇಲ್ಲವಾ? ಕಣ್ಣಿನಲ್ಲೂ ಹೊಳಪಿದೆ. ಇದು ಹೇಗೆ ಸಾಧ್ಯ? ಮನೆಗೆ ಬಂದವರನ್ನೆಲ್ಲಾ ಉಪಚಾರ ಮಾಡ್ತೀಯ ಬೇಜಾರಾಗಲ್ವಾ ನಿನಗೆ? ಈ ಬಿಸಿಲಲ್ಲೂ ಸುಸ್ತಾಗದೆ ಹೇಗೆ ಕೆಲಸ ಮಾಡ್ತೀಯಾ?’ ಅಂತಾ.

ಒಂದೇ ಉಸಿರಿನಲ್ಲಿ ಕೇಳಿದ ಪ್ರಶ್ನೆಗೆ, ಸ್ವಲ್ಪ ಸುಧಾರಿಸಿಕೋ ಅಂತಾ ಹೇಳಿ ಅಜ್ಜಿ ‘ಈವಾಗ್ಯಾಕೆ ನಿನಗೆ ಈ ಪ್ರಶ್ನೆ ಬಂತು?’ ಅಂತಾ ಕೇಳಿದರು. ಅದಕ್ಕವಳು ‘ಬೇಸಿಗೆಯಲ್ಲಿ ಮೈಯೆಲ್ಲಾ ಉರಿ ಬರತ್ತೆ, ಚಳಿಗಾಲದಲ್ಲಿ ಮೈಯೆಲ್ಲಾ ಒಡೆದು ಒರಟಾಗತ್ತೆ, ಹಾಗೆ ಚಳಿಗಾಲದಲ್ಲಿ ಗಂಟುನೋವು ಬಂದರೆ, ಬೇಸಿಗೆಯಲ್ಲಿ ಬರುವ ನೋವಿನ ಜೊತೆ ಕಟಕಟಾಂತ ಶಬ್ದಾನೂ ಬರತ್ತೆ. ಹಾಗೆ ಬೇಸಿಗೆಯಲ್ಲಿ ಉಷ್ಣ ಆಗಿ ಕಣ್ಣು ಉರಿ ಕೆಂಪಾಗೋದು ಎಲ್ಲಾ ಆಗತ್ತೆ, ತಲೆನೋವು ಬರತ್ತೆ. ಇದನ್ನೆಲ್ಲಾ ಸುಧಾರಿಸಿಕೊಂಡು ನಮ್ಮ ಸೌಂದರ್ಯ ಕಾಪಾಡಿಕೊಳ್ಳೋಕೆ ನಾವು ಏನೇನೋ ಮಾಡ್ಕೋಳ್ತಾನೇ ಇರ್ತೀವಿ, ಆದರೆ ಬ್ಯೂಟಿ ಪಾರ್ಲರ್‌ಗಳು ಇಲ್ಲದಿದ್ದ ಕಾಲದಲ್ಲಿ ನೀವು ಏನು ಮಾಡ್ತಾ ಇದ್ರೀ ಅನ್ನೋ ಕುತೂಹಲ ಅಷ್ಟೇನೆ’ ಅಂದ್ಲು.

ಅದಕ್ಕೆ ಅಜ್ಜಿ, ‘ನೋಡಮ್ಮಾ ಇದಕ್ಕೆಲ್ಲಾ ನಮ್ಮ ಕಾಲದ ಶಿಸ್ತಿನ ಜೀವನ, ಶಿಸ್ತಿನ ಆಹಾರಾನೇ ಕಾರಣ. ಮನೆಯವರೆಲ್ಲಾ ಸೂರ್ಯ ಹುಟ್ಟೋದಕ್ಕೆ ಒಂದು ಗಂಟೆ ಮುಂಚೇನೆ ಏಳ್ತಾ ಇದ್ವಿ. ಮನೆ ಗುಡಿಸಿ, ಒರೆಸಿ, ಬಾವಿಯಿಂದ ನೀರು ಸೇದಿ ತುಂಬಿ, ಬಾಗಿಲಿಗೆ ನೀರು ಹಾಕೋದು, ರಂಗೋಲಿ ಹಾಕುವ ಹೊತ್ತಿಗೆ ನಮ್ಮ ದೇಹಕ್ಕೆ ಒಂದಿಷ್ಟು ವ್ಯಾಯಾಮ ಆಗೋದು. ಬೆಳಗಿನ ಜಾವದ ಒಳ್ಳೆ ಗಾಳಿನೂ ಸಿಗೋದು, ನಿಧಾನವಾಗಿ ಎಳೆ ಬಿಸಿಲೂ ಮೈಗೆ ತಾಗೋದು. ಅದೇನೋ ನೀವು ಹೇಳ್ತೀರಲ್ಲಾ ಆಕ್ಸಿಜನ್ನು, ಓಜೋನು, ವಿಟಮಿನ್ನು ಅಂತಾ ಅದೆಲ್ಲಾ ಬೆಳಗ್ಗೆ ಬೇಗ ಎದ್ದು ಸೂರ್ಯನ ಎಳೇ ಬಿಸಿಲಲ್ಲಿ ಕೆಲಸ ಮಾಡೋದ್ರಿಂದಾನೇ ಬರ್ತಾ ಇತ್ತು. ಅನುಕೂಲ ಇದ್ದೋವ್ರು ಮೈಗೆ ದಿನಾ ಎಣ್ಣೆ ಹಚ್ಚಿ ಹದಾ ಬಿಸಿನೀರಿನಿಂದ ಸ್ನಾನ ಮಾಡ್ತಾ ಇದ್ವಿ, ಕಡೇ ಪಕ್ಷ ಶುಕ್ರವಾರ ಮಂಗಳವಾರನಾದ್ರೂ ತಲೆಗೆ, ಮೈಗೆ ಎಲ್ಲಾ ಚೆನ್ನಾಗಿ ಎಣ್ಣೆ ಹಚ್ಚಿ ಸ್ನಾನ ಮಾಡ್ತಾ ಇದ್ವಿ.’

‘ಯಾವ ಎಣ್ಣೆ ಹಚ್ತಾ ಇದ್ರಿ?’

‘ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಅಥವಾ ಹರಳೆಣ್ಣೆ. ತುಂಬಾ ಉಷ್ಣ ಆಗಿದ್ರೆ ಹರಳೆಣ್ಣೆನೋ, ಇಪ್ಪೆ ಎಣ್ಣೆನೋ, ಹಚ್ತಾ ಇದ್ವಿ; ಶೀತ ಜಾಸ್ತಿ ಇದ್ರೆ, ವಿಪರೀತ ಸೀನು ಬರ್ತಾ ಇದ್ರೆ, ಎಳ್ಳೆಣ್ಣೆ ಬಿಸಿ ಮಾಡಿ ಅಥವಾ ಸಾಸಿವೆ, ಓಮ, ಜೀರಿಗೆ ಹಾಕಿ ಎಳ್ಳೆಣ್ಣೆ ಒಗ್ಗರಣೆ ಮಾಡಿ, ಹದಾ ಬಿಸಿ ಇರುವಾಗ ತಲೆಗೆ ಹಚ್ಚೆ, ಮುಕ್ಕಾಲು ಗಂಟೆ ನೆನೆದು ಮತ್ತೆ ಸೀಗೆಕಾಯಿಪುಡಿನೋ ಕಡ್ಲೆಹಿಟ್ಟೋ ಹಾಕಿ ಸ್ನಾನ ಮಾಡ್ತಾ ಇದ್ವಿ. ಮೈಗೂ ಸೀಗೆಕಾಯಿಪುಡಿನೇ ಹಚ್ತಾ ಇದ್ದಿದ್ದು. ಶೀತ ಆದಾಗ ಮಾತ್ರಾ ಬಜೆಪುಡಿನೋ, ಅಗರಿನ ಪುಡಿನೋ ಸೇರಿಸಿ ಹಚ್ಚಿದ್ರೆ ಶೀತ ಎಲ್ಲಾ ಕಡಿಮೆ ಅಗ್ತಾ ಇತ್ತು. ತುಂಬಾ ಥಂಡಿ, ಸೀನು ಉರಿಶೀತದ ತರಹ ಆಗಿದ್ರೆ ಎಳ್ಳೆಣ್ಣೆಗೆ ತುಳಸಿ ಹಾಕಿ ಕಾಯಿಸಿ ಹಚ್ಕೋತಾ ಇದ್ವಿ, ಇದರಿಂದ ಬೇಸಿಗೆಯಲ್ಲಿ ಬರೋ ಸೀನು, ತಲೆನೋವು ಎಲ್ಲಾ ಕಡಿಮೆ ಆಗ್ತಾ ಇದ್ವು. ಅಲ್ಲದೆ ಮೈಗೆ ಎಣ್ಣೆ ಹಚ್ಕೋದ್ರಿಂದ ಸಂದುಗಳಲ್ಲಿ ಜಿಡ್ಡಿನಂಶ ಸೇರಿ ಗಂಟುನೋವು ಬರ್ತಾನೇ ಇರಲಿಲ್ಲ. ಆದ್ರೆ ನಮಜ್ಜಿಗೆ ಮಡಿಕೇಲಿ ಇಟ್ಟಿರೋ ಮೊಸರು ಅಂದ್ರೆ ಇಷ್ಟ, ಅದನ್ನ ತಿಂದಾಗಲೆಲ್ಲಾ ಅವರಿಗೆ ಎಲ್ಲಾ ಸಂದುಗಳಲ್ಲು ಮುಖ್ಯವಾಗಿ ಮಂಡಿನಲ್ಲಿ ಊತ ಬಂದು ಬಿಡೋದು. ಅದಕ್ಕೆ ನಮ್ಮ ತಾತಾನೇ ಪಂಡಿತರಲ್ಲಾ! ಅದೇನೋ ಪುಡಿ ಕೊಟ್ಟು ಶುಂಠಿ ಅರೆದು ಹಚ್ತಾ ಇದ್ರು, ಕೆಲವು ಸಲ ಬೆಳ್ಳುಳ್ಳಿನೂ ಸೇರಿಸ್ತಾ ಇದ್ರು, ಒಂದೆರಡು ದಿನದಲ್ಲೇ ಊತ ನೋವು ಎಲ್ಲಾ ಹೊರಟು ಹೋಗ್ತಾ ಇತ್ತು. ಈಗ ಅದಕ್ಕೆಲ್ಲಾ ಎಲ್ಲಿ ಪುರುಸೊತ್ತಿರತ್ತೆ, ಎಲ್ಲಾದಕ್ಕು ಒಂದು ಮಾತ್ರೆ ತೊಗೊಂಡ್ರೆ ಆಯ್ತು.’

‘ಕಣ್ಣುರಿತಿದ್ರೆ, ರೆಪ್ಪೆ ಮೇಲೆ ಹರಳೆಣ್ಣೆನೋ ತುಪ್ಪಾನೋ, ಅಥವಾ ಬೆಣ್ಣೆನೋ ಹಚ್ಚಿದ್ರೆ ಕಡಿಮೆ ಆಗ್ತಾ ಇತ್ತು, ಮತ್ತೆ ನಿತ್ಯ ಕಣ್ಣಿಗೆ ಕಾಡಿಗೆ ಹಚ್ಚುತ್ತಾ ಇದ್ವಿ. ಹೊನಗೊನ್ನೆಸೊಪ್ಪಿನ ರಸದಲ್ಲಿ, ನಂದಿಬಟ್ಟಲು ಹೂವಿನ ರಸದಲ್ಲಿ ಕರಿ ಕಟ್ಟಿಸಿ, ಬೆಣ್ಣೆ, ತುಪ್ಪ ಅಥವಾ ಹೊಂಗೆ ಎಣ್ಣೆ, ಹೊನ್ನೆಣ್ಣೆನಲ್ಲಿ ಕರಿಕಲಸಿ ಹಚ್ತಾ ಇದ್ವಿ. ಇದರಿಂದ ಕಣ್ಣು ಎಷ್ಟು ತಂಪಾಗೋದು ಗೊತ್ತಾ. ಹಾಗೆ ಕಣ್ಣು ನವೆ ಆದ್ರೆ ಗುಲಾಬಿನೀರಿನಲ್ಲಿ ಕಣ್ಣು ತೊಳ್ಕೋಬಹುದು ಅಥವಾ ಕೆಮ್ಮಣ್ಣನ್ನ ಹಾಲಿನಲ್ಲಿ ಕಲೆಸಿ ರೆಪ್ಪೆ ಮೇಲೆ ಹಚ್ಚಬಹುದು ಅಂತಾ ನಮ್ಮಮ್ಮ ಹೇಳೋಳು.’

‘ಅಜ್ಜೀ ಕಾಡಿಗೆ ನೀವೇ ಮಾಡ್ತಾ ಇದ್ರಾ?’

‘ಹ್ಞೂ... ಹೌದು. ಚರ್ಮ ಹೇಗೆ ಇಷ್ಟು ಮೃದುವಾಗಿದೆ ಅಂದೆ ಅಲ್ವಾ? ಯಾಕಂದ್ರೆ, ಸೀಗೆಕಾಯಿಯ ಜೊತೆ, ಗಂಧ, ಚಂದನ, ಅರಿಸಿನ, ಕಚೋರ ಇವುಗಳನ್ನೆಲ್ಲಾ ಒಟ್ಟಿಗೆ ಪುಡಿಮಾಡಿ ಮೈಗೆ ತಿಕ್ಕಿ ಸ್ನಾನ ಮಾಡೊದ್ರಿಂದ ಚರ್ಮರೋಗಗಳು ಬರೋಲ್ಲ, ಇರುವ ರೋಗಗಳನ್ನು ಗುಣಮಾಡತ್ತೆ. ಬಿಸಿಲಿಗೆ ಹೋದ್ರೂ ಚರ್ಮ ಕಪ್ಪಾಗೋದೂ ಇಲ್ಲ, ಒಣಗೋದೂ ಇಲ್ಲ. ಮೃದುವಾಗೂ ಇರತ್ತೆ. ಏನೇನೋ ಲೋಶನ್ನೂ ಬೇಕಾಗಿಲ್ಲ.’

‘ನನಗಂತೂ ಈ ಸೆಕೆಗೆ ಫ್ಯಾನ್ ಹಾಕ್ಕೊಂಡ್ರೂ ನಿದ್ದೆ ಬರೋಲ್ಲ ಅಜ್ಜಿ. ನಿಮ್ಮ ಕಾಲದಲ್ಲಿ ಸೆಕೆನೇ ಇರಲಿಲ್ವಾ?’

‘ಇರೋದು, ಇರದೇ ಏನು? ನಿದ್ದೇನೇ ಬರೋಲ್ಲ ಅಂತಾ ಆದಾಗ ಅಂಗಾಲಿಗೆ ತುಪ್ಪ ಹಚ್ಚಿ, ಹದಾ ಬಿಸಿನೀರಿನಲ್ಲಿ ಕಾಲು ಇಟ್ಕೋತಾ ಇದ್ವಿ. ಆಗ ಬೇಗ ನಿದ್ರೆ ಬರೋದು. ಇದನ್ನೆಲ್ಲಾ ಹೇಳಿದ್ರೆ ಯಾರು ನಂಬ್ತಾರೆ?’

ಒಳ್ಳೊಳ್ಳೆ ಟಿಪ್ಸ್ ಕೊಟ್ಟಿದ್ದಕ್ಕೆ ಅಜ್ಜಿಗೆ ಥ್ಯಾಂಕ್ಸ್ ಹೇಳಿ ಖುಷಿಯಿಂದ ಮನೆಗೆ ಹೋದ್ಲು, ಶ್ವೇತಾ. ❖






ಕೆಮ್ಮೆಂದು ‘ಕೆಮ್ಮು’ವಂತಿಲ್ಲ!

ಡಾ. ಕುಶ್ವಂತ್ ಕೋಳಿಬೈಲು

ನಮ್ಮ ಶ್ವಾಸಕೋಶದ ಒಳಗೆ ದೂಳು, ನೀರು, ಎಂಜಲು ಅಥವಾ ಆಹಾರಪದಾರ್ಥಗಳು ನುಸುಳದಂತೆ ತಡೆಯಲು ಪ್ರಕೃತಿ ಒಂದು ಕಾವಲುಗಾರನನ್ನು ನೇಮಿಸಿದೆ. ಶ್ವಾಸಕೋಶದ ಒಳಗಡೆ ಗಾಳಿಯ ಹೊರತಾಗಿ ಇತರರಿಗೆ ಪ್ರವೇಶವನ್ನು ಕಡ್ಡಾಯವಾಗಿ ನಿರಾಕರಿಸಲಾಗಿದೆ. ಶ್ವಾಸಕೋಶದಲ್ಲಿ ಶರೀರಕ್ಕೆ ಬೇಕಾದ ಆಮ್ಲಜನಕ ರಕ್ತದೊಳಗೆ ಸೇರಿಕೊಳ್ಳುತ್ತದೆ ಮತ್ತು ಶರೀರ ಹೊರ ಹಾಕುವ ಇಂಗಾಲದ ಡೈಆಕ್ಸೈಡ್ ದೇಹದಿಂದ ಹೊರಬಂದು ವಾತಾವರಣದಲ್ಲಿ ಲೀನವಾಗುತ್ತದೆ. ಶ್ವಾಸಕೋಶದೊಳಗಡೆ ಗಾಳಿಯ ಹೊರತಾಗಿ ಇತರ ಪದಾರ್ಥಗಳು ಸೇರಿಕೊಂಡಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ಚಿಕ್ಕಪುಟ್ಟ ಆಹಾರಪದಾರ್ಥಗಳು, ಎಂಜಲು ಮತ್ತು ನೀರು – ಇವು ಶ್ವಾಸಕೋಶದ ರೋಗನಿರೋಧಕ ಶಕ್ತಿಯನ್ನು ಶಮನಗೊಳಿಸಿ, ಅಲ್ಲಿ ‘ನ್ಯುಮೋನಿಯಾ’ ಸೋಂಕನ್ನು ಉಂಟುಮಾಡುತ್ತದೆ. ಧ್ವನಿಪೆಟ್ಟಿಗೆಯಲ್ಲಿ ಸ್ವಲ ದೊಡ್ಡ ವಸ್ತುಗಳಾದ ನಾಣ್ಯ, ಮೀನಿನ ಮುಳ್ಳು – ಇಂಥವು ಸಿಕ್ಕಿಹಾಕಿಕೊಂಡು ಶ್ವಾಸಕೋಶದೊಳಗಡೆ ಗಾಳಿಯ ಚಲನೆಯು ಸಂಪೂರ್ಣವಾಗಿ ನಿಂತರೆ ಜೀವಕ್ಕೂ ಕುತ್ತು ಬರಬಹುದು. ನಮ್ಮ ಆಹಾರದ ಕೊಳವೆ ಮತ್ತು ಉಸಿರಾಟದ ಕೊಳವೆ ಒಂದು ಮತ್ತೊಂದರ ಪಕ್ಕದಲ್ಲಿದೆ. ಆದರೆ ಆಹಾರ ಮತ್ತು ಗಾಳಿ ಯಾವ ಗೂಗಲ್ ಮ್ಯಾಪಿನ ಸಹಾಯವಿಲ್ಲದೆ ತಾವು ತಲುಪಬೇಕಾದ ಸ್ಥಳವನ್ನು ಸುರಕ್ಷಿತವಾಗಿ ತಲುಪುತ್ತಿರುವ ಕಾರಣ ಈ ರಸ್ತೆಯಲ್ಲಿ ಅಪಘಾತಗಳಾಗುತ್ತಿಲ್ಲ!

ಶ್ವಾಸಕೋಶದ ಪ್ರವೇಶದ್ವಾರವಾದ ಧ್ವನಿಪೆಟ್ಟಿಗೆಯ ಒಳಗಡೆ ಗಾಳಿಯ ಹೊರತಾಗಿ ಪ್ರವೇಶ ನಿರಾಕರಿಸಲಾಗಿರುವ ಇತರ ವಸ್ತುಗಳು ಕಾಲಿಟ್ಟ ತಕ್ಷಣ ನಮ್ಮ ದೇಹವು ನಿದ್ರೆಯಲ್ಲಿದ್ದರೂ ಜಾಗೃತವಾಗುತ್ತದೆ. ದೇಹದೊಳಗಡೆ ಉತ್ಪತ್ತಿಯಾಗುವ ಕೆಮ್ಮು, ಗಾಳಿಯನ್ನು ಪ್ರತಿ ಗಂಟೆಗೆ ನೂರು ಮೈಲು ವೇಗದಲ್ಲಿ ಹೊರಹಾಕುವುದರಿಂದ ಶ್ವಾಸಕೋಶದೊಳಗೆ ಪ್ರವೇಶಿಸಲು ಹೊಂಚುಹಾಕುತ್ತಿರುವ ಪದಾರ್ಥಗಳು ದೇಹದಿಂದ ಹೊರಗೆ ಎಸೆಯಲ್ಪಡುತ್ತವೆ. ಶ್ವಾಸಕೋಶದ ನಳಿಗೆಯೊಳಗಡೆ ಬೇರೆ ಪದಾರ್ಥಗಳು ಪ್ರವೇಶ ಮಾಡಿರುವ ಸುದ್ದಿಯನ್ನು ಮೆದುಳಿಗೆ ಕೊಂಡೊಯ್ಯುವ ನರಗಳಿವೆ; ಈ ನರಗಳನ್ನು ಜಾಗೃತಗೊಳಿಸುವ ಸೂಕ್ಷ್ಮ ರಿಸೆಪ್ಟಾರುಗಳಿವೆ. ಈ ಅಪಾಯವನ್ನು ತಕ್ಷಣ ಗ್ರಹಿಸುವ ಮಿದುಳು ಕೆಮ್ಮನ್ನು ಉತ್ಪಾದನೆ ಮಾಡುವ ಮಾಂಸಖಂಡಗಳಿಗೆ ನರಗಳ ಮೂಲಕ ತುರ್ತುಸಂದೇಶವನ್ನು ರವಾನಿಸುತ್ತದೆ. ಇದು ನಮ್ಮ ಮನಸ್ಸಿನ ನಿಯಂತ್ರಣಕ್ಕೆ ಮೀರಿದ ಪ್ರಕ್ರಿಯೆಯಾಗಿರುವುದರಿಂದ ಇದನ್ನು ನಾವು ‘ಇನ್ವಾಲಂಟರಿ ರಿಫ್ಲೆಕ್ಸ್’ ಎಂದು ಕರೆಯುತ್ತೇವೆ. ಸೋಂಕಿನ ಕಾರಣದಿಂದ ಗಂಟಲಿನಲ್ಲಿ



ತುರಿಕೆಯಾಗುತ್ತಿರುವಾಗಲೂ ನಾವು ಕೆಮ್ಮುವ ಮೂಲಕ ನಮ್ಮ ಗಂಟಲು ಸರಿಪಡಿಸಲು ಯತ್ನಿಸುತ್ತಿರುತ್ತೇವೆ. ಶ್ವಾಸಕೋಶದೊಳಗಡೆ ಕಫ, ನೀರು ಅಥವಾ ಅಲರ್ಜಿಯನ್ನು ಉಂಟುಮಾಡುವ ಸೂಕ್ಷ್ಮಕಣಗಳು ತುಂಬಿಕೊಂಡಾಗಲೂ ದೇಹವು ಕೆಮ್ಮುವ ಮೂಲಕ ಅದನ್ನು ಹೊರಹಾಕಲು ಪ್ರಯತ್ನಿಸುತ್ತದೆ. ಕೆಮ್ಮಿನ ಶೈಲಿ ಮತ್ತು ಅದರ ತೀವ್ರತೆಯನ್ನು ದೂರದಿಂದ ಸೂಕ್ಷ್ಮವಾಗಿ ಗಮನಿಸುವ ವೈದ್ಯರು ರೋಗಿ ತಮ್ಮ ಕ್ಲೀನಿಕ್ಕಿನೊಳಗೆ ಕೆಮ್ಮುತ್ತಾ ಬರುವಾಗಲೇ ಅವರ ಕೆಮ್ಮಿಗೆ ಕಾರಣವಾಗಿರುವ ರೋಗವನ್ನು ಅಂದಾಜಿಸಬಹುದು. ಕೆಮ್ಮು ದೇಹದೊಳಗಿನ ಏರುಪೇರನ್ನು ಜಗತ್ತಿಗೆ ಸಾರುವ ಧ್ವನಿಯಾಗುವುದರ ಜೊತೆಗೆ ಶ್ವಾಸಕೋಶದ ಸರಹದ್ದಿನೊಳಗೆ ವೈರಿಗಳ ಪ್ರವೇಶವನ್ನು ತಡೆಯುವ ರಣಕಹಳೆಯಂತೆ ಕೆಲಸ ಮಾಡುತ್ತದೆಯೆ ಹೊರತು, ಅಸಲಿಗೆ ಕೆಮ್ಮು ಯಾವುದೇ ಕಾಯಿಲೆಯಲ್ಲ.

ಕ್ಷಯರೋಗ ಅಥವಾ ಶ್ವಾಸಕೋಶದ ಕ್ಯಾನ್ಸರ್ ಇದ್ದಾಗಲೂ ಶ್ವಾಸಕೋಶದೊಳಗಡೆ ಆಗಿರುವ ಏರುಪೇರಿನ ಸೂಚನೆಯನ್ನು ಕೆಮ್ಮ ನಮಗೆ ಸೂಕ್ಷ್ಮವಾಗಿ ತಿಳಿಸುತ್ತದೆ. ಎಂಟು ವಾರಗಳಿಗಿಂತಲೂ ಹೆಚ್ಚು ಸಮಯ ಒಬ್ಬ ವ್ಯಕ್ತಿಯು ಕೆಮ್ಮುತ್ತಿದ್ದಾಗ ನಾವು ಆ ಸೂಚನೆಯನ್ನು ಗಂಭೀರವಾಗಿ ಪರಿಗಣಿಸಿ ಆ ಧ್ವನಿಯ ಜಾಡು ಹಿಡಿದು ಅದರ ಮೂಲ ಕಾರಣಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಆ ಧ್ವನಿಯನ್ನು ಅನುಮಾನದಿಂದ ನೋಡಿ ಶ್ವಾಸಕೋಶ ಸ್ವಾಸ್ಥ್ಯವನ್ನು ಅರಿಯಲು ಎಕ್ಸ್-ರೇ ಮತ್ತು ಶ್ವಾಸಕೋಶದ ಸ್ಕ್ಯಾನಿಂಗ್ ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ. ಭಾರತದಲ್ಲಿ ಹೆಚ್ಚು ಕಾಡುತ್ತಿರುವ ಶ್ವಾಸಕೋಶದ ಕ್ಷಯರೋಗವನ್ನು ಪತ್ತೆಹಚ್ಚಲು ವಿವಿಧ ರಕ್ತ ಮತ್ತು ಕಫದ ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ. ಆದರೆ ಆರೋಗ್ಯವಾಗಿರುವವರಲ್ಲಿ ಬರುವ ಅಲ್ಪಕಾಲದ ಕೆಮ್ಮಿಗಾಗಿ ಅನಗತ್ಯ ಪರೀಕ್ಷೆಗಳ ಅಗತ್ಯವಿರುವುದಿಲ್ಲ.

ಸೂರ್ಯನಿಗೆ ಟಾರ್ಚ್ ಹಿಡಿಯಬೇಡ – ಎಂಬ ಹಾಸ್ಯಮಯ ಹೇಳಿಕೆಯಂತೆ ‘ಅಜ್ಜಿಗೆ ಕೆಮ್ಮೆ’ – ಎಂದು ತಮಾಷೆಯಿಂದ ಪ್ರಶ್ನಿಸುವವರಿದ್ದಾರೆ. ಅಡುಗೆಮನೆಯ ಹೊಗೆಗೆ ಅಥವಾ ಧೂಮಪಾನಕ್ಕೆ ಶ್ವಾಸಕೋಶವು ನಿರಂತರವಾಗಿ ಗುರಿಯಾದಲ್ಲಿ ಶ್ವಾಸಕೋಶದ ರಚನೆ ಮತ್ತು ಕ್ರಿಯೆಯಲ್ಲಿ ಬದಲಾವಣೆಗಳುಂಟಾಗಿ ಅದರ ಕಾರ್ಯಕ್ಷಮತೆ ಕುಗ್ಗುತ್ತದೆ. ಈ ಕಾರಣದಿಂದ ವಯಸ್ಸಾದವರಲ್ಲಿ ಇತರರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕೆಮ್ಮು ಕಾಣಿಸಿಕೊಳ್ಳುತ್ತದೆ. ಶಾಲೆಗೆ ಹೋಗುವ ಮಕ್ಕಳು ಪ್ರಪಂಚಕ್ಕೆ ತಮ್ಮನ್ನು ತಾವು ತೆರೆದುಕೊಂಡಂತೆ ವಿವಿಧ ರೋಗಾಣುಗಳ ದಾಳಿಗೆ, ಅದರಲ್ಲೂ ಮುಖ್ಯವಾಗಿ ವೈರಸ್ಸುಗಳ ಸೋಂಕಿಗೆ ತುತ್ತಾಗುವ ಕಾರಣ ಆ ಮಕ್ಕಳಲ್ಲಿ ಶೀತಜ್ವರದ ಜೊತೆಗೆ ಕೆಮ್ಮು ಕೂಡ ಇತರರಿಗಿಂತ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಕೊರೊನಾ ಸಹಿತ ಇತರ ಶ್ವಾಸಕೋಶದ ವೈರಸುಗಳು ಮಕ್ಕಳಲ್ಲಿ ತೀವ್ರ ಪ್ರಮಾಣದ ಆರೋಗ್ಯದ ಏರುಪೇರನ್ನು ಉಂಟುಮಾಡದಿರುವ ಕಾರಣದಿಂದ ಮತ್ತು ದೇಹದ ರೋಗನಿರೋಧಕ ಶಕ್ತಿಗೆ ಇಂತಹ ವೈರಸ್ಸುಗಳನ್ನು ಬಗ್ಗು ಬಡಿಯುವ ಸಾಮರ್ಥ್ಯವಿರುವ ಕಾರಣದಿಂದ ಈ ಕೆಮ್ಮಿನ ಬಗ್ಗೆಯೂ ಭಯಪಡುವ ಅಗತ್ಯವಿಲ್ಲ.

ಕೆಮ್ಮಿಗೆ ಔಷಧ ಎಂದು ಜನರು ಹುಚ್ಚೆದ್ದು ಬಳಸುವ ಹೆಚ್ಚಿನ ಕಾಫ್ ಸಿರಪ್ಪುಗಳ ಉದ್ದೇಶ ಕೂಡ ಕೆಮ್ಮನ್ನು ನಿಲ್ಲಿಸುವುದಲ್ಲ. ಆ ದ್ರಾವಣಗಳಲ್ಲಿ ಶೀತ ಅಥವಾ ಮೂಗಿನಿಂದ ನೀರು ಸುರಿಸುವುದನ್ನು ನಿಲ್ಲಿಸುವ ಔಷಧಗಳು ಮತ್ತು ಶ್ವಾಸಕೋಶದೊಳಗೆ ಕಫವು ಗಟ್ಟಿಯಾಗಿದ್ದಲ್ಲಿ ಅದನ್ನು ಕರಗಿಸಿ ಕೆಮ್ಮಿನ ಮೂಲಕ ಶ್ವಾಸಕೋಶದಿಂದ ಹೊರಹಾಕುವ ಔಷಧಗಳು ಹೆಚ್ಚಾಗಿ ಇರುತ್ತದೆ. ಈ ಕಾಫ್ ಸಿರಪ್ಪಿನಲ್ಲಿ ಅಸ್ತಮಾದಂತಹ ಕಾಯಿಲೆಗಳಿಂದ ಬಳಲುವವರ ಶ್ವಾಸಕೋಶದೊಳಗೆ ಗಾಳಿಯ ಸಂಚಾರವನ್ನು ಸುಗಮಗೊಳಿಸುವ ಔಷಧಗಳು ತುಂಬಿರುತ್ತದೆಯೆ ಹೊರತು ಕೆಮ್ಮನ್ನು ಸ್ವಿಚ್ ಆಫ್ ಮಾಡಬಲ್ಲ ಯಾವ ರಾಮಬಾಣವೂ ಇರುವುದಿಲ್ಲ. ಏಕೆಂದರೆ ಚಿಕಿತ್ಸೆಯ ಉದ್ದೇಶವು ರೋಗವನ್ನು ನಿವಾರಿಸುವುದೇ ಹೊರತು ರೋಗಲಕ್ಷಣವಾದ ಕೆಮ್ಮನ್ನು ನಿಲ್ಲಿಸುವುದಲ್ಲ. ದೇಹವು ರೋಗದಿಂದ ವಿಮುಕ್ತಿಯಾದ ನಂತರ ರೋಗಲಕ್ಷಣಗಳು ಮಾಯವಾಗುತ್ತವೆ.

ಕೆಮ್ಮುವವರಿಗಿಂತ ಗಂಭೀರವಾದ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವವರು ಅಸಲಿಗೆ ಕೆಮ್ಮಲು ಆಗದವರೇ! ಪಾರ್ಶ್ವವಾಯು ರೋಗಕ್ಕೆ ತುತ್ತಾಗಿ ಪ್ರಜ್ಞಾಹೀನಸ್ಥಿತಿಯಲ್ಲಿರುವವರು, ಪಕ್ಕೆಲುಬುಗಳ ಮೂಳೆಮುರಿತದಿಂದಾಗಿ ಕೆಮ್ಮಲು ಅಶಕ್ತರಾಗಿರುವವರು ಅಥವಾ ಕೆಮ್ಮಲು ಸಾಮರ್ಥ್ಯವಿಲ್ಲದ ನವಜಾತ ಶಿಶುಗಳ ಆರೋಗ್ಯ ನಿಜಕ್ಕೂ ಕೆಮ್ಮುವವರಿಗಿಂತ ಹೆಚ್ಚು ಅಪಾಯದಲ್ಲಿರುತ್ತದೆ. ಇಂಥವರು ಶ್ವಾಸಕೋಶದೊಳಗಡೆ ಸೋಂಕು ಹರಡಬಲ್ಲ ಅಥವಾ ಧ್ವನಿಪೆಟ್ಟಿಗೆಯೊಳಗೆ ಗಾಳಿಯ ಸಂಚಾರವನ್ನು ತಡೆದು ಜೀವಕ್ಕೆ ಸಂಚಕಾರ ತರಬಲ್ಲ ವಸ್ತುಗಳು ಹೋದಾಗ ಆತ್ಮರಕ್ಷಣೆಗಾಗಿ ಇಂಥವರು ಶ್ವಾಸಕೋಶದ ಸಹಾಯಕ್ಕೆ ಕೆಮ್ಮು ಧಾವಿಸಿ ಬರುವುದಿಲ್ಲ. ಈಗ ಹೇಳಿ ನೀವು ಇಂದಿನಿಂದ ಕೆಮ್ಮನ್ನು ಶಪಿಸುತ್ತೀರಾ ಅಥವಾ ಕೆಮ್ಮಿಗೆ ಧನ್ಯವಾದಗಳನ್ನು ಸಲ್ಲಿಸುತ್ತೀರಾ?

(ಲೇಖಕ ಮಾಜಿ ಸೈನ್ಯಾಧಿಕಾರಿ ಮತ್ತು ಮಕ್ಕಳ ತಜ್ಞ)

ಅಭಿಮತ



❦ ಸುಭಾಷಿತ ❦
ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.
–ಕುವೆಂಪು

ಏಷ್ಯನ್ ಕ್ರೀಡಾಕೂಟ ಮುಂದೂಡಿಕೆ ಹೆಚ್ಚುವರಿ ಸಾಧನೆಗೆ ಬಲ ತುಂಬಲಿ

ಏಷ್ಯನ್ ಗೇಮ್ಸ್ ಎಂದರೆ ಭಾರತದ ಕ್ರೀಡಾರಂಗದ ಪಾಲಿಗೆ ಜೋಳಿಗೆ ತುಂಬ ಪದಕಗಳನ್ನು ಜಯಿಸುವ ವೇದಿಕೆ. ಒಲಿಂಪಿಕ್ ಕ್ರೀಡೆಗಳಿಗೆ ಅರ್ಹತೆ ಗಿಟ್ಟಿಸುವ ಚಿಮ್ಮುಹಲಗೆ. ವಿಶ್ವ ಕ್ರೀಡೆಯ ಅಗ್ರಮಾನ್ಯ ದೇಶಗಳಾದ ಚೀನಾ, ಜಪಾನ್, ಕೊರಿಯಾ ಅಥ್ಲೀಟ್‌ಗಳೊಂದಿಗೆ ಪೈಪೋಟಿ ನಡೆಸುವ ಪರೀಕ್ಷಾ ಕಣವೂ ಹೌದು. ಆದ್ದರಿಂದ ಈ ಕೂಟವನ್ನು ಕೇಂದ್ರೀಕೃತವಾಗಿರಿಸಿಕೊಂಡೇ ಭಾರತದ ಕ್ರೀಡಾಪಟುಗಳ ಅಭ್ಯಾಸ, ಚಟುವಟಿಕೆಗಳು ನಡೆಯುತ್ತವೆ ಎಂದರೆ ತಪ್ಪಾಗಲಿಕ್ಕಿಲ್ಲ. ಆದರೆ, ಇದೇ ಸೆಪ್ಟೆಂಬರ್ 10ರಿಂದ 25ರವರೆಗೆ ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯಬೇಕಿದ್ದ 19ನೇ ಏಷ್ಯನ್ ಕೂಟವನ್ನು ಮುಂದೂಡಲಾಗಿದೆ. ಹ್ಯಾಂಗ್‌ಝೌನಿಂದ ಸುಮಾರು 200 ಕಿ.ಮೀ. ದೂರದಲ್ಲಿರುವ ಶಾಂಘೈನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಲಾಕ್‌ಡೌನ್ ಘೋಷಿಸಲಾಗಿದೆ. ಕ್ರೀಡಾಪಟುಗಳ ಸುರಕ್ಷತೆಯ ದೃಷ್ಟಿಯಿಂದ 2023ರವರೆಗೆ ಈ ಕ್ರೀಡಾಕೂಟವನ್ನು ಮುಂದೂಡಿರುವುದಾಗಿ ಏಷ್ಯನ್ ಒಲಿಂಪಿಕ್ ಸಮಿತಿ (ಎಒಸಿ) ಪ್ರಕಟಿಸಿದೆ. ಈ ನಿರ್ಧಾರಕ್ಕೆ ಕ್ರೀಡಾಕ್ಷೇತ್ರದಲ್ಲಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.



ಈ ಅನಿವಾರ್ಯ ಪರಿಸ್ಥಿತಿಯು ನೀಡಲಿರುವ ಹೆಚ್ಚುವರಿ ಸಮಯವನ್ನು ಫಲಪ್ರದಗೊಳಿಸಿಕೊಳ್ಳುವ ಸವಾಲು ಕ್ರೀಡಾವಲಯದ ಮುಂದಿದೆ

ಈ ವರ್ಷ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಕೂಡ ಆಯೋಜನೆಗೊಂಡಿವೆ. ಒಂದೇ ವರ್ಷದಲ್ಲಿ ಮೂರು ಪ್ರಮುಖ ಸ್ಪರ್ಧೆಗಳಲ್ಲಿ ಸಮಾನ ಸಾಮರ್ಥ್ಯ ಪ್ರದರ್ಶನ ನೀಡುವುದು ಎಲ್ಲರಿಗೂ ಕಷ್ಟವಾಗುತ್ತಿತ್ತು. ಇದರಿಂದಾಗಿ ಬಹಳಷ್ಟು ಕ್ರೀಡಾಪಟುಗಳಿಗೆ ಹೊಸ ದಾಖಲೆಗಳನ್ನು ಬರೆಯುವ ಅವಕಾಶ ಕೈತಪ್ಪುವ ಸಾಧ್ಯತೆ ಇತ್ತು. ಅಲ್ಲದೆ ಗಾಯಗಳಾಗುವ ಅಪಾಯವೂ ಇತ್ತು. ಅದಕ್ಕಾಗಿಯೇ ಭಾರತವೂ ಸೇರಿದಂತೆ ಕೆಲವು ರಾಷ್ಟ್ರಗಳು ಬರ್ಮಿಂಗ್‌ಹ್ಯಾಮ್‌ನಲ್ಲಿ ನಿಗದಿಯಾಗಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಉದಯೋನ್ಮುಖ ಆಟಗಾರರು ಹೆಚ್ಚು ಇರುವ ಹಾಕಿ ತಂಡಗಳನ್ನು ಕಣಕ್ಕಿಳಿಸುವ ಸಿದ್ಧತೆಯಲ್ಲಿದ್ದವು. ಏಷ್ಯಾ ಕೂಟಕ್ಕೆ ತಮ್ಮ ಪ್ರಧಾನ ಆಟಗಾರರ ಬಳಗವನ್ನು ಕಳಿಸಲು ಯೋಜಿಸಿದ್ದವು. ಇದೀಗ ಬರ್ಮಿಂಗ್‌ಹ್ಯಾಮ್‌ಗೆ ಬಲಿಷ್ಠ ತಂಡಗಳನ್ನೇ ಕಳಿಸುವತ್ತ ಚಿತ್ತ ಹರಿಸಿವೆ. ಏಷ್ಯನ್ ಕ್ರೀಡಾಕೂಟ ಒಂದು ವರ್ಷ ಮುಂದೆ ಹೋಗಿರುವುದು ಹಲವು ಕ್ರೀಡಾಪಟುಗಳು, ಕೋಚ್‌ಗಳಿಗೆ ಸಂತಸ ತಂದಿದೆ. ಕೋವಿಡ್ ಕಾರಣದಿಂದಾಗಿ 2020ರ ಟೋಕಿಯೊ ಒಲಿಂಪಿಕ್ ಕೂಟವನ್ನು ಮುಂದೂಡಿ 2021ರಲ್ಲಿ ನಡೆಸಲಾಗಿತ್ತು. ಅದರಲ್ಲಿ ಭಾರತವು ಉತ್ತಮ ಸಾಧನೆ ಮಾಡಿತ್ತು. ಅದ್ದರಿಂದ ಹೆಚ್ಚುವರಿಯಾಗಿ ಸಿಗುವ ಅವಧಿಯನ್ನು ಸಮರ್ಥವಾಗಿ ಬಳಸಿಕೊಳ್ಳುವ ವಿಶ್ವಾಸ ಕ್ರೀಡಾವಲಯದಲ್ಲಿದೆ. ಭಾರತವು ಏಷ್ಯನ್ ಕ್ರೀಡಾಕೂಟದಲ್ಲಿ ಉತ್ತಮ ದಾಖಲೆ ಹೊಂದಿದೆ. ಅಗ್ರ ಹತ್ತರಲ್ಲಿ ಸ್ಥಾನ ಕಾಪಾಡಿಕೊಂಡಿದೆ. ಇದುವರೆಗೆ ಒಟ್ಟು 672 ಪದಕಗಳನ್ನು ಗೆದ್ದಿದೆ. 2018ರಲ್ಲಿ ಜಕಾರ್ತದಲ್ಲಿ ನಡೆದಿದ್ದ ಕೂಟದಲ್ಲಿ 16 ಚಿನ್ನ ಸೇರಿದಂತೆ ಒಟ್ಟು 70 ಪದಕಗಳನ್ನು ಭಾರತ ಜಯಿಸಿತ್ತು. ಈ ಬಾರಿ ಅದಕ್ಕಿಂತ ಹೆಚ್ಚು ಪದಕಗಳನ್ನು ಗಳಿಸುವ ಹುಮ್ಮಸ್ಸಿನಲ್ಲಿದೆ.

ಆದರೆ ಟ್ರ್ಯಾಕ್ ಮತ್ತು ಫೀಲ್ಡ್ ಸೇರಿದಂತೆ ವೈಯಕ್ತಿಕ ವಿಭಾಗಗಳಲ್ಲಿ ಸ್ಪರ್ಧಿಸುವ ಬಹುತೇಕ ಅಥ್ಲೀಟ್‌ಗಳಲ್ಲಿ ಮುಂದೂಡಿಕೆಯ ಬಗ್ಗೆ ಬೇಸರವಿದೆ. ಈ ವರ್ಷ ನಿಗದಿಯಂತೆ ಕೂಟ ನಡೆದು 2024ರ ಪ್ಯಾರಿಸ್ ಒಲಿಂಪಿಕ್‌ಗೆ ಅರ್ಹತೆ ಲಭಿಸಿದ್ದರೆ, ತಯಾರಿ ಮಾಡಿಕೊಳ್ಳಲು ಎರಡು ವರ್ಷಗಳ ಅವಧಿ ಸಿಗುತ್ತಿತ್ತು. ಒಂದೊಮ್ಮೆ ಇಲ್ಲಿ ಅರ್ಹತೆ ಸಿಗದಿದ್ದರೂ ಮುಂದಿನ ಹಂತಗಳಲ್ಲಿ ನಡೆಯುವ ಒಲಿಂಪಿಕ್ ಅರ್ಹತಾ ಸುತ್ತುಗಳ ಕೂಟಗಳಿಗೆ ಸಿದ್ಧತೆ ಮಾಡಿಕೊಳ್ಳಲು ಸಮಯ ಲಭಿಸುತ್ತಿತ್ತು. ಆದರೆ 2023ರಲ್ಲಿ ಏಷ್ಯನ್ ಗೇಮ್ಸ್ ಮತ್ತು ಅರ್ಹತಾ ಸುತ್ತುಗಳು ನಡೆಯುವುದರಿಂದ ಒತ್ತಡ ಹೆಚ್ಚಲಿದೆ. ಅಲ್ಲದೆ ಅಥ್ಲೀಟ್‌ಗಳ ವಯಸ್ಸು ಕೂಡ ಒಂದು ವರ್ಷ ಹೆಚ್ಚಾಗಲಿದೆ. ಇದು ಅವರ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವುದು. ತಾಲೀಮು ಸಂದರ್ಭದ ಗಾಯಗಳು ಮತ್ತು ಮನೋಬಲವನ್ನು ನಿರ್ವಹಣೆ ಮಾಡುವುದು ಕೂಡ ದೊಡ್ಡ ಸವಾಲಾಗಲಿದೆ ಎಂದು ಭಾರತ ಒಲಿಂಪಿಕ್ ಸಮಿತಿಯ ಪದಾಧಿಕಾರಿಗಳೇ ಹೇಳಿದ್ದಾರೆ. ಅಲ್ಲದೆ ಇದು ಆರ್ಥಿಕ ಹೊರೆಗೂ ಕಾರಣವಾಗಲಿದೆ. ಕೋವಿಡ್ ಕಾಲಘಟ್ಟದಲ್ಲಿ ಇಂತಹ ಸವಾಲುಗಳನ್ನು ಎದುರಿಸುವುದು ಅನಿವಾರ್ಯ. ಎರಡೂವರೆ ವರ್ಷಗಳಿಂದ ಇಂತಹ ಪರಿಸ್ಥಿತಿಯಲ್ಲಿಯೇ ಟೋಕಿಯೊ ಒಲಿಂಪಿಕ್, ವಿಂಬಲ್ಡನ್ ಟೆನಿಸ್, ಯೂರೊ ಫುಟ್‌ಬಾಲ್, ಟಿ20 ಕ್ರಿಕೆಟ್ ವಿಶ್ವಕಪ್ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗಳು ನಡೆದಿವೆ. ಜೀವ ಸುರಕ್ಷಾ ವಲಯ (ಬಯೋಬಬಲ್) ನಿಯಮಗಳ ಒತ್ತಡದ ನಡುವೆಯೂ ಯುವ ಕ್ರೀಡಾಪಟುಗಳಿಂದ ಉತ್ತಮ ಸಾಧನೆಗಳು ಒಡಮೂಡಿವೆ. ಈ ಮುಂದೂಡಿಕೆಯಿಂದ ಚೀನಾ ಕೂಡ ಆರ್ಥಿಕ ಹೊರೆಯನ್ನು ಅನುಭವಿಸಲಿದೆ. 40 ಕ್ರೀಡೆಗಳ ಆಯೋಜನೆಗಾಗಿ ನಿರ್ಮಿಸಲಾಗಿರುವ 56 ಕ್ರೀಡಾಂಗಣಗಳನ್ನು ಮತ್ತೊಂದು ವರ್ಷ ಉತ್ತಮವಾಗಿ ನಿರ್ವಹಣೆ ಮಾಡುವುದು ಪ್ರಮುಖ ಹೊಣೆಯಾಗಿದೆ. ಆದರೆ, ಬೇರೆ ಬೇರೆ ದೇಶಗಳ ಸುಮಾರು 12 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಬಂದು ಸೇರುವ ಕ್ರೀಡಾಕೂಟವು ಕೋವಿಡ್ ಪಿಡುಗಿಗೆ ಗುರಿಯಾದರೆ ವಿಶ್ವಮಟ್ಟದಲ್ಲಿ ಅನುಭವಿಸಬೇಕಾದ ಮುಜುಗರದಿಂದ ತಪ್ಪಿಸಿಕೊಳ್ಳಲು ಚೀನಾ ಈ ಮುನ್ನೆಚ್ಚರಿಕೆ ಕ್ರಮಕ್ಕೆ ಮುಂದಾಗಿದೆ. ಈ ಅನಿವಾರ್ಯ ಪರಿಸ್ಥಿತಿಯು ನೀಡಲಿರುವ ಹೆಚ್ಚುವರಿ ಸಮಯವನ್ನು ಫಲಪ್ರದಗೊಳಿಸಿಕೊಳ್ಳುವ ಸವಾಲು ಕ್ರೀಡಾವಲಯದ ಮುಂದಿದೆ.

ದಿನದ ಟ್ವೀಟ್

ಬಿಡುಗಡೆ ಮಾಡಿ

ದೇಶದ್ರೋಹದ ಆರೋಪ ಹೊರಿಸಲಾಗಿರುವ ಎಲ್ಲರನ್ನೂ ಬಿಡುಗಡೆ ಮಾಡಿ ಮತ್ತು ಕಾನೂನು ಮರುಪರಿಶೀಲನೆ ಬಾಕಿ ಇರುವುದರಿಂದ, ಮಧ್ಯಂತರದ ಕ್ರಮವಾಗಿ ಈ ಸಂಬಂಧ ಯಾರನ್ನೂ ಬಂಧಿಸದಿರಿ.



ಇಂದಿರಾ ಜೈಸಿಂಗ್, ಸುಪ್ರೀಂ ಕೋರ್ಟ್ ವಕೀಲೆ

ಕಿಡಿನುಡಿ

ಮೋದಿ ನೇತೃತ್ವದ ಸರ್ಕಾರದ ಅಡಿಯಲ್ಲಿ ಭಾರತದ ರೂಪಾಯಿ ಮೌಲ್ಯವು ಐಸಿಯುನಲ್ಲಿ ಇದೆ. ಮೋದಿ ನೇತೃತ್ವದ ಸರ್ಕಾರದ ಆಡಳಿತ ಅವಧಿಯಲ್ಲಿ ರೂಪಾಯಿ ಮೌಲ್ಯವು ಬಿಜೆಪಿಯ 'ಮಾರ್ಗದರ್ಶಕ ಮಂಡಳಿ'ಯ ವಯಸ್ಸಿನ ಸಂಖ್ಯೆಯನ್ನು ಮೀರಿದೆ. ಮೋದಿ ನೇತೃತ್ವದ ಸರ್ಕಾರದಲ್ಲಿ ರೂಪಾಯಿ ಮೌಲ್ಯದ ಕುಸಿತವು ಪ್ರಧಾನಿಯವರ ವಯಸ್ಸಿಗಿಂತ ಜಾಸ್ತಿಯಾಗಿದೆ.



ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ

25 ವರ್ಷಗಳ ಹಿಂದೆ
ಶನಿವಾರ, 10-5-1997

• **ತೆರಿಗೆ ವಂಚನೆಗೆ ಉಗ್ರ ಶಿಕ್ಷೆ: ಪಿ. ಚಿದಂಬರಂ ಎಚ್ಚರಿಕೆ**

ನವದೆಹಲಿ, ಮೇ 9– ಆದಾಯ ತೆರಿಗೆಯ ಶೇ 40ರ ಮಿತಿಯನ್ನು ಇಳಿಸಲು ನಿರಾಕರಿಸಿದ ಹಣಕಾಸು ಸಚಿವ ಪಿ. ಚಿದಂಬರಂ ಅವರು, ಕಪ್ಪುಹಣವನ್ನು ಸ್ವಯಂ ಘೋಷಣೆ ಮೂಲಕ ಬಹಿರಂಗಪಡಿಸದೆ ತೆರಿಗೆ ವಂಚನೆ ಮುಂದುವರಿಸುವವರ ವಿರುದ್ಧ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.

ಚಿದಂಬರಂ ಉತ್ತರದ ನಂತರ ಲೋಕಸಭೆಯು 1997ನೇ ಸಾಲಿನ ಹಣಕಾಸು ಮಸೂದೆಗೆ ಒಪ್ಪಿಗೆ ನೀಡುವ ಮೂಲಕ 1997ನೇ ಸಾಲಿನ ಬಜೆಟ್ ಪ್ರಸ್ತಾವಗಳಿಗೆ ವಿಧ್ಯುಕ್ತ ಒಪ್ಪಿಗೆ ನೀಡಿದಂತಾಗಿದೆ.

ವಿರೋಧ ಭಾರತೀಯ ಜನತಾ ಪಕ್ಷ ತಂದಿದ್ದ ಕೆಲವು ತಿದ್ದುಪಡಿಗಳನ್ನು ಲೋಕಸಭೆ ತಿರಸ್ಕರಿಸಿತು. ಮತ್ತೆ ಕೆಲವು ತಿದ್ದುಪಡಿಗಳನ್ನು ಆ ಪಕ್ಷವೇ ಹಿಂತೆಗೆದುಕೊಂಡಿತು.

ಆದರೆ, ಎಡಪಕ್ಷಗಳು ಬಜೆಟ್‌ನಲ್ಲಿನ ಕೆಲವು ಮಾರ್ಪಾಡಿಗಾಗಿ ತಂದಿದ್ದ ತಿದ್ದುಪಡಿಯನ್ನು ಮತಕ್ಕೆ ಹಾಕಲು ಒತ್ತಾಯಿಸಲಿಲ್ಲ.

• **ಪೊಲೀಸ್ ಕ್ರಮ: ಠೇವಣಿದಾರರಿಗೆ 70 ಲಕ್ಷ ರೂ. ವಾಪಸ್**

ಬೆಂಗಳೂರು, ಮೇ 9– ಅಧಿಕ ಬಡ್ಡಿ ಆಸೆ ತೋರಿಸಿ ಸಾರ್ವಜನಿಕರಿಂದ ಸಂಗ್ರಹಿಸಿದ ಠೇವಣಿಯನ್ನು ಹಿಂತಿರುಗಿಸದೆ ಸತಾಯಿಸುತ್ತಿದ್ದ ನಗರದ ಹಲವು ಖಾಸಗಿ ಹಣಕಾಸು ಸಂಸ್ಥೆಗಳಿಂದ ಎಪ್ಪತ್ತು ಲಕ್ಷ ರೂಪಾಯಿ ಹಣವನ್ನು ಪೊಲೀಸರು ವಾಪಸ್ ಕೊಡಿಸಿದ್ದಾರೆ.

50 ವರ್ಷಗಳ ಹಿಂದೆ
ಬುಧವಾರ, 10-5-1972

• **ಕಾರ್ಪೊರೇಷನ್ ಕಾಮಗಾರಿ ಅಕ್ರಮ: 6 ಜನ ಎಂಜಿನಿಯರುಗಳ ಸಸ್ಪೆಂಡ್**

ಬೆಂಗಳೂರು, ಮೇ 9– ಕಾರ್ಪೊರೇಷನ್ನಿನಲ್ಲಿ ಮಂಜೂರಾದ 2.84 ಕೋಟಿ ರೂಪಾಯಿ ಖರ್ಚಿನ ಕಾಮಗಾರಿಗಳಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳ ಸಂಬಂಧದಲ್ಲಿ ಕಾರ್ಪೊರೇಷನ್ನಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಸೂಪರಿಂಟೆಂಡಿಂಗ್ ಎಂಜಿನಿಯರ್ ಮತ್ತು ಐದು ಮಂದಿ ಎಕ್ಸಿಕ್ಯುಟಿವ್ ಎಂಜಿನಿಯರುಗಳನ್ನು ಸಸ್ಪೆಂಡ್ ಮಾಡಲಾಗಿದೆ.

ಲೋಕೋಪಯೋಗಿ ಇಲಾಖೆಗೆ ಸೇರಿದ ಈ ಎಂಜಿನಿಯರುಗಳನ್ನು ಕಾರ್ಪೊರೇಷನ್ನಿನಿಂದ ಇಲಾಖೆಗೆ ವಾಪಸು ಕರೆಸಿ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು.

• **ನಗರದ ಚಿತ್ರ ಹಂಚಿಕೆದಾರರ ನಿವಾಸ ಶೋಧನೆ**

ಬೆಂಗಳೂರು, ಮೇ 9– ನಗರದಲ್ಲಿರುವ ಕೆಲವು ಚಲನಚಿತ್ರ ಹಂಚಿಕೆದಾರರ ನಿವಾಸ ಹಾಗೂ ಕಚೇರಿಗಳ ಮೇಲೆ ವರಮಾನ ತೆರಿಗೆ ಇಲಾಖೆ ಕಮಿಷನರ್ ಶ್ರೀ ಕೆ. ರಾಮರಾವ್ ಮತ್ತಿತರ ಅಧಿಕಾರಿಗಳು ಇಂದು ದಾಳಿ ನಡೆಸಿದರು.

ಚಲನಚಿತ್ರ ಹಂಚಿಕೆದಾರರೇ ಅಲ್ಲದೆ ಒಂದೆರಡು ಭಾರಿ ವ್ಯಾಪಾರಿಗಳ ಕಚೇರಿಗಳ ಮೇಲೂ ದಾಳಿ ನಡೆಯಿತು.

ಇಂತಹ ಪರಿಹಾರವು ಹೊಸ ಸಮಸ್ಯೆಗಳನ್ನು ಸೃಷ್ಟಿಸದೆ, ಹೊಸ ಪ್ರಯೋಜನಗಳಿಗೆ ದಾರಿ ಮಾಡುತ್ತದೆ

ಮುನಿದ ಪ್ರಕೃತಿ: ನಿಸರ್ಗವೇ ಮದ್ದು!



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಜಾಗತಿಕ ತಾಪಮಾನದ ಹೆಚ್ಚಳ ಮತ್ತು ವಾಯುಗುಣ ಬದಲಾವಣೆಯ ತೀವ್ರ ಪರಿಣಾಮಗಳನ್ನು ಎದುರಿಸಲು ನಮ್ಮ ಮುಂದೆ ಸ್ಥೂಲವಾಗಿ ಎರಡು ಮಾರ್ಗಗಳಿವೆ. ಮೊದಲನೆಯದು, ವಾಯುಮಂಡಲಕ್ಕೆ ನಿರಂತರವಾಗಿ ಸೇರುತ್ತಿರುವ ಹಸಿರುಮನೆ ಅನಿಲಗಳನ್ನು ಹಂತ ಹಂತವಾಗಿ ಕಡಿಮೆ ಮಾಡಿ, ನಿರ್ದಿಷ್ಟ ಮಟ್ಟದಲ್ಲಿ ಕಾಯ್ದುಕೊಳ್ಳುವುದು. ಎರಡನೆಯದು, ಈ ಬದಲಾವಣೆಗಳು ತರುತ್ತಿರುವ ಪರಿಣಾಮಗಳನ್ನು ಸಾಧ್ಯವಾದಷ್ಟು ನಿಯಂತ್ರಿಸಿ, ಅವುಗಳ ಅಪಾಯವನ್ನು ಕಡಿಮೆ ಮಾಡಿ, ಅಂತಹ ಪರಿಸ್ಥಿತಿಗೆ ಹೊಂದಿಕೊಂಡು ಬಾಳುವಂತಹ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು. ಈ ಎರಡೂ ರೀತಿಯ ಪ್ರಯತ್ನಗಳು ಇಂದು ಬಹುತೇಕ ದೇಶಗಳಲ್ಲಿ ನಡೆಯುತ್ತಿವೆ.


ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮವು ಈ ಎರಡನೆಯ, ಅಂದರೆ ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವ, ವಿವಿಧ ದೇಶಗಳ ಪ್ರಯತ್ನಗಳನ್ನು ಕ್ರೋಡೀಕರಿಸಿ, ಜಾಗತಿಕ ಮಟ್ಟದ ವರದಿಯನ್ನು 2014ರಿಂದ ಪ್ರಕಟಿಸುತ್ತಿದೆ. ಈ ಸರಣಿಯ ಐದನೆಯ ವರದಿ ಕಳೆದ ವರ್ಷ ಪ್ರಕಟವಾಗಿದ್ದು, ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವ ನಮ್ಮ ಪ್ರಯತ್ನದಲ್ಲಿ ತಂತ್ರಜ್ಞಾನ ಪ್ರೇರಿತ, ಎಂಜಿನಿಯರಿಂಗ್ ಚಾಲಿತ ಅತ್ಯಧಿಕ ಬಂಡವಾಳದ 'ಬೂದು ಪರಿಹಾರ'ಕ್ಕಿಂತ (ಗ್ರೇ ಸಲ್ಯೂಷನ್), ನೈಸರ್ಗಿಕ ವ್ಯವಸ್ಥೆಗಳನ್ನು ಬಲಪಡಿಸುವ 'ನಿಸರ್ಗಾಧಾರಿತ ಪರಿಹಾರ'ಗಳಿಗೆ ಅತಿ ಹೆಚ್ಚಿನ ಗಮನ ನೀಡಬೇಕಾದ ತುರ್ತು ಅಗತ್ಯವನ್ನು ಒತ್ತಿ ಹೇಳಿದೆ. ಪ್ರಕೃತಿ ವ್ಯವಸ್ಥೆಗಳನ್ನು ಗೌರವಿಸಿ, ನೈಸರ್ಗಿಕ ಸಂಪನ್ಮೂಲಗಳನ್ನು ಹಿತಮಿತವಾಗಿ ಎಚ್ಚರಿಕೆಯಿಂದ ಬಳಸುತ್ತಿದ್ದ ಸಾಂಪ್ರದಾಯಿಕ ಜಾಣ್ಮೆಗೆ ಮೊರೆ ಹೋಗಬೇಕೆಂಬ ವಾದವನ್ನು ಜಾಗತಿಕಮಟ್ಟದಲ್ಲಿ ಎತ್ತಿ ಹಿಡಿದಿದೆ.

ಎಲ್ಲ ನೈಸರ್ಗಿಕ ಪರಿಸರ ವ್ಯವಸ್ಥೆಗಳಿಗೂ ಅಸ್ವಸ್ಥತೆಯನ್ನು ತಕ್ಕಮಟ್ಟಿಗೆ ದುರಸ್ತಿ ಮಾಡಿಕೊಳ್ಳುವ ಅಂತರ್ಗತ ಸಾಮರ್ಥ್ಯವಿದೆ. ನಶಿಸಿಹೋಗುತ್ತಿರುವ ಈ ಸಾಮರ್ಥ್ಯವನ್ನು ಪುನರುಜ್ಜೀವಿಸಿ, ವಾಯುಗುಣ ಬದಲಾವಣೆಯ ಪರಿಣಾಮಗಳನ್ನು ಎದುರಿಸುವ ಜಾಣ್ಮೆಯೇ ನಿಸರ್ಗಾಧಾರಿತ ಪರಿಹಾರದ ತಿರುಳು. ಇಲ್ಲಿ ಬೃಹತ್ ಅಣೆಕಟ್ಟೆಗಳ ನಿರ್ಮಾಣಕ್ಕೆ ಅವಕಾಶವಿಲ್ಲ. ವಿಶಾಲವಾದ ಜಲಾಶಯಗಳಿಲ್ಲ. ಸಮುದ್ರದ ಅಲೆಗಳ ಕೊರೆತ ಎದುರಿಸಲು ತಡೆಗೋಡೆಗಳಿಲ್ಲ. ಅವುಗಳ ಬದಲಿಗೆ ತರಿಭೂಮಿಯ ಪುನರುಜ್ಜೀವನ ಮತ್ತು ಸಂರಕ್ಷಣೆಯಿಂದ ಪ್ರವಾಹವನ್ನು ನಿರ್ವಹಿಸುವ ಜಾಣ್ಮೆಯಿದೆ. ಅರಣ್ಯೀಕರಣದಿಂದ ಮಣ್ಣಿನ ಸವಕಳಿಯನ್ನು ತಡೆದು, ಅಂತರ್ಜಲದ ಮರುಪೂರಣ ಮಾಡಿ, ಬರಗಾಲವನ್ನು ಎದುರಿಸುವ ಉಪಾಯಗಳಿವೆ. ಹವಳದ ದಿಬ್ಬಗಳು ಮತ್ತು ಕಾಂಡ್ಲಾ ಸಸ್ಯಗಳ ನಿರ್ವಹಣೆಯಿಂದ ಸಮುದ್ರದ ಅಲೆಗಳ ಕೊರೆತವನ್ನು ತಡೆಯುವ ಕೌಶಲವಿದೆ. ವಿವಿಧ ನಿಸರ್ಗಾಧಾರಿತ ಪರಿಹಾರಗಳನ್ನು ಯಶಸ್ವಿಯಾಗಿ ಬಳಸಿಕೊಂಡು ನೀರು, ನೆಲ, ಜೀವವೈವಿಧ್ಯಗಳನ್ನು ಸಂರಕ್ಷಿಸಿರುವ ನೂರಾರು ಸ್ಥಳೀಯ ನಿದರ್ಶನಗಳು ಭಾರತವೂ ಸೇರಿದಂತೆ ಅನೇಕ ದೇಶಗಳಲ್ಲಿ ದೊರೆಯುತ್ತವೆ.

ಇಂತಹ ಪರಿಹಾರದ ಅತಿಮುಖ್ಯ ಅನುಕೂಲವೆಂದರೆ, ಸಮಸ್ಯೆಯೊಂದನ್ನು ಪರಿಹರಿಸುವ ಪ್ರಯತ್ನದಲ್ಲಿ ಅದು ಹೊಸ ಸಮಸ್ಯೆಗಳನ್ನು ಸೃಷ್ಟಿಸುವುದಿಲ್ಲ. ಬದಲಿಗೆ ಏಕಕಾಲದಲ್ಲಿ ಅನೇಕ ಹೊಸ ಪ್ರಯೋಜನಗಳನ್ನು ಒದಗಿಸುತ್ತದೆ. ಪರಿಹಾರವೂ ಬಹುತೇಕ ಶಾಶ್ವತ. ಆದರೆ ಇದೇ ಮಾತನ್ನು ಬೂದು ಪರಿಹಾರಗಳ ಬಗ್ಗೆ ಹೇಳುವಂತಿಲ್ಲ. ಈ ಎರಡು ಪರಿಹಾರಗಳ ಹೋಲಿಕೆಗೆ ಉದ್ದೇಶಿತ ಮೇಕೆದಾಟು ಅಣೆಕಟ್ಟೆಗಿಂತ ಬೇರೊಂದು ನಿದರ್ಶನ ಬೇಕಿಲ್ಲ. ರಾಜಕೀಯವನ್ನು ಹೊರಗಿಟ್ಟು ಈ ಹೋಲಿಕೆ ಮಾಡೋಣ.

ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ 4.75 ಟಿಎಂಸಿ ಅಡಿಗಳಷ್ಟು ಕುಡಿಯುವ ನೀರನ್ನು ಹೆಚ್ಚುವರಿಯಾಗಿ ಒದಗಿಸುವುದು ಈ ಯೋಜನೆಯ ಉದ್ದೇಶ. 400 ಮೆಗಾವಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯೂ ಉಂಟು. ಇದಕ್ಕಾಗಿ ಮೇಕೆದಾಟುವಿನಿಂದ 1.5 ಕಿ.ಮೀ. ದೂರದ ಒಂಟಿಗೊಂಡ್ಲು ಬಳಿ ಕಾಂಕ್ರೀಟ್ ಗುರುತ್ವ ಅಣೆಕಟ್ಟೆಯನ್ನು ನಿರ್ಮಿಸಲಾಗುತ್ತದೆ. ₹ 9,000 ಕೋಟಿ ಅಂದಾಜು ವೆಚ್ಚದ ಈ ಬೂದು ಯೋಜನೆ ಜಾರಿಯಾದರೆ, ಬೆಂಗಳೂರಿಗೆ ನೀರು ದೊರೆಯುತ್ತದೆ ನಿಜ. ಆದರೆ ಅಣೆಕಟ್ಟೆಯ ನಿರ್ಮಾಣದೊಂದಿಗೆ ಸಮಸ್ಯೆಗಳ ಸರಮಾಲೆಯೇ ಪ್ರಾರಂಭವಾಗುತ್ತದೆ.

ಮೇಕೆದಾಟು ಬಳಿ ಕಾವೇರಿ ಇಕ್ಕಟ್ಟಾದ ಜಾಗದಲ್ಲಿ ಅತಿ ರಭಸವಾಗಿ ಹರಿಯುತ್ತದೆ. ಅಣೆಕಟ್ಟೆಯ ನಿರ್ಮಾಣದಿಂದ ಅದರ ಮೂಲ ಸ್ವರೂಪವೇ ಬದಲಾಗಿ, ನದಿ ನಿಂತ ನೀರಾಗುತ್ತದೆ. 5,000 ಹೆಕ್ಟೇರ್‌ಗಳಷ್ಟು ಅರಣ್ಯವು ಜಲಾಶಯದಲ್ಲಿ ಮುಳುಗುತ್ತದೆ. 'ಹೊಳೆಮತ್ತಿ'ಯಂತಹ, ಅಲ್ಲಿನ ಪರಿಸರ ವ್ಯವಸ್ಥೆಯ ಮೇಲೆ ಗಾಢ ಪ್ರಭಾವ ಬೀರುವ ಹಲವು 'ಮೂಲಾಧಾರ ಪ್ರಭೇದ'ಗಳು ಕಣ್ಮರೆಯಾಗುತ್ತವೆ. ಈ ಭಾಗದಲ್ಲಿರುವ ವಿಶ್ವವಿಖ್ಯಾತ 'ಹಂಪ್‌ಬ್ಯಾಕ್ ಮಶೀರ್' ಮೀನು ಅಲ್ಲಿ ಬದುಕುವುದು ಅಸಾಧ್ಯವಾಗುತ್ತದೆ. ವನ್ಯಜೀವಿಗಳ ಆವಾಸ ಮತ್ತಷ್ಟು ತುಂಡಾಗಿ, ನೆಲೆ ಕಳೆದುಕೊಂಡ ವನ್ಯಜೀವಿಗಳು ಅರಣ್ಯದಂಚಿನತ್ತ ಬರುವುದರಿಂದ ಮಾನವ-ವನ್ಯಜೀವಿ ಸಂಘರ್ಷದ ಪ್ರಕರಣಗಳು ಏರುತ್ತವೆ. ಸಸ್ಯಸಮೂಹದ ಸಂಯೋಜನೆ ಬದಲಾಗಿ ಹಲವಾರು ಆಕ್ರಮಣಕಾರಿ ಸಸ್ಯಪ್ರಭೇದಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ನೀರಿನಲ್ಲಿ ಮುಳುಗಿ ಕೊಳೆಯುವ ಸಸ್ಯಸಮೂಹ ಮತ್ತು ಜೌಗುನೆಲ ಉತ್ಪಾದಿಸುವ ಮೀಥೇನ್ ಅನಿಲ ವಾಯುಮಂಡಲಕ್ಕೆ ಸೇರುತ್ತದೆ. ಜಾಗತಿಕ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುವ ಮೀಥೇನ್, ಕಾರ್ಬನ್ ಡೈ ಆಕ್ಸೈಡ್‌ಗಿಂತ ಇಪ್ಪತ್ತೊಂದು ಪಟ್ಟು ಹೆಚ್ಚು ಪ್ರಭಾವಶಾಲಿಯೆಂಬ ಅಂಶ ಸಮಸ್ಯೆಯನ್ನು ಮತ್ತಷ್ಟು ತೀವ್ರಗೊಳಿಸುತ್ತದೆ. ಈ ಎಲ್ಲ ಪರಿಣಾಮಗಳಿಗಿಂತ ಹೆಚ್ಚಾಗಿ, ಮುಂದಿನ ಆರೇಳು ದಶಕಗಳ ಒಳಗಾಗಿ ಹೂಳು ತುಂಬಿದ ಈ ಅಣೆಕಟ್ಟೆ ನಿರರ್ಥಕವಾಗುತ್ತದೆ.



ಮೇಕೆದಾಟು ಅಣೆಕಟ್ಟೆಯನ್ನು ಕಟ್ಟದೆ, ನಿಸರ್ಗಾಧಾರಿತ ವಿಧಾನಗಳಿಂದಲೇ ಬೆಂಗಳೂರಿನ ನೀರಿನ ದಾಹವನ್ನು ತಣಿಸುವುದು ಸಾಧ್ಯವೇ? 'ಖಂಡಿತವಾಗಿ ಸಾಧ್ಯ' ಎನ್ನುವುದು ಈ ಸಮಸ್ಯೆಯ ಎಲ್ಲ ಆಯಾಮಗಳನ್ನೂ ವಿವರವಾಗಿ ಅಧ್ಯಯನ ಮಾಡಿರುವ, ಭಾರತೀಯ ವಿಜ್ಞಾನ ಮಂದಿರದ ಪರಿಣತ ವಿಜ್ಞಾನಿಗಳ ಅಭಿಪ್ರಾಯ. ಬೆಂಗಳೂರಿನ ವಾರ್ಷಿಕ ಗೃಹ ಬಳಕೆಯ ನೀರಿನ ಬೇಡಿಕೆ ಸುಮಾರು 21 ಟಿಎಂಸಿ ಅಡಿ. ಮಳೆಯಿಂದ ದೊರೆಯುವ ವಾರ್ಷಿಕ ನೀರಿನ ಪ್ರಮಾಣ ಸುಮಾರು 15 ಟಿಎಂಸಿ ಅಡಿ. ಪ್ರತಿವರ್ಷ ನಗರ ಉತ್ಪಾದಿಸುವ 20 ಟಿಎಂಸಿ ಅಡಿಗಳಷ್ಟು ನೀರನ್ನು ಸಂಸ್ಕರಿಸಿ 16 ಟಿಎಂಸಿ ಅಡಿಗಳಷ್ಟು ನೀರನ್ನು ಮತ್ತೆ ಬಳಸಬಹುದು. ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿನ ಕೆರೆಗಳ ಪುನರುಜ್ಜೀವನ, ಮಳೆನೀರಿನ ಸಮರ್ಥ ಸಂಗ್ರಹಣೆ, ಕೊಳಚೆ ನೀರಿನ ಸಂಸ್ಕರಣೆ, ಪುನರ್ಬಳಕೆ ಮತ್ತು ಜವಾಬ್ದಾರಿಯುತ ನಿರ್ವಹಣೆಯಿಂದ ಮೇಕೆದಾಟುವಿನಿಂದ ನೀರು ತರದೇ ನಗರದ ನೀರಿನ ಬೇಡಿಕೆಯನ್ನು ಪೂರೈಸಬಹುದು ಎಂಬುದು ವಿಜ್ಞಾನಿಗಳ ಖಚಿತ ಅಭಿಮತ.

ನಿಸರ್ಗಾಧಾರಿತ ಪರಿಹಾರಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿರುವ ಅತಿದೊಡ್ಡ ಅಡ್ಡಿಯೆಂದರೆ ಸರ್ಕಾರಗಳ ನಿರಾಸಕ್ತಿ ಮತ್ತು ಹಣಕಾಸಿನ ಕೊರತೆ. ಬೂದು ಯೋಜನೆಗಳಲ್ಲಿ ಹಣದ ಹೊಳೆಯೇ ಹರಿಯುವುದರಿಂದ ಸಂಬಂಧಪಟ್ಟವರಿಗೆಲ್ಲ ಅದರಲ್ಲಿಯೇ ಅಪಾರ ಆಸಕ್ತಿ. ಮಡಗಾಸ್ಕರ್, ಸೆನೆಗಲ್ ಮುಂತಾದ ದೇಶಗಳಲ್ಲಿ ನಿಸರ್ಗಾಧಾರಿತ ಯೋಜನೆಗಳಿಗೆ ವಿಶ್ವಬ್ಯಾಂಕ್ ಆರ್ಥಿಕ ನೆರವು ನೀಡಿದೆ. ಆದರೆ ಅದರ ಹತ್ತು ಪಾಲಿನಷ್ಟು ಹಣವನ್ನು ಫಾಸಿಲ್ ಇಂಧನದ ಅಭಿವೃದ್ಧಿ, ಬಳಕೆಗಳಿಗೆ ನೀಡಿದೆ. ವಾಯುಗುಣ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ವಿಶೇಷ ಹಣ ಸಹಾಯ ನೀಡುವ ಗ್ಲೋಬಲ್ ಎನ್ವೈರನ್‌ಮೆಂಟ್ ಫೆಸಿಲಿಟಿ, ಗ್ರೀನ್ ಕ್ಲೈಮೇಟ್ ಫಂಡ್, ಅಡಾಪ್ಟೇಶನ್ ಫಂಡ್ ಮುಂತಾದ ಎಲ್ಲ ಜಾಗತಿಕ ಸಂಸ್ಥೆಗಳ ಹಣೆಬರಹವೂ ಇದೇ. ಬೂದು ಯೋಜನೆಗಳಿಗೆ ಶೇ 87ರಷ್ಟು ನೆರವು ದೊರೆತರೆ, ನಿಸರ್ಗಾಧಾರಿತ ಯೋಜನೆಗಳಿಗೆ ಶೇ 13, ಸಾಲ ನೀಡಲು ನಿಬಂಧನೆಗಳೂ ಹೆಚ್ಚು.

ವಾಯುಗುಣ ಬದಲಾವಣೆಯ ಗಂಭೀರ ಪರಿಣಾಮಗಳನ್ನು ಅಲ್ಪವೆಚ್ಚದಲ್ಲಿ ಸಮರ್ಥವಾಗಿ ಎದುರಿಸಬಲ್ಲ ನಿಸರ್ಗಾಧಾರಿತ ಯೋಜನೆಗಳು ಎಲ್ಲ ಸರ್ಕಾರಗಳಿಗೆ ಆಡಂಬರದ ಪ್ರದರ್ಶಿಕೆಗಳು ಮಾತ್ರ. ಈ ತೋರಿಕೆಯ ಕಾಳಜಿ ಪ್ರಾಮಾಣಿಕ ಆದ್ಯತೆಯಾಗಿ ಬದಲಾಗಬೇಕೆಂಬುದು ವಿಶ್ವಸಂಸ್ಥೆ ವರದಿಯ ಆಶಯ.

ಚುರುಮುರಿ



ಪಾಪಿ ಪರದೇಶಿ ಪಕ್ಷ

• ಲಿಂಗರಾಜು ಡಿ.ಎಸ್.

ವತ್ತಾರೆಗೆ ತುರೇಮಣೆ ಮನೆತಕ್ಕೆ ಹೋದೆ. ಬ್ಯಾನರ್ರು, ಪಾಂಪ್ಲೆಟ್ಟು ಜೋಡಿಸಿಗ್ಯಂತಾ ಕುಂತಿದ್ದೋರು 'ನೋಡ್ಲಾ ಒಂದು ಹೊಸ ಪಕ್ಷ ಅನೌನ್ಸ್ ಮಾಡಿವ್ನಿ!' ಅಂದರು.

'ನಿಮ್ಮ ಪಕ್ಷದ ಸದಸ್ಯರು ಯಾರು ಸಾ?' ಕೇಳಿದೆ.

'ನೋಡ್ಲಾ ಸಂಪುಟ ವಿಸ್ತರಣೆಯಾದ್ರೆ, ಪದವಿ ಕಳಕಂಡ ಸೀನಿಯರುಗಳು, ಪದವಿ ಸಿಗದ ರೆಬೆಲ್‌ಗಳು, ಪಕ್ಷಾಂತರ ಮಾಡಿ ತಪ್ಪು ಮಾಡಿದೆ ಅಂತ ನೊಂದ್ಕಂಡೋರು, ಆತ್ಮಹತ್ಯೆ ಕೇಸು, ಸೀಡಿ ಕೇಸು, ಅಕ್ರಮದ ಕೇಸಿಗೆ ರಾಜೀನಾಮೆ ಕೊಟ್ಟು ಜಾಬಿಲ್ದೆ ಕುಂತಿರೋ ಬೇರೋಜುಗಾರರು ಬೇಜಾನ್ ಜನವ್ರೆ! ತಿನ್ನು-ತಿನ್ಸು ಅನ್ನೋ ನಮ್ಮ ಪಕ್ಷದ ಅಜೆಂಡಾ ಒಪ್ಪಿ ಇವರೆಲ್ಲಾ 'ಹಿಂಬಾಲಕರ ಜೊತೆಗೇ ನಿಮ್ಮ ಪಕ್ಷಕ್ಕೆ ಬತ್ತೀವಿ ನಮ್ಮುನ್ನ ಸಿಎಂ ಮಾಡ್ರಿ. 3,000 ಕೋಟಿ ಬೇಕಾದ್ರೂ ಕೊಟ್ಟೇವು' ಅಂತ ಜುಲುಮೆ ಮಾಡ್ತಾವ್ರೆ' ಅಂದ್ರು ತುರೇಮಣೆ.

'ಹಿಂಬಾಲಕರೇನೋ ಸಿಕ್ಕಿದ್ರು. ಇನ್ನು ಧರಣಿ-ಬೆರಣಿ ಮಾಡೋರು ಯಾರು?' ಅಂತ ಕೇಳಿದೆ.

'ಲೇಯ್ ದಡ್ಡ ಬಡ್ಡೆತ್ತುದ್ದೇ, ಪಿಎಸ್‌ಐ ಅಕ್ರಮಿಗಳು, ಕೆಪಿಎಸ್‌ಸಿ ಸಂತ್ರಸ್ತರು, ಪ್ರಶ್ನೆಪತ್ರಿಕೆ ಮಾರಿದ ಪ್ರೊಫೆಸರುಗಳು ಮುಂಬಾಲಕರಾಗಿ ಅವ್ರಲ್ಲೋ!' ಅಂದರು.

'ನಿಮ್ಮ ಜಂಡಾ ಬಣ್ಣ ಯಾಕೆ ಕರ್ರಗದೆ ಸಾ?' ಅಂತಂದೆ.

'ನೋಡ್ಲಾ ಕರಿಬಣ್ಣ ಪ್ರತಿಭಟನೆಯ ಸಂಕೇತ! ನಮ್ಮ ಪಕ್ಷದ ಹೆಸರೇ ಪಾಪ್ ಅಂದ್ರೆ ಪಾಪಿ-ಪರದೇಶಿಗಳ ಪಕ್ಷ. ಪಕ್ಷಕ್ಕೆ ಟ್ಯಾಗ್ ಲೈನೂ ಅದೆ 'ಸೇಡು ಸೇಡು ಸೇಡು' ಅಂತ!' ಅಂದ್ರು.

'ದುಡ್ಡು-ಕಾಸು ಏರ್ಪಾಡೆಂಗೆ?' ಅಂತ ವಿಚಾರಿಸಿದೆ.

'ಏಸಿಬಿ ಬಲೆಗೆ ಬಿದ್ದೋರು, ಬಿಡಿಎ-ಬಿಬಿಎಂಪಿ, ಪಾಲಿಕೆ, ಇಲಾಖೆಗಳ ಭುಕ್ತಿಮಾರ್ಗಿಗಳು ಖರ್ಚು ನೋಡಿಕ್ಯತರೆ' ಅಂತ ಲೆಕ್ಕ ಕೊಟ್ಟರು.

'ನಸುಗುನ್ನಿ ನನಮಗನೆ, ಯಾವ ಪಕ್ಷದ ರಾಜಕಾರಣಿಗಳೂ ಸತ್ಯಹರಿಶ್ಚಂದ್ರರಲ್ಲ! ಎಲ್ಲಾರೂ ಬಿಸ್ಕತ್ ತಿಂದಿರೋರೆ! ಇವುರ ಜೊತೆಗೋಯ್ತಿರೋ ನಿನ್ನ ಪಕ್ಷದ ಟ್ಯಾಗ್‌ಲೈನು 'ಉಗೀರಿ ಮಕ್ಕೆ' ಅಂತ ಬದ್ಲಾಸ್ಕಲಾ!' ಅಂದ ಯಂಟಪ್ಪಣ್ಣನ ಸಿಟ್ಟಿಗೆ ಬೆದರಿ ತುರೇಮಣೆ ಜಾಗ ಖಾಲಿ ಮಾಡಿದರು.

ಸಂಗತ

ಉಚಿತ ಸಲಹೆ ದಾರಿ ತಪ್ಪಿಸೀತು!

ಎಸ್‌ಎಸ್‌ಎಲ್‌ಸಿ ನಂತರ ಯಾವ ಕೋರ್ಸ್ ಎಂಬ ಪ್ರಶ್ನೆ ಬಂದಾಗ, ಮಗುವಿನ ಒಲವು ಯಾವುದರ ಕಡೆಗಿದೆ ಎಂಬುದಷ್ಟೇ ಮುಖ್ಯವಾಗಬೇಕು

• ಸದಾಶಿವ್ ಸೊರಟೂರು

ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಮುಗಿದಿದೆ. ಇನ್ನೇನು ಕೆಲವೇ ದಿನಗಳಲ್ಲಿ ಫಲಿತಾಂಶವೂ ಬರಲಿದೆ. ಎಸ್‌ಎಸ್‌ಎಲ್‌ಸಿ ನಂತರ ಮುಂದೇನು ಅನ್ನುವ ಶೂಲವೊಂದು ಈಗಾಗಲೇ ಅಲ್ಲಲ್ಲಿ ಮಕ್ಕಳಿಗೂ, ಪೋಷಕರಿಗೂ ಸಣ್ಣಗೆ ಚುಚ್ಚಲು ಆರಂಭಿಸಿದೆ.

ಬಿಸಿಲಿನೊಂದಿಗೆ ಈ ತಲ್ಲಣಗಳ ಕಾವೂ ಏರುತ್ತಿದೆ. ಯಾರೋ ಗೂಗಲ್ ಮಾಡಿ ಬರೆದ ಲೇಖನ ಓದುತ್ತಾ ಕೂತ ಮಗು ಅಲ್ಲಿರುವ ಕೋರ್ಸಿನೊಳಗೆ ಹೊಕ್ಕು, ಎಲ್ಲೋ ದಾರಿ ತಪ್ಪಿ ಮತ್ತೆಲ್ಲೋ ನುಗ್ಗಿ ಹೊರಬರಲಾರದೆ ದಿಕ್ಕು ತಪ್ಪುತ್ತದೆ. ಮಗುವನ್ನು ಯಾವ ಕೋರ್ಸಿಗೆ ತಳ್ಳಬೇಕು ಅನ್ನುವ ಯೋಚನೆಯಲ್ಲಿ ಪೋಷಕರು ನಿದ್ದೆ ಬಿಡುತ್ತಾರೆ.

ಕೆಲವರಿರುತ್ತಾರೆ, ಅವರ ಸಲಹೆಗಳು ಅವರಷ್ಟೇ ಹಾಸ್ಯಾಸ್ಪದ. '90 ಪರ್ಸೆಂಟ್ ಬಂದಿದೆಯಾ? ನೀನು ಸೈನ್ಸ್ ತಗೊ'. 'ನಿಂದು ಬರೀ 80 ಪರ್ಸೆಂಟಾ? ನಿನಗೆ ಕಾಮರ್ಸ್ ಅಡ್ಡಿಯಿಲ್ಲ'. '70 ಪರ್ಸೆಂಟ್ ಒಳಗಿದ್ರೆ ಆರ್ಟ್ಸ್ ತಗೊಳ್ಳೋದು ಒಳ್ಳೆಯದು'. 'ಜಸ್ಟ್ ಪಾಸಾ, ನೀನು ಐಟಿಐ ಮಾಡು'. ಇಂತಹ ಸಲಹೆಗಳಿಂದಲೇ ಎಷ್ಟೋ ಹುಡುಗರ ಭವಿಷ್ಯಗಳು ಕತ್ತಲಾಗಿವೆ.

ನನ್ನ ಪಕ್ಕದ ಮನೆಯಲ್ಲಿ ಒಬ್ಬ ಹುಡುಗನಿಗೆ ಶೇ 91ರಷ್ಟು ಅಂಕ ಬಂದಿತ್ತು. ಅವನನ್ನು ನಗರದ ಸೈನ್ಸ್ ಕಾಲೇಜೊಂದರಲ್ಲಿ ಲಕ್ಷ ರೂಪಾಯಿ ಕೊಟ್ಟು ಸೇರಿಸಲಾಯಿತು. ಹೆಚ್ಚುಕಡಿಮೆ ಅವನಷ್ಟೇ ಅಂಕ ಪಡೆದಿದ್ದ ಅವನ ಸ್ನೇಹಿತನಿಗೂ ಅದೇ ಕಾಲೇಜಿನಲ್ಲಿ ಸೈನ್ಸ್ ಓದಲು ಪುಸಲಾಯಿಸಲಾಯಿತು. 'ನನಗೆ ಸೈನ್ಸ್ ಇಷ್ಟ ಇಲ್ಲ. ಆರ್ಟ್ಸ್ ಓದಿ ಲಾಯರ್ ಆಗ್ಬೇಕು' ಅಂದರೂ ಬಿಡಲಿಲ್ಲ. ಸಲಹೆಗಾರರು ಅವನ ಪೋಷಕರ ತಲೆತುಂಬಿ, ಇದ್ದ ಒಂದು ಎಕರೆ ಜಮೀನನ್ನು ಮಾರಿಸಿ ಅದೇ ಕಾಲೇಜಿಗೆ ಸೇರಿಸಿದರು. ಒಂದೇ ವರ್ಷಕ್ಕೆ ಅವನು ಕಾಲೇಜು ಬಿಟ್ಟು ಮನೆಗೆ ಬಂದು ಕೂತ. ಕೊನೆಗೆ ಅವನ ಓದೂ ಇಲ್ಲ, ಇದ್ದ ಒಂದು ಎಕರೆ ಜಮೀನೂ ಇಲ್ಲ.

ಹಾಗಾದರೆ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡುವುದು ತಪ್ಪೇ? ಖಂಡಿತ ತಪ್ಪಲ್ಲ. ಆದರೆ ಆ ಮಾಹಿತಿ ಯಾರು ನೀಡುತ್ತಿದ್ದಾರೆ ಅನ್ನುವುದು ಮುಖ್ಯ. ಅಷ್ಟಕ್ಕೂ ನಾವು ನೀಡಿದ ಮಾಹಿತಿ ಆಧರಿಸಿ ಮಗುವಿನ ಒಳಗಿನ ಗುರಿ ಬದಲಾಗುವುದೇ? ಮಗುವಿನ ಗುರಿ ರೂಪುಗೊಳ್ಳುವುದು ಹೊರಗಿನ ಮಾಹಿತಿ ಹೇರುವಿಕೆಯಿಂದಲ್ಲ, ಒಳಗಿನ ತುಡಿತದಿಂದ. ಒಂದನೇ ಕ್ಲಾಸಿನ ಮಗುವಿಗೆ 'ನೀನು ಏನಾಗಬೇಕು' ಅಂತ ಕೇಳಿ ನೋಡಿ. ಮಗು 'ನಾನು ಡ್ರೈವರ್ ಆಗ್ತೀನಿ' ಅನ್ನುತ್ತೆ. ಸ್ವಲ್ಪ ದೊಡ್ಡವನಾದ ಮೇಲೆ ಕೇಳಿ ನೋಡಿ 'ಪೊಲೀಸ್ ಆಗ್ತೀನಿ' ಅನ್ನುತ್ತೆ. ಆದರೆ ಹತ್ತನೇ ತರಗತಿಗೆ ಬರುವ ಹೊತ್ತಿಗೆ ಮಗುವಿಗೆ ತಾನೇನು ಆಗಬೇಕೆಂಬುದರ ಒಂದು ಅಂದಾಜು ಖಂಡಿತ ಇರುತ್ತದೆ.

'ನೀಟ್'ನಲ್ಲಿ ಮೆಡಿಕಲ್ ಸೀಟು ಗಿಟ್ಟಿಸಿಕೊಂಡ ನನ್ನ ವಿದ್ಯಾರ್ಥಿನಿಗೆ ಶುಭಾಶಯ ಹೇಳಲು ಫೋನ್ ಮಾಡಿದೆ. 'ನಾನು ಮೆಡಿಕಲ್‌ಗೆ ಹೋಗ್ತಿಲ್ಲ ಸರ್. ಮನೆಯವರ ಬಲವಂತಕ್ಕೆ ನೀಟ್ ಬರೆದೆ. ಫ್ಯಾಷನ್ ಡಿಸೈನಿಂಗ್ ನಂಗಿಷ್ಟ. ಆ ಫೀಲ್ಡಲ್ಲಿ ನಂಗೆ ಖುಷಿ ಇದೆ' ಅಂದಳು. '3 ಈಡಿಯಟ್ಸ್' ಸಿನಿಮಾದಲ್ಲಿ ಬರುವ ಒಂದು ಸಂಭಾಷಣೆ ಹೀಗಿದೆ 'ನಿನಗೆ ಏನು ಓದಬೇಕು ಎನಿಸುವುದೋ ಅದನ್ನು ಓದು. ರೇಸ್ ನಡೆದಿದೆ ಎಂದು ಹುಚ್ಚು ಹಿಡಿದವರ ಹಾಗೆ ನೀನೂ ಓಡಬೇಡ. ಯೋಗ್ಯತೆ ಗಳಿಸಿಕೊಳ್ಳಲಿಕ್ಕೆ ಏನು ಬೇಕೋ ಅದನ್ನು ಮಾಡು. ಒಮ್ಮೆ ಯೋಗ್ಯ ಅನ್ನಿಸಿಕೊಂಡರೆ ಸಾಕು, ಯಶಸ್ಸು ನಿನ್ನ ಹಿಂದೆ ನೆರಳಿನಂತೆ ಬರುತ್ತೆ...' ಯೋಚಿಸಬೇಕಾದ ಮಾತುಗಳಿವು.

ಈಗ ಅನುಭವಿಸುತ್ತಿರುವ ಜೀವನ ನಮ್ಮ ನಮ್ಮ ಆಯ್ಕೆಗಳ ಫಲ. ಏನೋ ಸರಿಯಿಲ್ಲ ಅನಿಸಿದರೆ, ದುಡ್ಡು ಇದ್ದರೂ ನೆಮ್ಮದಿ ಇಲ್ಲ ಅನಿಸಿದರೆ, ನೆಮ್ಮದಿ ಇದೆ ದುಡ್ಡಿಲ್ಲ ಅನಿಸಿದರೆ, ಅದು ಜೀವನದ ಯಾವುದೋ ಸಂದರ್ಭದಲ್ಲಿ ನೀವು ಆಯ್ದುಕೊಂಡ ದಾರಿಯ ಫಲ. 'ಆಯ್ಕೆಗಳು ಗುರಿಗೆ ಕೀಲುಗಳಿದ್ದಂತೆ' ಎನ್ನುತ್ತಾರೆ ಅಮೆರಿಕದ ಖ್ಯಾತ ಬರಹಗಾರ ಮಾರ್ಕಮ್. ಹೌದು, ಸರಿಯಾದ ಸಮಯದಲ್ಲಿ ಮಾಡುವ ಆಯ್ಕೆ ಜೀವನದ ದಿಕ್ಕನ್ನೇ ಬದಲಿಸುತ್ತದೆ.



ಎಸ್‌ಎಸ್‌ಎಲ್‌ಸಿ ನಂತರ ಮುಂದೇನು ಅನ್ನುವ ಪ್ರತೀ ಸಲಹೆಯು ಷೇರು ಮಾರುಕಟ್ಟೆಗೆ ಮಗುವಿನ ನಾಳೆಗಳನ್ನು ಹೂಡುತ್ತಿರುವಂತೆ ಕೇಳಿಸುತ್ತದೆ. ಎಲ್ಲಾ ಸಲಹೆಗಳಲ್ಲಿ ಇರುವ ಪ್ರಮುಖ ಅಂಶ ಹಣ. ನೀವು ಎಲ್ಲಿ ಹೆಚ್ಚು ದುಡಿಯಬಹುದು ಎಂಬುದನ್ನು ಮಾತ್ರ ಹೇಳುತ್ತವೆ. 'ನಿನ್ನ ಇಷ್ಟದ ಓದಿನಿಂದ ಬದುಕು ನಿನ್ನಿಷ್ಟದಂತೆ ಆಗುತ್ತದೆ' ಎನ್ನುವುದಿಲ್ಲ ಯಾರೂ. 'ನೀನೊಬ್ಬ ಒಳ್ಳೆಯ ರೈತನಾಗಬಹುದು' ಎಂದು ಹೇಳಿರುವ ಒಂದೇ ಒಂದು ಸಲಹೆ ಕೂಡ ಕಿವಿಗೆ ಬೀಳುವುದಿಲ್ಲ.

ಪ್ರೀತಿಸುವ ಓದನ್ನು ಮತ್ತು ಅದರಿಂದ ಸಿಕ್ಕುವ ಕೆಲಸವನ್ನು ಮಾಡುವ ವ್ಯಕ್ತಿಯೇ ಜೀವನದಲ್ಲಿ ಪರಮಸುಖಿ. ಯಾವ ಕೋರ್ಸ್ ಎಂಬ ಪ್ರಶ್ನೆ ಬಂದಾಗ ಮಕ್ಕಳೇ ನೀವೆಷ್ಟು ನಿಮಗೆ ಅರ್ಥವಾಗಿದ್ದೀರಿ ಯೋಚಿಸಿ. ನಿಮ್ಮ ಒಲವು ಯಾವ ಕಡೆ, ನಿಮ್ಮ ಬದುಕಿನ ನಿಲುವೇನು ಚಿಂತಿಸಿ. ಹಣ ಸಿಗಬಹುದು, ಆದರೆ ಅದರಿಂದ ನಿಮ್ಮ ಬಾಳು ಎಷ್ಟು ಚೆಂದವಾಗುತ್ತದೆ ಕೇಳಿಕೊಳ್ಳಿ. ಹಣವಿಲ್ಲದೆ ಬರೀ ಆದರ್ಶ ಕೂಡ ಹೊಟ್ಟೆ ತುಂಬಿಸುವುದಿಲ್ಲ ನೆನಪಿರಲಿ. ಎರಡನ್ನೂ ಕರುಣಿಸುವ ಹಾದಿಯೇ ನಿಮ್ಮ ಆಯ್ಕೆಯಾಗಲಿ.

ಮಹತ್ವಾಕಾಂಕ್ಷೆಯೆಂಬುದು ನಿಮ್ಮ ಒಳಗಿನಿಂದ ಬರುತ್ತದೆಯೇ ವಿನಾ ಹೊರಗಿನಿಂದಲ್ಲ. ವೃತ್ತದಲ್ಲಿ ಇರುವವನು ನಿಮಗೆ ಚೆನ್ನಾಗಿರುವ ದಾರಿ ತೋರಿಸಬಹುದು. ಆದರೆ ಅದು ನಿಮ್ಮನ್ನು ನಿಮ್ಮ ಊರಿಗೆ ಕರೆದೊಯ್ಯುವ ಖಾತರಿ ಇದೆಯೇ? ಅದನ್ನು ನೀವೇ ಯೋಚಿಸಬೇಕು.

ವಾಚಕರ ವಾಣಿ

ರಾಜಕೀಯ ತಂತ್ರಗಾರಿಕೆ ಹೊಸದಲ್ಲ

ರಾಜ್ಯದ ಮುಖ್ಯಮಂತ್ರಿ ಆಗುವವರಿಗೆ ಪಕ್ಷದ ಬೊಕ್ಕಸಕ್ಕೆ ಗಣನೀಯ ಧನಸಹಾಯ ಮಾಡುವ ಸಾಮರ್ಥ್ಯ ಇರಬೇಕು ಎನ್ನುವುದು ಬಹುತೇಕ ಎಲ್ಲಾ ಪಕ್ಷಗಳಲ್ಲಿ ಇರುವ ಅಲಿಖಿತ ನಿಯಮ ಎನ್ನುವುದು ಎಲ್ಲರಿಗೂ ತಿಳಿದ ಸತ್ಯ ಮತ್ತು ಲಾಗಾಯ್ತಿನಿಂದ ಕೇಳುತ್ತಿರುವ ಮಾತು. ಇದನ್ನು ಬಸನಗೌಡ ಪಾಟೀಲ ಯತ್ನಾಳ ತಮ್ಮದೇ ಧಾಟಿಯಲ್ಲಿ ಹೇಳಿದ್ದಾರೆ. ಯತ್ನಾಳ ಇದನ್ನು ಇನ್ನೂ ಸವಿಸ್ತಾರವಾಗಿ ಹೇಳಿ, ಇದರ ಹಿಂದೆ ಇರುವ ದೆಹಲಿ ದೊರೆಗಳ ಹೆಸರನ್ನೂ ಬಹಿರಂಗಪಡಿಸಿದ್ದರೆ ಅವರ ಹೇಳಿಕೆಗೆ ಇನ್ನೂ ತೂಕ ಬರುತ್ತಿತ್ತು.

'ಹಿಟ್ ಆ್ಯಂಡ್ ರನ್' ಮಾಡುವ ಅವರ ರಾಜಕೀಯ ನಡೆ ಮತ್ತು ಸಮಯ ಬಂದಾಗ ಎಲ್ಲವನ್ನೂ ಹೇಳುತ್ತೇನೆ ಎನ್ನುವ ರಾಜಕೀಯ ತಂತ್ರಗಾರಿಕೆ, ಅವರು ಸತ್ಯವನ್ನು ಹೇಳಿದರೂ ಜನ ಅವುಗಳನ್ನು ರಾಜಕೀಯ ಸ್ಟಂಟ್ ಎಂದು ನೋಡುವಂತೆ ಮಾಡುತ್ತವೆ.

ರಮಾನಂದ ಶರ್ಮಾ, ಬೆಂಗಳೂರು

ಮೊದಲೇ ಕ್ರಮ ಕೈಗೊಳ್ಳಲಿಲ್ಲವೇಕೆ?

ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿ, ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ, ಕಳೆದ ಡಿಸೆಂಬರ್‌ನಲ್ಲಿ ಲೋಕೋಪಯೋಗಿ ಇಲಾಖೆಯ ಎಇ, ಜೆಇ ಪರೀಕ್ಷೆಯಲ್ಲಿ ಸಹ ಅಕ್ರಮ ನಡೆಸುವಾಗ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಆದರೆ ಆತ ತನ್ನ ಬಂಧನವನ್ನು ಮರೆಮಾಚಲು ನೀರಾವರಿ ಇಲಾಖೆಯಿಂದ 17 ದಿನಗಳ ವೈದ್ಯಕೀಯ ರಜೆ ಮಂಜೂರು ಮಾಡಿಸಿಕೊಂಡಿದ್ದುದಾಗಿ ವರದಿಯಾಗಿದೆ (ಪ್ರ.ವಾ., ಮೇ 9).

ಈ ಕುರಿತು ಸಹಜವಾಗಿ ಉದ್ಭವಿಸುವ ಪ್ರಶ್ನೆಗಳು: ಆಪಾದಿತ ಎಂಜಿನಿಯರ್ ಅನ್ನು ಬಂಧಿಸಿದ್ದ ವಿಷಯವನ್ನು ಪೊಲೀಸ್ ಇಲಾಖೆಯು ನೀರಾವರಿ ಇಲಾಖೆಗೆ ತಿಳಿಸಿರಲಿಲ್ಲವೇ ಅಥವಾ ನೀರಾವರಿ ಇಲಾಖೆಯ ಗಮನಕ್ಕೆ ಬಂದಿರಲಿಲ್ಲವೇ? ತಿಳಿಸಿದ್ದರೂ, ಗಮನಕ್ಕೆ ಬಂದಿದ್ದೂ, ಪ್ರಕರಣ ನಡೆದು ಐದು ತಿಂಗಳಾದರೂ ಆತನನ್ನು ಅಮಾನತಿನಲ್ಲಿ ಇಡದೆ, ಎರಡನೇ ಪ್ರಕರಣ ಭಾರಿ ಸದ್ದು ಮಾಡಿದ ನಂತರವಷ್ಟೇ ಅಮಾನತಿನಲ್ಲಿ ಇಟ್ಟಿದ್ದೇಕೆ? ಇದರಲ್ಲಿ ಈ ಎರಡೂ ಇಲಾಖೆಗಳ ಸಂಬಂಧಿತ ಅಧಿಕಾರಿಗಳು ಆಪಾದಿತನನ್ನು ರಕ್ಷಿಸಲು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಹಾಗೆಯೇ, ಆಪಾದಿತ ಅಧಿಕಾರಿಗೆ ಪ್ರಭಾವಿಗಳ ಸಖ್ಯವಿದೆ ಎಂಬುದು ಖಚಿತವಾಗುತ್ತದೆ. ಮೊದಲ ಪ್ರಕರಣದಲ್ಲಿ ಬಂಧಿತನಾಗಿದ್ದಾಗಲೇ ಆತನನ್ನು ಅಮಾನತಿನಲ್ಲಿರಿಸಿ, ವಿಚಾರಣೆಗೆ ಒಳಪಡಿಸಿದ್ದರೆ, ಎರಡನೇ ಹಗರಣದಲ್ಲಿ ಧೈರ್ಯವಾಗಿ ಆತ ಮೂಗು ತೂರಿಸುತ್ತಿರಲಿಲ್ಲ. ಆದ್ದರಿಂದ, ವಿಳಂಬ ನೀತಿ ಅನುಸರಿಸಿ ಕರ್ತವ್ಯಲೋಪ ಎಸಗಿರುವ ಸಂಬಂಧಿಸಿದ ಇತರ ನೌಕರರನ್ನೂ ಅಮಾನತಿನಲ್ಲಿ ಇಟ್ಟು, ವಿಚಾರಣೆ ನಡೆಸಬೇಕಾದ ಅವಶ್ಯಕತೆಯಿದೆ. ಇಲ್ಲದಿದ್ದರೆ ಇಂತಹ ಹಗರಣಗಳು ಎಗ್ಗಿಲ್ಲದೆ ನಡೆಯುತ್ತಲೇ ಇರುತ್ತವೆ.

ಪುಟ್ಟೇಗೌಡ, ಬೆಂಗಳೂರು

ಕಾಡುತ್ತಿವೆ ಪ್ರಶ್ನೆಗಳು

ಲಂಚ ಕೊಟ್ಟು
ಆಯ್ಕೆಯಾಗುವ ಆರಕ್ಷಕ,
ಸಾರ್ವಜನಿಕರಿಗೆ ಎಷ್ಟರಮಟ್ಟಿಗೆ
ರಕ್ಷಕನಾಗಿರುತ್ತಾನೆ?
ಭ್ರಷ್ಟರನ್ನು ಬೇಟೆಯಾಡಬೇಕಾದ
ಪೊಲೀಸರೇ ತಮ್ಮದೇ
ಇಲಾಖೆಯ ಲಂಚಕೋರ
ಪೊಲೀಸರನ್ನು ಹಿಡಿಯಬೇಕಾದ
ಪರಿಸ್ಥಿತಿ ಹೇಗೆ ಬಂತು?!

ಹರಳಹಳ್ಳಿ ಪುಟ್ಟರಾಜು
ಪಾಂಡವಪುರ

ಭ್ರಷ್ಟಾಚಾರ ನಿಗ್ರಹ 'ಶಕ್ತಿ ಕೇಂದ್ರ'ದಿಂದಲೇ ಶುರುವಾಗಲಿ

'ಭ್ರಷ್ಟಾಚಾರವನ್ನು ಸಹಿಸುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆ ನೀಡಿ ಕೈತೊಳೆದುಕೊಂಡಿದ್ದಾರೆ. ಆದರೆ ಇದಕ್ಕಿಂತ ಮೊದಲು, ಭ್ರಷ್ಟಾಚಾರ ನಿಗ್ರಹ ಕಾರ್ಯ ವಿಧಾನಸೌಧದಿಂದಲೇ ಶುರುವಾಗಬೇಕು. ಈಗ ಬಯಲಾಗುತ್ತಿರುವ ಅನೇಕ ಹಗರಣಗಳಲ್ಲಿ ಮಂತ್ರಿ ಮಹೋದಯರು ಶಾಮೀಲಾಗಿರುವ ಆರೋಪ ಕೇಳಿಬರುತ್ತಿದೆ. ಹಗರಣಗಳ ತನಿಖೆಯ ಸಮಯದಲ್ಲಿ ಅವರು ನೇಪಥ್ಯಕ್ಕೆ ಸರಿದು ಅಧಿಕಾರಿಗಳನ್ನು ಬಲಿ ಕೊಡುವ ಕಾರ್ಯ ನಡೆದುಕೊಂಡು ಬರುತ್ತಿದೆ. ಮುಖ್ಯಮಂತ್ರಿಗಳಿಗೆ ಭ್ರಷ್ಟಾಚಾರವನ್ನು ನಿಜವಾಗಿಯೂ ತಡೆಯಬೇಕೆಂಬ ಇಚ್ಛಾಶಕ್ತಿ ಇದ್ದರೆ ಅವರು ಆ ಕಾರ್ಯವನ್ನು ತಮ್ಮ ಕಾಲ ಬುಡದಿಂದಲೇ ಶುರುಮಾಡಲಿ. ಆದರೆ ಇದು ಸಾಧ್ಯವೇ?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಜನಸಂಖ್ಯೆಯಲ್ಲಿ ಮುಂದು, ಅಭಿವೃದ್ಧಿಯಲ್ಲಿ ಹಿಂದು

ಶಿಕ್ಷಣ ಮತ್ತು ಅಭಿವೃದ್ಧಿಗೆ ನಂಟು ಇರುತ್ತದೆ. ಶಿಕ್ಷಣದಿಂದ ಬಡತನ ನಿರ್ಮೂಲನ, ಆರೋಗ್ಯ ವೃದ್ಧಿ, ಬುದ್ಧಿಶಕ್ತಿ, ಮಾನಸಿಕ ಚಾತುರ್ಯದ ಬೆಳವಣಿಗೆ ಸಾಧ್ಯ. ಇವುಗಳ ಜೊತೆಗೆ ರಾಜ್ಯಗಳಲ್ಲಿ ಇಂಗ್ಲಿಷ್ ಶಿಕ್ಷಣ ಹೆಚ್ಚಿರುವುದು ಅಭಿವೃದ್ಧಿಗೆ ಹೆಚ್ಚು ಸಹಕಾರಿ. ಹೀಗಿರುವಾಗ, ಶಿಕ್ಷಣ ಕ್ಷೇತ್ರವೇ ಭ್ರಷ್ಟಾಚಾರದಲ್ಲಿ ಮುಳುಗಿದರೆ ದೇಶ ಅಭಿವೃದ್ಧಿಯಾಗುವುದೇ? ದೇಶದ ರಕ್ಷಣೆಗೆ ರಕ್ಷಣಾ ಪಡೆ, ಕಾನೂನು ಪರಿಪಾಲನೆಗೆ ಪೊಲೀಸ್ ಪಡೆ ಅವಶ್ಯವಾಗಿರುವಾಗ ಪೊಲೀಸ್ ಇಲಾಖೆಗೆ ನಿಯೋಜಿತರಾಗುವವರೇ ಭ್ರಷ್ಟಾಚಾರದಲ್ಲಿ ಮುಳುಗಿದರೆ ಆಂತರಿಕ ಶಾಂತಿ ಪರಿಪಾಲನೆ ಸಾಧ್ಯವೇ?

ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸದೆ, ರಾಜಕೀಯ ಪಕ್ಷಗಳು ವೈಯಕ್ತಿಕ ಕೆಸರೆರಚಾಟದಲ್ಲಿ ತೊಡಗುವುದು ಸರಿಯೇ? ಶಿಕ್ಷಣ ಮತ್ತು ರಕ್ಷಣೆಯ ವಿಷಯಗಳನ್ನು ಧರ್ಮಾತೀತವಾಗಿ, ಪಕ್ಷಾತೀತವಾಗಿ, ಜಾತ್ಯತೀತವಾಗಿ ನಿರ್ಧರಿಸಿ ದೇಶವನ್ನು ರಕ್ಷಿಸುವುದಲ್ಲದೆ, ಮುಂದಿನ ಪೀಳಿಗೆಯ ಶ್ರೇಯೋಭಿವೃದ್ಧಿಗಾಗಿ ಎಲ್ಲರೂ ಬದ್ಧರಾಗಬೇಕಲ್ಲವೇ? ಇಷ್ಟು ದೊಡ್ಡ ದೇಶದ ಭಾಗಶಃ ಜನರು ಮಾತ್ರ ಎಲ್ಲ ಕ್ಷೇತ್ರಗಳಲ್ಲಿ ಮುಂದುವರಿದಿರುವಾಗ, ಉಳಿದ ಕೆಳವರ್ಗದವರನ್ನೂ ವಂಚಿತರನ್ನೂ ಅನಕ್ಷರಸ್ಥರನ್ನೂ ಹಿಂದುಳಿದವರನ್ನೂ ಎಲ್ಲ ಕ್ಷೇತ್ರಗಳಲ್ಲಿ ಬೆಳೆಸಿದರೆ ವಿಶ್ವದಲ್ಲಿ ಮಾನ್ಯತೆ ಗಳಿಸಬಹುದಲ್ಲವೇ?

ಕೆ.ಎಸ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಲಾಂತರ್ಗಾಮಿ ಯೋಜನೆಗೆ ವಿಘ್ನ



2030ರ ವೇಳೆಗೆ 24 ಜಲಾಂತರ್ಗಾಮಿಗಳನ್ನು ಹೊಂದುವ ಭಾರತದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಾಜೆಕ್ಟ್–75ರ, ಎರಡನೇ ಹಂತವಾದ ಪ್ರಾಜೆಕ್ಟ್–75(ಐ)ಗೆ ಆರಂಭಕ್ಕೂ ಮುನ್ನವೇ ಹಲವು ವಿಘ್ನಗಳು ಎದುರಾಗಿವೆ. ಭಾರತೀಯ ನೌಕಾಪಡೆಗಾಗಿ ಆರು ಅತ್ಯಾಧುನಿಕ ಜಲಾಂತರ್ಗಾಮಿಗಳನ್ನು ಭಾರತದಲ್ಲೇ ನಿರ್ಮಿಸಿಕೊಡುವ ರಕ್ಷಣಾ ಸಹಭಾಗಿತ್ವ ಒಪ್ಪಂದವು ಅಂತಿಮವಾಗುವ ಮುನ್ನವೇ, ಫ್ರಾನ್ಸ್‌ನ ನೇವಲ್ ಗ್ರೂಪ್ ಕಂಪನಿ ಈ ಒಪ್ಪಂದದಿಂದ ಹಿಂದೆ ಸರಿದಿದೆ. ಯೂರೋಪ್ ಪ್ರವಾಸದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ಗೆ ಭೇಟಿ ನೀಡುವುದಕ್ಕೆ ಎರಡು ದಿನ ಮೊದಲು ನೇವಲ್ ಗ್ರೂಪ್ ಈ ನಿರ್ಧಾರ ತೆಗೆದುಕೊಂಡಿದೆ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಫ್ರಾನ್ಸ್, ಪ್ರಾಜೆಕ್ಟ್–75(ಐ) ಯೋಜನೆಯಿಂದ ಹಿಂದೆ ಸರಿದ ಏಕೈಕ ರಾಷ್ಟ್ರವಲ್ಲ. ರಷ್ಯಾ ಮತ್ತು ಜರ್ಮನಿ ಈ ಯೋಜನೆಯಿಂದ ಈಗಾಗಲೇ ಹಿಂದೆ ಸರಿದಿವೆ. ಈಗ ಫ್ರಾನ್ಸ್ ಸಹ ಈ ಸಾಲಿಗೆ ಸೇರಿದೆಯಷ್ಟೆ. ಈ ಯೋಜನೆಗೆ ಸಂಬಂಧಿಸಿದಂತೆ ರಕ್ಷಣಾ ಸಚಿವಾಲಯವು ನಿಗದಿ ಮಾಡಿರುವ 'ಕನಿಷ್ಠ ತಾಂತ್ರಿಕ ಅಗತ್ಯ' ಷರತ್ತುಗಳನ್ನು ಪೂರೈಸಲು ಸಾಧ್ಯವಿಲ್ಲದ ಕಾರಣ ಯೋಜನೆಯಿಂದ ಹಿಂದೆ ಸರಿಯುತ್ತಿರುವುದಾಗಿ ಈ ಮೂರೂ ದೇಶಗಳ ಕಂಪನಿಗಳು ಹೇಳಿವೆ. ಆ ತಾಂತ್ರಿಕ ಕಾರಣಗಳನ್ನು ವಿವರಿಸಿಲ್ಲ. ಆದರೆ, ಈ ತಾಂತ್ರಿಕ ಷರತ್ತುಗಳ ಬಗ್ಗೆ ತಜ್ಞರು ವಿಶ್ಲೇಷಣೆ ನಡೆಸಿದ್ದಾರೆ. ಈ ಕಂಪನಿಗಳು ಅನಧಿಕೃತವಾಗಿ ಈ ಬಗ್ಗೆ ತಮ್ಮ ಅಭಿಪ್ರಾಯ ಹಂಚಿಕೊಂಡಿವೆ.

ಪಿ–75(ಐ) ಯೋಜನೆಗೆ ಸಂಬಂಧಿಸಿದಂತೆ ರಕ್ಷಣಾ ಸಚಿವಾಲಯವು 2021ರ ಜುಲೈ 20ರಂದು ಪ್ರಸ್ತಾವನೆ ಸಲ್ಲಿಕೆಗೆ ಮನವಿಯನ್ನು (ರಿಕ್ವೆಸ್ಟ್ ಫಾರ್ ಪ್ರೊಪೋಸಲ್– ಆರ್‌ಎಫ್‌ಪಿ) ಹೊರಡಿಸಿತ್ತು. ಈ ಯೋಜನೆಯಲ್ಲಿ ವಿದೇಶಿ ಕಂಪನಿಗಳನ್ನು ರಕ್ಷಣಾ ಸಹಭಾಗಿದಾರ ಎಂದು ಪರಿಗಣಿಸಲಾಗುತ್ತದೆ. ಆರ್‌ಎಫ್‌ಪಿಯ ಭಾಗವಾಗಿ ರಷ್ಯಾ, ಜರ್ಮನಿ, ದಕ್ಷಿಣ ಕೊರಿಯಾ, ಸ್ಪೇನ್ ಮತ್ತು ಫ್ರಾನ್ಸ್‌ನ ಕಂಪನಿಗಳನ್ನು ರಕ್ಷಣಾ ಸಚಿವಾಲಯವು ಸಂಭಾವ್ಯ ರಕ್ಷಣಾ ಸಹಭಾಗೀದಾರರಾಗಿ ಪಟ್ಟಿ ಮಾಡಿತ್ತು. ಅಂತಿಮವಾಗಿ ಆಯ್ಕೆಯಾಗುವ ಕಂಪನಿಯು, ಭಾರತೀಯ ಕಂಪನಿಯ ಜತೆ, ಭಾರತದಲ್ಲೇ ಜಲಾಂತರ್ಗಾಮಿಗಳನ್ನು ನಿರ್ಮಿಸಬೇಕು ಎಂಬುದು ಮೊದಲ ಷರತ್ತು. ಈ ಷರತ್ತಿನ ಬಗ್ಗೆ ಯಾವುದೇ ಆಕ್ಷೇಪಗಳು ವ್ಯಕ್ತವಾಗಿಲ್ಲ.

ಈ ಯೋಜನೆ ಅಡಿ ನಿರ್ಮಿಸಲಾಗುವ ಪ್ರತಿ ಜಲಾಂತರ್ಗಾಮಿಯ ಒಟ್ಟು ವೆಚ್ಚದಲ್ಲಿ ಶೇ 40ರಿಂದ ಶೇ 60ರಷ್ಟು ಮೌಲ್ಯದ ಉಪಕರಣಗಳನ್ನು ದೇಶೀಯವಾಗಿ ಖರೀದಿಸಬೇಕು ಎಂದು ಮತ್ತೊಂದು ಷರತ್ತನ್ನು ಆರ್‌ಎಫ್‌ಪಿಯಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ ಜಲಾಂತರ್ಗಾಮಿಗಳ ನಿರ್ಮಾಣದಲ್ಲಿ ಬಳಸಲಾಗುವ ಬಹುತೇಕ ತಂತ್ರಜ್ಞಾನಗಳನ್ನು 'ತಂತ್ರಜ್ಞಾನ ವರ್ಗಾವಣೆ (ಟಿಒಟಿ)' ಪದ್ಧತಿ ಅಡಿ ಭಾರತಕ್ಕೆ ವರ್ಗಾಯಿಸಬೇಕು ಎಂದು ಇನ್ನೊಂದು ಷರತ್ತು ವಿಧಿಸಲಾಗಿದೆ. 'ಜಲಾಂತರ್ಗಾಮಿಗಳಿಗೆ ಅಗತ್ಯವಿರುವ ಉಪಕರಣಗಳು, ಬಿಡಿಭಾಗಗಳ ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆಗೆ ಅನುಕೂಲವಾಗುವಂತೆ ತಂತ್ರಜ್ಞಾನಗಳನ್ನು ವರ್ಗಾಯಿಸಬೇಕು. ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡುವುದು ಮತ್ತು ಆ ಮೂಲಕ ಆತ್ಮನಿರ್ಭರ ಭಾರತವನ್ನು ಸಾಧಿಸುವುದು ಈ ಷರತ್ತುಗಳ ಮುಖ್ಯ ಉದ್ದೇಶ' ಎಂದು ಆರ್‌ಎಫ್‌ಪಿಯಲ್ಲಿ ವಿವರಿಸಲಾಗಿದೆ.

ಈ ಎರಡೂ ಷರತ್ತುಗಳ ಬಗ್ಗೆ ವಿದೇಶಿ ಕಂಪನಿಗಳು ಆಕ್ಷೇಪ ವ್ಯಕ್ತಪಡಿಸಿವೆ ಎಂದು ಪಿಟಿಐ, ರಾಯಿಟರ್ಸ್ ಮತ್ತು ಎಎಫ್‌ಪಿ ಸುದ್ದಿಸಂಸ್ಥೆಗಳು ವರದಿ ಪ್ರಕಟಿಸಿವೆ. 'ಜಲಾಂತರ್ಗಾಮಿ ನಿರ್ಮಾಣದ ಒಟ್ಟು ವೆಚ್ಚದಲ್ಲಿ ಶೇ 40–60ರಷ್ಟು ಮೌಲ್ಯದ ಉಪಕರಣಗಳನ್ನು ಭಾರತದಲ್ಲೇ ಖರೀದಿಸಲು ವೆಚ್ಚ ಮಾಡಬೇಕು ಎಂಬ ಷರತ್ತನ್ನು ಪೂರೈಸಲು ಸಾಧ್ಯವಾಗುವುದಿಲ್ಲ ಎಂದು ಫ್ರಾನ್ಸ್‌ನ ನೇವಲ್ ಗ್ರೂಪ್‌ನ ಅಧಿಕಾರಿಗಳು ಹೇಳಿದ್ದಾರೆ' ಎಂದು ಈ ವರದಿಗಳಲ್ಲಿ ಉಲ್ಲೇಖಿಸಲಾಗಿದೆ.

ಪ್ರಮುಖ ದೇಶಗಳ ಜಲಾಂತರ್ಗಾಮಿಗಳು	ಚೀನಾ	ರಷ್ಯಾ	ಅಮೆರಿಕ	ಭಾರತ	ಪಾಕಿಸ್ತಾನ
	79	70	68	18	9

ಭಾರತದಲ್ಲಿವೆ 18 ಜಲಾಂತರ್ಗಾಮಿಗಳು

ಭಾರತ ಈಗ 18 ಜಲಾಂತರ್ಗಾಮಿಗಳನ್ನು ಹೊಂದಿದೆ. ಮೂರು ಶ್ರೇಣಿಯ ಜಲಾಂತರ್ಗಾಮಿಗಳಿವೆ. ಶಿಶುಮಾರ ಶ್ರೇಣಿಯ 4, ಸಿಂಧುಘೋಷ ಶ್ರೇಣಿಯ 8 ಹಾಗೂ ಕಲ್ವರಿ ಶ್ರೇಣಿಯ 4 ಜಲಾಂತರ್ಗಾಮಿಗಳು ನೌಕಾಪಡೆಯ ಸೇವೆಯಲ್ಲಿವೆ. ಐಎನ್‌ಎಸ್ ಅರಿಹಂತ್ ಹೆಸರಿನ ಎರಡು ಅಣುಶಕ್ತಿ ಚಾಲಿತ ಜಲಾಂತರ್ಗಾಮಿ ನೌಕೆಗಳಿವೆ. ಆದರೆ ಸರ್ಕಾರವು ಈ ನೌಕೆಗಳ ಮಾಹಿತಿಯನ್ನು ಅಧಿಕೃತವಾಗಿ ಪ್ರಕಟಿಸಿಲ್ಲ.

ಪ್ರಾಜೆಕ್ಟ್–75

1999ರ ಜೂನ್‌ನಲ್ಲಿ ಭದ್ರತೆ ಕುರಿತ ಕೇಂದ್ರ ಸಂಪುಟ ಸಮಿತಿಯು 30 ವರ್ಷಗಳಲ್ಲಿ 24 ಜಲಾಂತರ್ಗಾಮಿಗಳನ್ನು ನಿರ್ಮಿಸಲು ಒಪ್ಪಿಗೆ ನೀಡಿತ್ತು. ಇದರಲ್ಲಿ ಅಣುಶಕ್ತಿ ಚಾಲಿತ ಆರು ಜಲಾಂತರ್ಗಾಮಿಗಳೂ ಸೇರಿವೆ. ಎರಡು ಹಂತಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿತ್ತು. ಮೊದಲ ಹಂತದ ಯೋಜನೆಯೇ 'ಪ್ರಾಜೆಕ್ಟ್–75'. ಇದರ ಅಡಿಯಲ್ಲಿ ಡೀಸೆಲ್–ವಿದ್ಯುತ್ ಚಾಲಿತ, ಕಲ್ವರಿ ಶ್ರೇಣಿಯ ಅಡಿಯಲ್ಲಿ ಬರುವ ಸ್ಕಾರ್ಪೀನ್ ಸರಣಿಯ ಆರು ಜಲಾಂತರ್ಗಾಮಿಗಳನ್ನು ನಿರ್ಮಿಸಲಾಗಿದೆ. ಕಳೆದ ತಿಂಗಳಷ್ಟೇ, ಇದೇ ಸರಣಿಯ 6ನೇ ಹಾಗೂ ಕೊನೆಯ ಜಲಾಂತರ್ಗಾಮಿ 'ಐಎನ್‌ಎಸ್ ವಾಗ್ಶೀರ್' ಅನ್ನು ಮುಂಬೈನ ಮಡಗಾಂವ್ ಹಡಗುಕಟ್ಟೆಯಲ್ಲಿ ಉದ್ಘಾಟಿಸಲಾಗಿದೆ. ಫ್ರಾನ್ಸ್‌ನ ನೇವಲ್ ಗ್ರೂಪ್ ಸಹಭಾಗಿತ್ವದಲ್ಲಿ ಮಡಗಾಂವ್ ಡಾಕ್‌ನಲ್ಲಿ ಇವುಗಳನ್ನು ನಿರ್ಮಿಸಲಾಗಿದೆ.

ಸ್ಕಾರ್ಪೀನ್ ಸರಣಿಯ ಐಎನ್‌ಎಸ್ ಕಲ್ವರಿ, ಐಎನ್‌ಎಸ್ ಖಂಡೇರಿ, ಐಎನ್‌ಎಸ್ ಕಾರಂಜ್ ಹಾಗೂ ಐಎನ್‌ಎಸ್ ವೇಲಾ ಜಲಾಂತರ್ಗಾಮಿಗಳು ಈಗಾಗಲೇ ಸೇವೆಗೆ ನಿಯುಕ್ತಿಯಾಗಿವೆ. ಐದನೇ ನೌಕೆ ಐಎನ್‌ಎಸ್ ವಾಗಿರ್ ಜಲಾಂತರ್ಗಾಮಿಯು ಪರೀಕ್ಷಾ ಹಂತದಲ್ಲಿದೆ. ಕೊನೆಯ ನೌಕೆ ವಾಗ್ಶೀರ್ ಪರೀಕ್ಷಾ ಹಂತಗಳನ್ನು ಪೂರೈಸಿ 2023ರ ವೇಳೆಗೆ ಭಾರತೀಯ ನೌಕಾಪಡೆಯ ಸೇವೆಗೆ ಸಮರ್ಪಣೆಯಾಗಲಿದೆ.

ಇನ್ನಷ್ಟು ವಿಳಂಬ

ಪ್ರಾಜೆಕ್ಟ್–75ರ ಮುಂದುವರಿದ ಭಾಗವೇ ಪ್ರಾಜೆಕ್ಟ್–75 (ಐ). 2017ರಲ್ಲಿ ಈ ಯೋಜನೆಗೆ ಅನುಮೋದನೆ ನೀಡಲಾಗಿತ್ತು. ₹43,000 ಕೋಟಿ ವೆಚ್ಚದಲ್ಲಿ ಡೀಸೆಲ್–ವಿದ್ಯುತ್ ಚಾಲಿತ ಆರು ಜಲಾಂತರ್ಗಾಮಿಗಳನ್ನು ನಿರ್ಮಿಸುವುದು ಸರ್ಕಾರದ ಉದ್ದೇಶವಾಗಿತ್ತು. ಈ ಜಲಾಂತರ್ಗಾಮಿಗಳನ್ನು ನಿರ್ಮಿಸಲು ಭಾರತದಲ್ಲಿ ಮಡಗಾಂವ್ ಡಾಕ್ ಮತ್ತು ಲಾರ್ಸನ್ ಅಂಡ್ ಟುಬ್ರೊ ಕಂಪನಿಗಳನ್ನು 2019ರಲ್ಲಿ ಗುರುತಿಸಲಾಗಿತ್ತು. ವಿದೇಶದ ಐದು ಕಂಪನಿಗಳನ್ನು ಸಹಭಾಗಿ ಕಂಪನಿಗಳಾಗಿ ಸರ್ಕಾರ ಗುರುತಿಸಿತ್ತು. ಈ ಪಟ್ಟಿಯಲ್ಲಿ ರಷ್ಯಾ, ಫ್ರಾನ್ಸ್, ಸ್ಪೇನ್, ದಕ್ಷಿಣ ಕೊರಿಯಾ ಹಾಗೂ ಜರ್ಮನಿಯ ಒಂದೊಂದು ಕಂಪನಿಗಳು ಇದ್ದವು. ಬಿಡ್‌ನಲ್ಲಿ ಆಯ್ಕೆಯಾದ ಕಂಪನಿಯು ಭಾರತದ ಯಾವುದಾದರೂ ಒಂದು ಕಂಪನಿಯ ಜೊತೆಗೂಡಿ ಭಾರತದಲ್ಲಿ ಸ್ಥಳೀಯವಾಗಿ ಜಲಾಂತರ್ಗಾಮಿಗಳನ್ನು ನಿರ್ಮಿಸಬೇಕಿದೆ. 2027–32ರ ಅವಧಿಯಲ್ಲಿ ಆರು ಜಲಾಂತರ್ಗಾಮಿಗಳನ್ನು ಸೇವೆಗೆ ನಿಯೋಜಿಸುವ ಗುರಿ ಹಾಕಿಕೊಳ್ಳಲಾಗಿದೆ.

ಯೋಜನೆಯ ಭಾಗವಾಗಿ, ರಕ್ಷಣಾ ಸಚಿವಾಲಯವು 2021ರ ಜುಲೈನಲ್ಲಿ ಆರ್‌ಎಫ್‌ಪಿ ಹೊರಡಿಸಿತ್ತು. ಆದರೆ ಸರ್ಕಾರ ಪ್ರಸ್ತಾಪಿಸಿದ್ದ ಕೆಲವು ನಿಬಂಧನೆಗಳನ್ನು ಪೂರೈಸಲು ಆಗುವುದಿಲ್ಲ ಎಂಬ ಕಾರಣ ನೀಡಿ ರಷ್ಯಾ, ಜರ್ಮನಿ, ಫ್ರಾನ್ಸ್ ದೇಶಗಳು ಯೋಜನೆಯಿಂದ ಹಿಂದೆ ಸರಿದವು. ಹೀಗಾಗಿ ನವೆಂಬರ್‌ಗೆ ಕೊನೆಯಾಗಿದ್ದ ಬಿಡ್ ಅವಧಿಯನ್ನು ಸರ್ಕಾರವು 2022ರ ಜೂನ್‌ವರೆಗೆ ವಿಸ್ತರಿಸಿತು. ಒಂದು ವೇಳೆ ಜೂನ್‌ನಲ್ಲಿ ಬಿಡ್ ಸಲ್ಲಿಕೆಯಾದರೆ, ಅದನ್ನು ಪರಿಶೀಲನೆ ನಡೆಸಿ, ಸರ್ಕಾರ ಕಾರ್ಯಾದೇಶ ನೀಡಲು ಸುಮಾರು ಎರಡು ವರ್ಷ ಬೇಕು. ಒಂದೊಂದೇ ದೇಶಗಳು ಬಿಡ್‌ನಿಂದ ಹಿಂದೆ ಸರಿಯುತ್ತಿರುವ ಕಾರಣ, ಪ್ರಾಜೆಕ್ಟ್–75 (ಐ) ಇನ್ನಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ಪ್ರಾಜೆಕ್ಟ್–75 (ಐ) ಅಡಿಯಲ್ಲಿ ಎರಡು ಹಂತಗಳಿವೆ. ಮೊದಲ ಹಂತದಲ್ಲಿ 6, ಎರಡನೇ ಹಂತದಲ್ಲಿ 12 ನೌಕೆಗಳನ್ನು ತಯಾರಿಸುವ ಉದ್ದೇಶವಿದೆ. ಸರ್ಕಾರ ಅಂದುಕೊಂಡಂತೆ 2030ರ ವೇಳೆಗೆ ಒಟ್ಟು 24 ಜಲಾಂತರ್ಗಾಮಿಗಳನ್ನು ನಿರ್ಮಿಸುವುದು ಕಷ್ಟಸಾಧ್ಯ ಎನ್ನುತ್ತಾರೆ ಪರಿಣತರು. 1999ರಲ್ಲಿ ಆರಂಭವಾದ ಯೋಜನೆಯಲ್ಲಿ 2022ರ ವೇಳೆಗೆ 6 ಜಲಾಂತರ್ಗಾಮಿಗಳನ್ನು ನಿರ್ಮಿಸಲು ಸಾಧ್ಯವಾಗಿದೆ. ಈ ಆರರಲ್ಲಿ ನಾಲ್ಕು ಜಲಾಂತರ್ಗಾಮಿಗಳು ಸೇವೆಯಲ್ಲಿದ್ದರೆ, ಇನ್ನೆರಡು ಪರೀಕ್ಷಾ ಹಂತದಲ್ಲಿವೆ. ಯೋಜನೆ ಪ್ರಕಾರ, ಉಳಿದಿರುವ 8 ವರ್ಷಗಳಲ್ಲಿ 18 ಜಲಾಂತರ್ಗಾಮಿಗಳನ್ನು ನಿರ್ಮಿಸುವ ಸವಾಲು ಸರ್ಕಾರದ ಮುಂದಿದೆ. ಬಿಡ್ ಸಲ್ಲಿಸುವವರು ಸರ್ಕಾರದ ಹೊಸ ನಿಬಂಧನೆಗಳಿಂದ ಹಿಂದೆ ಸರಿಯುತ್ತಿರುವ ಕಾರಣ, ಯೋಜನೆಯ ಗುರಿ ಸಾಧನೆ ಮತ್ತಷ್ಟು ಕಠಿಣವಾಗಲಿದೆ ಎನ್ನುತ್ತದೆ ಉದ್ಯಮ ವಲಯ.

ಎಐಪಿ ತೊಡಕು

ಈ ಯೋಜನೆ ಅಡಿ ನಿರ್ಮಿಸುವ ಪ್ರತಿ ಜಲಾಂತರ್ಗಾಮಿಯೂ 'ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್' (ಎಐಪಿ) ವ್ಯವಸ್ಥೆ ಹೊಂದಿರಬೇಕು ಎಂದು ಆರ್‌ಎಫ್‌ಪಿಯಲ್ಲಿ ಷರತ್ತು ವಿಧಿಸಲಾಗಿದೆ. ಈ ಷರತ್ತಿನಿಂದಲೇ ವಿದೇಶಿ ಕಂಪನಿಗಳು ಯೋಜನೆಯಲ್ಲಿ ರಕ್ಷಣಾ ಸಹಭಾಗೀದಾರ ಆಗುವುದರಿಂದ ಹಿಂದೆ ಸರಿಯುತ್ತಿವೆ ಎಂದು ವಿಶ್ಲೇಷಿಸಲಾಗಿದೆ.

ಡೀಸೆಲ್ ಎಂಜಿನ್‌ನಿಂದ ವಿದ್ಯುತ್ ಉತ್ಪಾದಿಸಿ, ಆ ವಿದ್ಯುತ್‌ನ ಮೂಲಕ ಚಲಿಸುವ ಜಲಾಂತರ್ಗಾಮಿಗಳನ್ನು ಸಾಂಪ್ರದಾಯಿಕ ಜಲಾಂತರ್ಗಾಮಿಗಳು ಎಂದು ಕರೆಯಲಾಗುತ್ತದೆ. ಡೀಸೆಲ್ ತುಂಬಿಸಿಕೊಳ್ಳಲು ಮತ್ತು ಎಂಜಿನ್ ಕಾರ್ಯನಿರ್ವಹಿಸಲು ಅಗತ್ಯವಿರುವ ಗಾಳಿಯನ್ನು ಹೀರಿಕೊಳ್ಳಲು ಈ ಜಲಾಂತರ್ಗಾಮಿಗಳು ಪದೇ ಪದೇ ನೀರಿನಿಂದ ಮೇಲೆ ಬರಬೇಕಾಗುತ್ತದೆ. ನೀರಿನಡಿಯಲ್ಲೇ ಇವು ದೀರ್ಘಕಾಲದವರೆಗೆ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಈ ಸಮಸ್ಯೆಗೆ, ಅಣುಶಕ್ತಿ ವಿದ್ಯುತ್ ಆಧರಿತ ಜಲಾಂತರ್ಗಾಮಿಗಳ ಮೂಲಕ ಪರಿಹಾರ ಕಂಡುಕೊಳ್ಳಲಾಯಿತು. ಆದರೆ ಸಾಂಪ್ರದಾಯಿಕ ಜಲಾಂತರ್ಗಾಮಿಗಳಿಗೆ ಹೋಲಿಸಿದರೆ, ಅಣುಶಕ್ತಿ ಆಧರಿತ ಜಲಾಂತರ್ಗಾಮಿಗಳು ತೀರಾ ದುಬಾರಿ. ಹೀಗಾಗಿ ಸಾಂಪ್ರದಾಯಿಕ ಜಲಾಂತರ್ಗಾಮಿಗಳನ್ನೇ ಮತ್ತಷ್ಟು ಸುಧಾರಿಸುವ ಉದ್ದೇಶದಿಂದ ಎಐಪಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಯಿತು. ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್ ಎಂದರೆ, ಗಾಳಿಯ ಅಗತ್ಯವಿಲ್ಲದ ಎಂಜಿನ್ ವ್ಯವಸ್ಥೆ ಎಂದರ್ಥ. ಗಾಳಿಯ ಅಗತ್ಯವಿಲ್ಲದೇ ಜಲಾಂತರ್ಗಾಮಿಯ ಒಳಗೇ ವಿದ್ಯುತ್ ಅನ್ನು ಉತ್ಪಾದಿಸುವ ವ್ಯವಸ್ಥೆ. ಇದಕ್ಕಾಗಿ ಇಂಧನ ಸೆಲ್ (ಫ್ಯುಯಲ್ ಸೆಲ್) ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತದೆ. ಜಲಾಂತರ್ಗಾಮಿಯು ನೀರಿನಡಿಯಲ್ಲಿ ಇರುವಾಗಲೇ ಇಂಧನ ಸೆಲ್‌ಗಳ ಮೂಲಕ ವಿದ್ಯುತ್ ಉತ್ಪಾದಿಸಿ, ಅದನ್ನು ಚಲಾಯಿಸಲಾಗುತ್ತದೆ. ಡೀಸೆಲ್ ಮುಗಿದರೂ, ಡೀಸೆಲ್ ಜನರೇಟರ್‌ಗಳಿಗೆ ಅಗತ್ಯವಿರುವ ಗಾಳಿ ಮುಗಿದರೂ ಅಥವಾ ಗಾಳಿ ಎಳೆದುಕೊಳ್ಳಲು ನೀರಿನಿಂದ ಮೇಲೆ ಬರಲು ಸಾಧ್ಯವಿಲ್ಲದೇ ಇರುವಾಗ ಇಂಧನ ಸೆಲ್ ಬಳಸಿಕೊಂಡು ವಿದ್ಯುತ್ ಉತ್ಪಾದಿಸಬಹುದು. ಈ ವ್ಯವಸ್ಥೆ ಇದ್ದರೆ ದೀರ್ಘಾವಧಿಯ ವರೆಗೆ ಮತ್ತು ದೀರ್ಘಪಯಣ ದಲ್ಲಿ ಜಲಾಂತರ್ಗಾಮಿ ನೀರಿನಿಂದ ಮೇಲಕ್ಕೆ ಬರುವ ಅನಿವಾರ್ಯ ಉಂಟಾಗುವುದಿಲ್ಲ.

ಆದರೆ ಈ ವ್ಯವಸ್ಥೆಯನ್ನು ಜಲಾಂತರ್ಗಾಮಿಯಲ್ಲಿ ಅಳವಡಿಸುವುದು ಸುಲಭವಲ್ಲ. ಜಲಂತರ್ಗಾಮಿಯ ಒಳಗೆ ಲಭ್ಯವಿರುವ ಸೀಮಿತ ಜಾಗದಲ್ಲಿ, ಡೀಸೆಲ್ ವಿದ್ಯುತ್ ಜನರೇಟರ್ ವ್ಯವಸ್ಥೆಯ ಜತೆಯಲ್ಲೇ ಎಐಪಿ ವ್ಯವಸ್ಥೆಯನ್ನೂ ಅಳವಡಿಸುವುದು ಕಷ್ಟಸಾಧ್ಯವಾದ ಕೆಲಸ. ಜಲಾಂತರ್ಗಾಮಿಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಿದ ಮೊದಲ ದೇಶ ದಕ್ಷಿಣ ಕೊರಿಯಾ. ಸ್ಪೇನ್ ಮತ್ತು ಜರ್ಮನಿ ಸಹ ಇಂತಹ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿವೆ. ಇನ್ನೂ ಆರಂಭಿಕ ಹಂತದಲ್ಲಿ ಇರುವ ಈ ವ್ಯವಸ್ಥೆಯನ್ನು ನೀಡಲೇಬೇಕು ಎಂದು ಆರ್‌ಎಫ್‌ಪಿಯಲ್ಲಿ ಷರತ್ತು ವಿಧಿಸಿದ್ದರಿಂದ ರಷ್ಯಾ, ಜರ್ಮನಿ ಮತ್ತು ಫ್ರಾನ್ಸ್ ಒಪ್ಪಂದದಿಂದ ಹಿಂದೆ ಸರಿದಿವೆ. ಸ್ಪೇನ್ ಮತ್ತು ದಕ್ಷಿಣ ಕೊರಿಯಾ ಇನ್ನಷ್ಟೇ ಪ್ರತಿಕ್ರಿಯೆ ನೀಡಬೇಕಿದೆ.

ಪಿ–75(ಐ) ಯೋಜನೆ ಹಲವು ವರ್ಷಗಳಷ್ಟು ವಿಳಂಬವಾಗಿದೆ. ಒಪ್ಪಂದವೇ ಇನ್ನೂ ಅಂತಿಮವಾಗಿಲ್ಲ. 2024ರ ಅಂತ್ಯದ ವೇಳೆಗೆ ಒಪ್ಪಂದವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಒಪ್ಪಂದ ಅಂತಿಮವಾದ ನಂತರ ಮೊದಲ ಜಲಾಂತರ್ಗಾಮಿಯನ್ನು 8 ವರ್ಷಗಳಲ್ಲಿ ನೀಡಬೇಕು ಎಂದು ಷರತ್ತು ವಿಧಿಸಲಾಗಿದೆ. ಆದರೆ, ಈ ತಂತ್ರಜ್ಞಾನವನ್ನು ಚೀನಾ ಸಹ ಹೊಂದಿದೆ. ಪಾಕಿಸ್ತಾನಕ್ಕಾಗಿ ಇಂತಹ ನಾಲ್ಕು ಜಲಾಂತರ್ಗಾಮಿಗಳನ್ನು ನಿರ್ಮಿಸಿಕೊಡಲು ಚೀನಾ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ.

ಆಧಾರ: ರಕ್ಷಣಾ ಸಚಿವಾಲಯದ ಆರ್‌ಎಫ್‌ಪಿ ಪ್ರಕಟಣೆ, ಗ್ಲೋಬಲ್ ಫೈರ್ ಇಂಡೆಕ್ಸ್, ಪಿಐಬಿ, ರಾಯಿಟರ್ಸ್, ಪಿಟಿಐ, ಎಎಫ್‌ಪಿ,



ಕಣ್ಣು ಸುಟ್ಟುಕೊಂಡ ಕುಬೇರ

ಸೃಷ್ಟಿಖಂಡದ ಹತ್ತೊಂಬತ್ತನೇ ಅಧ್ಯಾಯದಲ್ಲಿ, ಗುಣನಿಧಿಯು ಕುಬೇರನಾದ ಕಥಾವೃತ್ತಾಂತವನ್ನು ನಾರದನಿಗೆ ಬ್ರಹ್ಮ ಹೇಳುತ್ತಾನೆ.

'ಹಿಂದೆ ಪಾದ್ಮಕಲ್ಪದಲ್ಲಿ ನನ್ನ ಮಾನಸಪುತ್ರನಾದ ಪುಲಸ್ತ್ಯನಿಗೆ ವಿಶ್ರವಸ್ಸ ಎಂಬ ಸುತನು ಜನಿಸಿದ. ಆ ವಿಶ್ರವಸ್ಸನಿಗೆ ವೈಶ್ರವಣನೆಂಬ ಮಗನು ಹುಟ್ಟಿದ. ಅವನು ತ್ರಿಲೋಚನನಾದ ಶಿವನನ್ನು ಅತಿ ಘೋರವಾದ ತಪಸ್ಸಿನಿಂದ ಮೆಚ್ಚಿಸಿ, ವಿಶ್ವಕರ್ಮನಿಂದ ನಿರ್ಮಿತವಾದ ಅಲಕಾ ನಗರಿಯನ್ನು ವೈಶ್ರವಣನು ಉಪಭೋಗಿಸುತ್ತ ಬಂದ. ಪಾದ್ಮಕಲ್ಪವು ಕಳೆದು, ಮೇಘವಾಹನ ಕಲ್ಪವು ಆದಮೇಲೆ, ಯಜ್ಞದತ್ತನ ಮಗನಾಗಿದ್ದ ಈ ಶ್ರೀದ (ಕುಬೇರ) ಎಂಬುವನು ಸಹಿಸಲು ಅಸಾಧ್ಯವಾದ ದೊಡ್ಡ ತಪಸ್ಸನ್ನು ಮಾಡಿದ. ಗುಣನಿಧಿಯಾಗಿದ್ದ ಜನ್ಮದಲ್ಲಿ ತಾನಿಟ್ಟ ದೀಪವೊಂದರಿಂದ ಇಷ್ಟು ಅತುಲೈಶ್ವರ್ಯವು ಲಭಿಸಿತು. ಇದಕ್ಕೆ ಶಿವನಲ್ಲಿ ಉಂಟಾದ ಭಕ್ತಿಯ ಪ್ರಭಾವವೇ ಕಾರಣ ಎಂದು ಅರಿತು ಬಹುದೊಡ್ಡ ತಪಸ್ಸಿಗೆ ಉಪಕ್ರಮಿಸಿದ್ದ.

ವೈಶ್ರವಣನು ಶಿವನ ವಾಸಸ್ಥಾನವೂ, ಶುದ್ಧ ಜ್ಞಾನವನ್ನು ಬೆಳಗಿಸುವುದೂ ಆದ ಕಾಶೀಕ್ಷೇತ್ರವನ್ನು ಸೇರಿದ. ಅಲ್ಲಿ ತನ್ನ ಮನಸ್ಸೆಂಬ ರತ್ನ ಖಚಿತವಾದ ಪಾತ್ರೆಯಲ್ಲಿ ಶಿವನೆಂಬ ಬತ್ತಿಯನ್ನು ಮೀಟಿ, ಅನನ್ಯವಾದ ಭಕ್ತಿಯೆಂಬ ಎಣ್ಣೆಯನ್ನು ತುಂಬಿ, ಶಿವತಾದಾತ್ಮ್ಯವೆಂಬ ಪಾತ್ರೆಯೂ, ತಪಸ್ಸೆಂಬ ದೀಪಶಿಖೆಯೂ ಉಳ್ಳ ಮತ್ತು ಕಾಮ-ಕ್ರೋಧ ಮೊದಲಾದ ಮಹಾವಿಘ್ನಗಳೆಂಬ ಪತಂಗಗಳ ಹೊಡೆತವಿಲ್ಲದ, ಗಾಳಿ ಅಲುಗಾಡದಿರುವಂಥ ವಾತಾವರಣ ಮಾಡಿ, ಶುದ್ಧವಾದ ದೀಪ ಬೆಳಗಿದ. ಸದ್ಭಾವನೆ ಎಂಬ ಹೂಗಳಿಂದ ಪೂಜಿಸಲ್ಪಟ್ಟ ಜ್ಯೋತಿರ್ಮಯವಾದ ಶಂಭುಲಿಂಗವನ್ನು ಸ್ಥಾಪಿಸಿದ. ಶಿವಧ್ಯಾನದಿಂದ ನಿಶ್ಚಲನೂ ತನ್ಮಯನೂ ಆಗಿ, ಮೈಯಲ್ಲಿ ರಕ್ತಮಾಂಸಗಳು ಒಣಗಿಹೋಗಿ ಎಲುಬು ಚರ್ಮಗಳು ಮಾತ್ರ ಉಳಿಯುವಷ್ಟರ ಮಟ್ಟಿಗೆ ಹತ್ತುಲಕ್ಷ ವರ್ಷಗಳ ಕಾಲ ದೀರ್ಘವಾದ ತಪಸ್ಸನ್ನಾಚರಿಸಿದ.

'ಅನಂತರ ಶಿವಲಿಂಗದಲ್ಲಿ ಏಕಾಗ್ರತೆಯಿಂದ ಮನಸ್ಸನ್ನಿಟ್ಟು, ಸ್ಥಾಣು (ಈಶ್ವರ, ಗಿಡ್ಡಾದ ಮರ)ವಾಗಿಯೇ ಬಿಟ್ಟಿರುವ ಆ ಅಲಕಾಧಿಪತಿಯಾದ ಕುಬೇರನನ್ನು ನೋಡಿ, ಪ್ರಸನ್ನ ಹೃದಯವುಳ್ಳವನಾದ ಸಾಕ್ಷಾತ್ ವಿಶ್ವೇಶ್ವರನೇ ತನ್ನ ಮಡದಿಯಾದ ವಿಶಾಲಕ್ಷಿಯೊಡನೆ ಬಂದು 'ಎಲೈ, ಅಲಕೇಶ್ವರನೇ. ನಿನ್ನ ತಪಸ್ಸಿಗೆ ಮೆಚ್ಚಿ ವರವನ್ನೀಯಲು ಬಂದಿರುವೆ. ಬೇಕಾದ ವರವನ್ನು ಕೇಳು' ಎಂದ.

'ತಪೋನಿರತನಾದ ವೈಶ್ರವಣನು ಕಣ್ಣುಗಳನ್ನು ತೆರೆದು ನೋಡಿದಾಗ ಏಕಕಾಲದಲ್ಲಿ ಸಹಸ್ರ ಸೂರ್ಯರು ಉದಯಿಸಿದರೆ ಉಂಟಾಗುವುದಕ್ಕಿಂತಲೂ ಹೆಚ್ಚಾದ ತೇಜಸ್ಸಿನಿಂದ ಬೆಳಗುತ್ತ ನಿಂತಿದ್ದ ಪಾರ್ವತೀಕಾಂತನ ಕಣ್ಣು ಕೋರೈಸುವಂತಹ ತೇಜಸ್ಸನ್ನು ನೋಡಲಾರದೆ, ಕಣ್ಣುಗಳನ್ನು ಮುಚ್ಚಿಕೊಂಡ. ಕಣ್ಣು ಮುಚ್ಚಿಕೊಂಡೇ, ಮನೋರಥಗಳ ಎಲ್ಲೆಯನ್ನೂ ಮೀರಿದ ದೇವದೇವನಾದ ಆ ಶಿವನನ್ನು ಕುರಿತು ಹೀಗೆಂದ:

'ಈ ಕಣ್ಣುಗಳಿಗೆ ನಿನ್ನ ಪಾದಕಮಲಗಳನ್ನು ನೋಡುವಷ್ಟು ಶಕ್ತಿಯನ್ನು ಅನುಗ್ರಹಿಸು ಪ್ರಭೂ! ನೀನು ನನ್ನೆದುರು ನಿಂತು ನನ್ನ ಕಣ್ಣುಗಳಿಂದ ಪ್ರತ್ಯಕ್ಷವಾಗಿ ನೋಡುವಂತಾದುದೇ ದೊಡ್ಡ ವರ. ಇದಕ್ಕಿಂತ ಬೇರೆ ವರವಿನ್ನೇನುಬೇಕು? ಓ ಶಶಾಂಕಮೌಲಿ, ಇಗೋ ನಿನಗೆ ನಮಸ್ಕಾರ'.

ಹೀಗೆ ವೈಶ್ರವಣ ಹೇಳುತ್ತಿರುವ ಮಾತನ್ನು ಕೇಳಿ, ದೇವದೇವನಾದ ಆ ಉಮಾಪತಿಯು ಮತ್ತಷ್ಟು ಪ್ರಸನ್ನನಾದ. ವೈಶ್ರವಣನನ್ನು ಕೈಯಿಂದ ಮುಟ್ಟಿ, ತನ್ನನ್ನು ನೋಡುವಂಥ ಶಕ್ತಿಯನ್ನಿತ್ತ. ಬಳಿಕ ಆಗ ಕುಬೇರನಿಗೆ ಶಿವನ ದರ್ಶನ ಸಾಮರ್ಥ್ಯ ದೊರೆಯಿತು. ಶಿವನ ಅನುಗ್ರಹದಿಂದ ಕುಬೇರ ತನ್ನ ಕಣ್ಣುಗಳನ್ನು ತೆರೆದಾಗ ಅವನಿಗೆ ಮೊದಲು ಕಂಡಿದ್ದು ಪಾರ್ವತಿಮಾತೆ. 'ಶಿವನ ಬಳಿಯಲ್ಲಿರುವ ಸರ್ವಾಂಗಸುಂದರಿಯಾದ ಈ ಹೆಂಗಸು ಯಾರು? ಶಿವನ ಸಮೀಪದಲ್ಲಿರಬೇಕಾದರೆ ನಾನು ಮಾಡಿದ ತಪಸ್ಸಿಗಿಂತಲೂ ಹೆಚ್ಚಾಗಿ ಈಕೆ ಇನ್ನೆಂತಹ ತಪಸ್ಸನ್ನು ಮಾಡಿರಬೇಕು? ಅಬ್ಬಾ, ಎಂತಹ ಅದ್ಭುತವಾದ ರೂಪ! ಎಂತಹ ಸೌಭಾಗ್ಯ!' ಎಂದು ಬಡಬಡಿಸಿದ.

ಶಿವನಿಗೆ ಮಗನಂತೆ ಪ್ರೇಮಾಸ್ಪದನಾದ ಕುಬೇರನು ಮತ್ತೆ ಮತ್ತೆ ಪಾರ್ವತಿಯ ಸೌಂದರ್ಯವನ್ನೂ ಸೌಭಾಗ್ಯವನ್ನೂ ಹೊಗಳುತ್ತಿದ್ದ. ಶಿವನ ಪಕ್ಕ ಇರುವ ಪಾರ್ವತಿಯನ್ನು ಮತ್ತೆ ಮತ್ತೆ ಹೊಗಳುತ್ತಾ ಬೆರುಗಣ್ಣಿನಿಂದ ಒಂದೇ ಸಮನೆ ನೋಡಿದ. ಹೀಗೆ ಪಾರ್ವತಿಯನ್ನು ನೆಟ್ಟ ನೋಟದಿಂದ ನೋಡಿದ್ದರಿಂದ ಕುಬೇರನ ಎಡಗಣ್ಣು ಸುಟ್ಟುಹೋಯಿತು. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಲಂಡನ್ ಸೇತುವೆ** ಬಳಿ ಭಾರತೀಯರ ಗುಂಪೊಂದು ಹನುಮಾನ್ ಚಾಲೀಸಾ ಪಠಣ ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಮಹಾರಾಷ್ಟ್ರದಲ್ಲಿ ಈಗ ನಡೆಯುತ್ತಿರುವ ಧ್ವನಿವರ್ಧಕ ವಿವಾದದ ಜೊತೆ ಈ ವಿಡಿಯೊವನ್ನು ತಳಕು ಹಾಕಲಾಗಿದೆ. ಲಂಡನ್‌ನಲ್ಲಿ ಹನುಮಾನ್ ಚಾಲೀಸಾ ಪಠಣ ಮಾಡಲಾಗಿದೆ. ಲಂಡನ್ ಮೇಯರ್ ಪಾಕಿಸ್ತಾನದ ಮೂಲದವರಾದರೂ ಹಿಂದೂಗಳು ಹನುಮಾನ್ ಚಾಲೀಸಾ ಪಠಣ ಮಾಡುವುದನ್ನು ತಡೆದಿಲ್ಲ ಎಂಬ ವಿವರಣೆಯನ್ನು ವಿಡಿಯೊ ಜೊತೆ ನೀಡಲಾಗಿದೆ.



✓ **ಇದು ಇತ್ತೀಚಿನ** ವಿಡಿಯೊವಲ್ಲ ಎಂದು 'ದಿ ಕ್ವಿಂಟ್' ವರದಿ ಮಾಡಿದೆ. 'ಇಂಟರ್‌ನ್ಯಾಷನಲ್ ಸಿದ್ಧಾಶ್ರಮ ಶಕ್ತಿ ಸೆಂಟರ್' ಎಂಬ ಧಾರ್ಮಿಕ ಸಂಸ್ಥೆ 2021ರ ಆಗಸ್ಟ್ 30ರಂದು ಲಂಡನ್ ಸೇತುವೆ ಬಳಿ ಕೃಷ್ಣ ಜನ್ಮಾಷ್ಟಮಿ ಆಚರಿಸಿತ್ತು. ಆ ವೇಳೆ ಭಾರತೀಯರು ಹನುಮಾನ್ ಚಾಲೀಸಾ ಪಠಣ ಮಾಡಿದ್ದರು ಮತ್ತು ಅಭಿಷೇಕವನ್ನು ನೆರವೇರಿಸಿದ್ದರು. ಕಾರ್ಯಕ್ರಮ ಆಯೋಜಿಸಿದ್ದ ಧಾರ್ಮಿಕ ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಈ ಕಾರ್ಯಕ್ರಮ ಕುರಿತ ಮಾಹಿತಿಯು ಪ್ರಕಟವಾಗಿದೆ ಎಂದು ದಿ ಕ್ವಿಂಟ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಆತ್ಮ ಋಣ

ಹತ್ಯೆಯೋ ಹನ್ಯತೆಯೊ ವಿಜಯವೊ ಪರಿಭವವೊ |
ಕ್ಷತ್ರಿಯಂ ಸ್ವಾರ್ಥಮಂ ಗಣಿಸುವನೆ ರಣದೊಳ್ ? ||
ಕೃತ್ಯನಿರ್ಣಯ ಬಾಹ್ಯಲಾಭನಷ್ಟದಿನಲ್ಲ |
ಆತ್ಮ ಋಣವದು ಜಗಕೆ – ಮಂಕುತಿಮ್ಮ || 624 ||

ಪದ-ಅರ್ಥ: ಹತ್ಯೆಯೋ = ಕೊಲೆಯೋ, ಹನ್ಯತೆಯೋ = ಕೊಲೆಯಾಗುವುದೊ, ಪರಿಭವವೊ = ಸೋಲೋ, ಕ್ಷತ್ರಿಯಂ = ಸೈನಿಕ, ಸ್ವಾರ್ಥಮಂ = ಸ್ವಾರ್ಥವನ್ನು, ಕೃತ್ಯನಿರ್ಣಯ = ಕಾರ್ಯದ ತೀರ್ಮಾನ, ಬಾಹ್ಯಲಾಭನಷ್ಟದಿನಲ್ಲ = ಬಾಹ್ಯ + ಲಾಭ + ನಷ್ಟದಿನಲ್ಲ (ನಷ್ಟದಿಂದಲ್ಲ)

ವಾಚ್ಯಾರ್ಥ: ಕೊಲ್ಲುವುದೊ, ಕೊಲ್ಲಿಸಿಕೊಳ್ಳುವುದೊ, ವಿಜಯವೊ, ಸೋಲೋ, ಏನಾದರಾಗಲಿ, ಯುದ್ಧಭೂಮಿಯಲ್ಲಿ ಕ್ಷತ್ರಿಯ ಸ್ವಾರ್ಥವನ್ನು ಕಾಣುತ್ತಾನೆಯೇ? ಅಲ್ಲಿ ಮಾಡಬೇಕಾದ + ಕಾರ್ಯಕ್ಕೆ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಲಾಭ ನಷ್ಟದ ಯೋಚನೆಯಿಂದಲ್ಲ, ಅದು ಆತ ಜಗತ್ತಿಗೆ ಸಲ್ಲಿಸಬೇಕಾದ ಆತ್ಮ ಋಣ.

ವಿವರಣೆ: ಜೊನಾಸ್‌ನ ತಂದೆ-ತಾಯಂದಿರು ಲಂಡನ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಪಕ್ಕದ ಮನೆಯಲ್ಲಿ ಜೊನಾಸ್‌ನ ವಾರಿಗೆಯ ಹುಡುಗ ಪೌಲ. ಇಬ್ಬರೂ ಹುಡುಗರು ಜೊತೆಯಾಗಿಯೇ ಶಾಲೆಗೆ ಹೋದರು. ಅವರ ಸ್ನೇಹ ಉಳಿದವರಿಗೆ ಮಾದರಿ ಯಾಗಿತ್ತು. ಅವರನ್ನು ಎಲ್ಲರೂ ಸಹೋದರರರೆಂದೇ ತಿಳಿದಿದ್ದರು. 1930ಕ್ಕೆ ಜೊನಾಸ್‌ನ ತಂದೆ ಜರ್ಮನಿಯ ಬರ್ಲಿನ್‌ಗೆ ಮರಳಿದರು. ಜೊನಾಸ್ ಅಲ್ಲಿಯೇ ಕಾಲೇಜು ಸೇರಿದ. ನಂತರ ಆತನಿಗೆ ಅತ್ಯಂತ ಪ್ರಿಯವಾದ ಮಿಲಿಟರಿ ಸೇರಿ 1939ಕ್ಕೆ ಆತ ಮೇಜರ್ ಆಗಿ ಒಂದು ತುಕಡಿಯ ನಾಯಕನಾದ. ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಜೊನಾಸ್‌ನನ್ನು ಇಂಗ್ಲೆಂಡಿನ ಗಡಿಗೆ ಕಳುಹಿಸಲಾಯಿತು. ಯುದ್ಧ ಘನಘೋರವಾಗಿತ್ತು. ಅಂದು ರಾತ್ರಿ ಬೆಳದಿಂಗಳಿದೆ. ಜೊನಾಸ್‌ನ ತಂಡ ಇದ್ದದ್ದು ಕಣಿವೆಯಲ್ಲಿ. ಅದನ್ನು ಏರಿದರೆ ವೈರಿಗಳ ಪಾಳೆಯ. ಅದನ್ನು ಧ್ವಂಸ ಮಾಡಿದರೆ ವಿಜಯ ಖಂಡಿತ. ಜೊನಾಸ್ ಮೇಲೇರುತ್ತಿದ್ದಂತೆ, ಮೇಲೆ ಯಾರೋ ಸುಳಿದಾಡಿದಂತಾಯ್ತು. ಒಬ್ಬ ಬ್ರಿಟಿಶ್ ಸೈನಿಕ ಬರುತ್ತಿದ್ದಾನೆ. ಅವನು ತೀರ ಹತ್ತಿರ ಬರುವವರೆಗೆ ಜೊನಾಸ್ ಕಾಯ್ದ. ಮುಂದೆ ಬ್ರಿಟಿಶ್ ಸೈನಿಕ ಸರಿದಾಗ ಒಂದೇ ಕ್ಷಣ ಬೆಳದಿಂಗಳು ಅವನ ಮುಖದ ಮೇಲೆ ಹೊಳೆಯಿತು. ಹೌದು ಅವನೇ ಪೌಲ. ತನ್ನ ಆತ್ಮೀಯ ಗೆಳೆಯ. ಈಗ ಏನು ಮಾಡುವುದು? ಒಂದು ಕ್ಷಣ ತಡೆದರೆ ತನ್ನ ತಂಡ ನಿರ್ನಾಮವಾಗುತ್ತದೆ. ಜೊನಾಸ್ ಮನಸ್ಸು ಕಲ್ಲು ಮಾಡಿಕೊಂಡ. ಅರೆ ಕ್ಷಣದಲ್ಲಿ ಮೇಲೆ ಹಾರಿ ಬ್ರಿಟಿಶ್ ಸೈನಿಕನ, ತನ್ನ ಪ್ರಾಣ ಸ್ನೇಹಿತನ ಕತ್ತನ್ನು ಕತ್ತರಿಸಿಬಿಟ್ಟ!

ಜೊನಾಸ್‌ನ ಮನಸ್ಸಿನಲ್ಲಿ ಒಂದು ಕ್ಷಣದ ದ್ವಂದ್ವ. ಒಂದೆಡೆಗೆ ಆತ್ಮೀಯ ಸ್ನೇಹಿತ, ಮತ್ತೊಂದೆಡೆಗೆ ತನ್ನ ದೇಶದ ಗೌರವ. ಸೈನಿಕನಿಗೆ ದೇಶದ ಗೌರವ ದೊಡ್ಡದಾಯಿತೇ ವಿನಃ ಸ್ನೇಹಿತನ ಪ್ರೇಮ ಸೆಳೆಯಲಿಲ್ಲ.

ಯುದ್ಧಭೂಮಿಯಲ್ಲಿ ಸೈನಿಕನ ಕರ್ತವ್ಯ, ತನ್ನ ದೇಶದ ಘನತೆಗೆ, ರಕ್ಷಣೆಗೆ ಹೋರಾಡುವುದು. ಜೊನಾಸ್ ಒಂದು ನಿಮಿಷ ತಡ ಮಾಡಿದ್ದರೆ ಅವನ ಪ್ರಾಣವೇ ಹೋಗಬಹುದಿತ್ತು. ಯುದ್ಧದಲ್ಲಿ ಸೈನಿಕನಿಗೆ ಎರಡೇ ಆಯ್ಕೆಗಳು ಕೊಲ್ಲುವುದು ಇಲ್ಲವೇ ಕೊಲ್ಲಲ್ಪಡುವುದು. ಯುದ್ಧದ ಪರಿಣಾಮ ವಿಜಯವೋ, ಸೋಲೋ ಎಂಬುದನ್ನು ಸೈನಿಕನು ಚಿಂತಿಸಲಾರ. ಆ ಗಳಿಗೆಗೆ ಯಾವ ನಿರ್ಣಯ ತೆಗೆದುಕೊಂಡರೂ ಅದು ದೇಶಕ್ಕಾಗಿ. ಅಲ್ಲಿ ಲಾಭ-ನಷ್ಟದ ಯಾವ ಯೋಚನೆಯೂ ಇಲ್ಲ. ಸ್ವಾರ್ಥದ ವಿಚಾರ ಅಲ್ಲಿ ಸುಳಿಯುವುದೂ ಸಾಧ್ಯವಿಲ್ಲ.

ಮನುಷ್ಯ ಬದುಕಿನಲ್ಲಿ ತ್ಯಾಗ ಮಾಡಬಹುದು. ಅವನು ಮಾಡಬಹುದಾದ ಅತ್ಯಂತ ಹಿರಿದಾದ ತ್ಯಾಗವೆಂದರೆ ಪ್ರಾಣತ್ಯಾಗ. ಇದಕ್ಕಿಂತ ದೊಡ್ಡ ತ್ಯಾಗವಿಲ್ಲ. ಸೈನಿಕ ತನ್ನ ಜೀವವನ್ನೇ ಪಣವಾಗಿಟ್ಟು ಜಗತ್ತಿಗೆ ತನ್ನ ಆತ್ಮ ಋಣವನ್ನು ತೀರಿಸುತ್ತಾನೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮೇ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ನವಮಿ ಗಂ. 19-25 ನಕ್ಷತ್ರ: ಮಘಾ ಗಂ. 18-40 ಯೋಗ: ಧ್ರುವ ಗಂ. 20-21, ಕರಣ: ಬಾಲವ ಗಂ. 07-04, ಮೇಷ ಮಾಸದ 26 ನೇ ದಿನ. ರಾಹುಕಾಲ : ಮಧ್ಯಾಹ್ನ 03:00 – 04:30
ಸೂರ್ಯೋದಯ : 06-09 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 08 ಶವ್ವಾಲ್
ದಿನ ವಿಶೇಷ : ಸೀತಾ ನವಮಿ, ತ್ರಿಚೂರ್ ಪೂರಮ್ (ಕೇರಳ)
ಅದೃಷ್ಟ ಸಂಖ್ಯೆ : 1, 8

ಮೇಷ: ನಿಮ್ಮ ವರಮಾನದಲ್ಲಿ ಈ ದಿನ ಯಾವುದೇ ರೀತಿಯ ಕೊರತೆ ಇರುವುದಿಲ್ಲ. ವೃತ್ತಿಯಲ್ಲಿ ಸಾಕಷ್ಟು ಪೈಪೋಟಿ ಎದುರಿಸಬೇಕಾಗಬಹುದು. ಆದರೆ ಶ್ರದ್ಧಾಪೂರ್ವಕವಾಗಿ ಸ್ವಲ್ಪ ಶ್ರಮಪಟ್ಟರೆ ಜಯಗಳಿಸಬಹುದು.

ವೃಷಭ: ರಾಜಕೀಯ ರಂಗದವರಿಗೆ ವರಿಷ್ಠರೊಂದಿಗಿನ ಮಾತುಕತೆ ಅನುಕೂಲ ಉಂಟುಮಾಡಲಿದೆ. ಹಿರಿಯರ ಆರೋಗ್ಯದ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ. ಖಾದ್ಯತೈಲಗಳ ಮಾರಾಟ ಉತ್ತಮವಾಗಿದ್ದು ಲಾಭಾಂಶ ಹೆಚ್ಚುವುದು.

ಮಿಥುನ: ಬಟ್ಟೆ ವ್ಯಾಪಾರ ನಡೆಸುವವರು ಉದ್ಯೋಗದಲ್ಲಿ ಬಂಡವಾಳ ಹೂಡುವಂತಹ ಕೆಲಸವನ್ನು ಈ ದಿನ ಮಾಡುವುದು ಸಮಂಜಸವಲ್ಲ. ಮುಖ್ಯವಾದ ಕೆಲಸವೊಂದು ದಿನದ ಅಂತ್ಯದ ವೇಳೆಗೆ ನೆರವೇರುವುದು.

ಕರ್ಕಾಟಕ: ತಾಯಿಯ ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು. ಮಗನಿಗೆ ಹೆಚ್ಚಿನ ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಕುಟುಂಬ ಸಂತಸದಲ್ಲಿರುವುದು. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನ ಹೆಚ್ಚಿಸಿಕೊಳ್ಳಬಹುದು.

ಸಿಂಹ: ದೈವಾನುಗ್ರಹದಿಂದ ಸಾಹಸಕಾರ್ಯಗಳು ಕೈಗೂಡಿ ಬಹುಮಟ್ಟಿಗೆ ನಿರೀಕ್ಷಿತ ಫಲ ಲಭಿಸಲಿದೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸುವಿರಿ. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳು ಹೆಚ್ಚಿನ ಪ್ರಗತಿ ಕಾಣುವರು.

ಕನ್ಯಾ: ಪ್ರಾಚಾರ್ಯರು ಮತ್ತು ಸಲಹೆಗಾರರಿಗೆ ಹೆಚ್ಚಿನ ಅವಕಾಶ. ಸಹೋದರನ ವ್ಯಾಪಾರ ವಹಿವಾಟುಗಳ ವಿಚಾರಗಳಿಗೆ ಸಹಕಾರವಾಗುವಂತಹ ಸಲಹೆಗಳನ್ನು ತಿಳಿ ಹೇಳಬಹುದು. ನವ ದಂಪತಿಗಳಿಗೆ ಸಂತಾನದ ಶುಭಸಮಾಚಾರ.

ತುಲಾ: ಬಂಧುಮಿತ್ರರ ಸಲಹೆಗಳಿಗೆ ಗಮನ ನೀಡಿ. ಇದರಿಂದಾಗಿ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲಿದ್ದೀರಿ. ಯಾವುದೇ ಸಂದರ್ಭದಲ್ಲೂ ಒತ್ತಡಕ್ಕೆ ಸಿಲುಕದೆ ಕಾರ್ಯನಿರ್ವಹಿಸುವ ನೀವು ಎಲ್ಲರಿಂದಲೂ ಗುರುತಿಸಲ್ಪಡುವಿರಿ.

ವೃಶ್ಚಿಕ: ನಿಮ್ಮ ಕೋಪ ಮತ್ತು ದಡ್ಡತನದ ತೀರ್ಮಾನದಿಂದ ಪಶ್ಚಾತಾಪ ಪಡುವಂತಹ ಘಟನೆ ನಡೆಯುವುದು. ಬಹುದಿನಗಳಿಂದ ನಿರೀಕ್ಷಿಸಿದ ಪುತ್ರನ ಉದ್ಯೋಗವು ಹತ್ತಿರದಲ್ಲಿ ಮತ್ತು ಗುಣಮಟ್ಟದ ಕೆಲಸ ಪ್ರಾಪ್ತಿಯಾಗುವುದು.

ಧನು: ಅಕ್ಕಪಕ್ಕದವರಲ್ಲಿ ಸಂಬಂಧಪಡದ ವಿಚಾರಕ್ಕೆ ಸಲಹೆ ಹೇಳಿದರೆ ನಿಷ್ಠೂರವಾಗುವುದು ಖಚಿತ. ಹಿರಿಯರನ್ನು ನೋಡಿಕೊಳ್ಳುವ ನಿಮ್ಮ ಕರ್ತವ್ಯಗಳಿಂದ ತಪ್ಪಿಸಿಕೊಳ್ಳಬೇಡಿ. ಚಾಣಾಕ್ಷತನದಿಂದ ಪ್ರತಿಸ್ಪರ್ಧಿಗಳು ದೂರಾಗುವರು.

ಮಕರ: ಕೈಗೊಂಡ ಕೆಲಸಗಳ ಬಗೆಗೆ ಮುತುವರ್ಜಿ ವಹಿಸುವುದರಿಂದ ನಿಮ್ಮ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕೆಲಸ ಪೂರ್ಣಗೊಳ್ಳುವುದು. ಪ್ರಮುಖ ವಿಚಾರದಲ್ಲಿ ಮುಂದಿನ ಹೆಜ್ಜೆಯಿಡಲು ಸೂಕ್ತ ಸಮಯವಲ್ಲ.

ಕುಂಭ: ಬಹುದಿನದಿಂದ ಮುಂದೂಡಲ್ಪಟ್ಟಿದ್ದ ದೂರದ ಪ್ರಯಾಣ ಅನಿವಾರ್ಯತೆಯ ಸನ್ನಿವೇಶದಿಂದ ಕೈಗೊಳ್ಳಬೇಕಾಗುತ್ತದೆ. ಸಂಸಾರದ ಘನತೆ ಹೆಚ್ಚಿಸುವುದಕ್ಕಾಗಿ ನಿಮಗೆ ಹೆಂಡತಿ ಮಕ್ಕಳು ನೆರವಾಗುವರು.


ಮೀನ: ಪ್ರೇಮಿಗಳ ಪಾಲಿಗೆ ಈ ದಿನ ಅತ್ಯುತ್ತಮವಾಗಿರುವುದು. ನಿಮ್ಮ ಸಕಾರಾತ್ಮಕ ಕನಸುಗಳಿಗೆ ಪುನಃ ಜೀವ ಬರಲಿದೆ. ಜಗದ್ಗುರುವಿನ ಸೇವೆಯಿಂದ ಪುಣ್ಯ ಪ್ರಾಪ್ತಿಯಾಗುವುದರ ಜೊತೆಗೆ ಶುಭ ದೊರಕುವುದು.

ಪದಬಂಧ 4953

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪರಿವರ್ತನೆಯ ಯುಗ (4)
3.ಗೋವಿನ ಬಳಿ ಹೋದವನ ಕೈಯಲ್ಲಿರುವ ಕೊಳಲು (4)
5.ಲಕ ಲಕ ಹೊಳೆಯುತ್ತಿರುವ ಕುಂಕುಮ (3)
7.ಪತ್ರ ಬರೆದಿರುವ ಸ್ನೇಹಿತ (2)
9.ಈತ ಕಾಡಿನ ರಕ್ಷಕ (5)
11.ಒಂದು ಸ್ಥಳದ ಬಗ್ಗೆ ಹೇಳುವ ಸಾಂಪ್ರದಾಯಿಕ ಕಥೆ (5)
13.ತರಾತುರಿಯಿಂದ ಖರೀದಿಸಿರುವ ನೀರಾವರಿ ಭೂಮಿ (2)
16.ನಾಯಕನ ಹತ್ತಿರವಿರುವ ಹಾಡುಗಾರ (3)
18.ಸಮ್ಮುಖ ಅಥವಾ ಎದುರು! (4)
19.ಸರಿ ರಾತ್ರಿಯಲ್ಲಿ ಕಾಣಿಸಿದ ಸಮುದ್ರ! (4)

ಮೇಲಿಂದ ಕೆಳಕ್ಕೆ
1.ಗಿಡಮರಗಳೇನೂ ಬೆಳೆಯದ ಬಂಜರು ಭೂಮಿ (4)
2. ಮನ್ಮಥನ ಪತ್ನಿ (2)
3.ಕಪಿಯನ್ನು ನೋಡುತ್ತಿರುವ ಗಿಳಿ (2)
4.ವಿಧ್ವಂಸವನ್ನು ತಡೆಗಟ್ಟುತ್ತಿರುವ ಪಂಡಿತ (3)
6.ಬೆಳ್ಳುಳ್ಳಿ ಇಲ್ಲಿದೆ (3)
8.ನ್ಯಾಯ ತೀರ್ಮಾನ ಮಾಡುವವನು (3)
10.ತಡಿಕೆಯಲ್ಲಿ ಮಲಗಿದಾಗ ಉಂಟಾದ ನವೆ (3)
12.ಕರ್ಣನ ಇನ್ನೊಂದು ಹೆಸರು (3)
14.ರೀತಿ ನಿಯಮದಂತೆ ಸಿಕ್ಕಿರುವ ಸೋಡಿ (4)
15.ಪ್ರವಾಸದಲ್ಲಿ ಆಗಿರುವ ಸುಸ್ತು (3)
16.ಗಾಂಪನ ಬಾಯಲ್ಲಿ ಹೇಳಿಸಿದ ಹಾಡು (2)
17.ಸರೀಕನ ಮನೆಯಲ್ಲಿರುವ ಗಲೀಜು (2)



4952ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದೂಷಕ 3.ವನಸ್ಪತಿ 5.ದಹನ 7.ನಗು 9.ಮಂಠಕ 11.ಲಾಕ್ಷಣಿಕ 12.ಪರಪಂಚ 13.ನಾರಿ 14.ನೆಪ 16.ಅರಸ 18.ಕರೆಯೋಲೆ 19.ವಿದ್ಯಮಾನ
ಮೇಲಿಂದ ಕೆಳಕ್ಕೆ: 1.ವಿಧಾನ 2.ಕದ 3.ವನ 4.ತಿರುಕ 6.ಹವ್ಯಕ 8.ಗುಲಾಮಗಿರಿ 9.ಮಂತ್ರಾಲೋಚನೆ 12.ಪದರ 13.ನಾಸಿಕ 15.ಪವನ 16.ಅಲೆ 17.ಸವಿ

ಸುಡೊಕು 5339


8				1			6	
				5		7		3
					3		2	
	4	2		9		8	3	
3			8	4	1			2
1	9			2				7
	8						7	
2		4	9		7	1	5	6
	5			3			8	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5338 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಷೇರುಪೇಟೆ ವಹಿವಾಟು 365



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,411
ಇಂದಿನ ಅಂತ್ಯ	16,302
▼	109
ದಿನದ ಕನಿಷ್ಠ	16,142

ವಿನಿಮಯ ದರ

$ ಡಾಲರ್	77.44
£ ಪೌಂಡ್	95.4
€ ಯುರೊ	81.55
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹380
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹383

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1565 (1570)
ಸೂರ್ಯಕಾಂತಿ (ರಿಫೈನ್ಡ್)	₹1870 (1870)
ಪಾಮೋಲಿನ್	₹1567 (1555)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹277-500
ದ್ವಿತಳಿ (ಬಿ.ವಿ)	₹205-689

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162
ಗುಡ್ ಲಾಟ್	₹158

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹700-900
ಸಣ್ಣ	₹400-600

ದಾಖಲೆಯ ಮಟ್ಟಕ್ಕೆ ಕುಸಿದ ರೂಪಾಯಿ ಮೌಲ್ಯ

ಒಂದನೇ ಪುಟದಿಂದ...

'ಕಚ್ಚಾ ತೈಲ ದರ ಹೆಚ್ಚಾಗಿರುವುದು, ದೇಶದಲ್ಲಿ ಹಣದುಬ್ಬರ ದರವು ಆರ್‌ಬಿಐ ನಿಗದಿ ಮಾಡಿರುವ ಗರಿಷ್ಠ ಮಿತಿಯನ್ನು ಕೂಡ ಮೀರಿರುವುದು ವಿದೇಶಿ ಹೂಡಿಕೆದಾರರು ದೇಶದ ಬಂಡವಾಳ ಮಾರುಕಟ್ಟೆಗಳಿಂದ ಇನ್ನಷ್ಟು ಹಣ ಹಿಂಪಡೆಯುವಂತೆ ಮಾಡಬಹುದು. ಆರ್‌ಬಿಐ ಹಣಕಾಸು ನೀತಿ ಸಮಿತಿಯು ರೂಪಾಯಿ ಬಲ ವರ್ಧನೆಗೆ ಹೆಚ್ಚೇನೂ ಮಾಡಿಲ್ಲ. ರೂಪಾಯಿ ಮೌಲ್ಯವು ಮುಂದಿನ ದಿನಗಳಲ್ಲಿ 77.80ಕ್ಕೆ ಇಳಿಕೆಯಾಗುವ ಸಾಧ್ಯತೆ ಇದೆ' ಎಂದು ಆನಂದ್ ರಾಠಿ ಬ್ರೋಕರೇಜ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ರಾಯ್ ವರ್ಗೀಸ್ ಜೋಸೆಫ್ ಹೇಳಿದ್ದಾರೆ.

ಹಣದುಬ್ಬರ ಜಾಸ್ತಿ ಆಗಿರುವುದರಿಂದ ಮತ್ತು ಕೇಂದ್ರೀಯ ಬ್ಯಾಂಕ್‌ಗಳು ಹಣದ ಹರಿವು ತಗ್ಗಿಸಲು ಯತ್ನಿಸುತ್ತಿರುವ ಕಾರಣದಿಂದ ರೂಪಾಯಿ ಮೌಲ್ಯದ ಮೇಲೆ ಇನ್ನಷ್ಟು ಒತ್ತಡ ಸೃಷ್ಟಿಯಾಗಬಹುದು ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಜತೀನ್ ತ್ರಿವೇದಿ ಹೇಳಿದ್ದಾರೆ.

ಸೋಮವಾರದ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಒಟ್ಟು ₹ 3,361 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಎಚ್‌ಡಿಎಫ್‌ಸಿ, ವೈಶ್ಯ ಬ್ಯಾಂಕ್‌ನಿಂದ ಬಡ್ಡಿದರ ಹೆಚ್ಚಳ

ನವದೆಹಲಿ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ ಮತ್ತು ಕರೂರ್ ವೈಶ್ಯ ಬ್ಯಾಂಕ್ ಸಾಲದ ಮೇಲಿನ ಬಡ್ಡಿದರ ಹೆಚ್ಚಳ ಮಾಡಿವೆ. ಕರೂರ್ ವೈಶ್ಯ ಬ್ಯಾಂಕ್ ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ದರವನ್ನು ಶೇಕಡ 7.15ರಿಂದ ಶೇ 7.45ಕ್ಕೆ ಏರಿಕೆ ಮಾಡಿದೆ.

ಬ್ಯಾಂಕ್ ಆಫ್ ಮಹಾರಾಷ್ಟ್ರ ಎಂಸಿಎಲ್‌ಆರ್ ಅನ್ನು ಶೇಕಡ 0.15ರಷ್ಟು ಹೆಚ್ಚಿಸಿದೆ. ಇದರಿಂದ ಗ್ರಾಹಕರಿಗೆ ನೀಡಿಕೆ ದರವು ಶೇ 7.40ಕ್ಕೆ ಏರಿಕೆ ಆಗಿದೆ. ರೆಪೊ ದರ ಆಧರಿಸಿದ ಸಾಲಗಳ ಬಡ್ಡಿದರವನ್ನು ಸಹ ಶೇ 6.80ರಿಂದ ಶೇ 7.20ಕ್ಕೆ ಏರಿಕೆ ಮಾಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ. ಮೇ 7ರಿಂದಲೇ ಈ ದರಗಳು ಅನ್ವಯಿಸಲಿವೆ ಎಂದು ಹೇಳಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಎಂಸಿಎಲ್‌ಆರ್ ಅನ್ನು ಶೇ 0.25ರಷ್ಟು ಹೆಚ್ಚಿಸಿದೆ. ಇದು ಮೇ 7ರಿಂದಲೇ ಜಾರಿಗೆ ಬಂದಿದೆ. ಒಂದು ವರ್ಷದ ಅವಧಿಯ ಎಂಸಿಎಲ್‌ಆರ್ ದರವು ಶೇ 7.50ಗೆ ಏರಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

9-5-2022

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1552 (1550)
ಪಾಮ್ ವಾರದ ಡೆಲಿವರಿ	1565 (1553)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,200 (51,450)
ಬೆಳ್ಳಿ ಕೆ.ಜಿ 61,400 (62,400)

ಆವರಣದಲ್ಲಿ ಶನಿವಾರದ ಧಾರಣೆ

ಮಾರುಕಟ್ಟೆ ಮೇಲೆ ಪರಿಣಾಮ ಬೀರಿದ ರೂಪಾಯಿ ಮೌಲ್ಯ

ಮಾರಾಟದ ಒತ್ತಡ: ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸೋಮವಾರ ಮಾರಾಟದ ತೀವ್ರ ಒತ್ತಡ ಕಂಡು ಬಂದು ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಮೌಲ್ಯ ಇಳಿಕೆ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿನ ನಕಾರಾತ್ಮಕ ವಹಿವಾಟಿನ ಪರಿಣಾಮವಾಗಿ ದೇಶಿ ಮಾರುಕಟ್ಟೆಗಳಲ್ಲಿಯೂ ವಹಿವಾಟು ಇಳಿಕೆ ಕಂಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 365 ಅಂಶ ಇಳಿಕೆ ಕಂಡು 54,470 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ದಿನದ ವಹಿವಾಟಿನ ಒಂದು ಹಂತದಲ್ಲಿ ಸೆನ್ಸೆಕ್ಸ್ 900 ಅಂಶಗಳಿಗೂ ಹೆಚ್ಚು ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 109 ಅಂಶ ಇಳಿಕೆಯಾಗಿ 16,302 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರಿಲಯನ್ಸ್ ಇಂಡಸ್ಟ್ರೀಸ್‌ನ ನಾಲ್ಕನೇ ತ್ರೈಮಾಸಿಕದ ಆರ್ಥಿಕ ಸಾಧನೆಯು ಹೂಡಿಕೆದಾರರನ್ನು ಉತ್ತೇಜಿಸುವಲ್ಲಿ ವಿಫಲವಾಗಿದೆ. ಈ ಕಾರಣಕ್ಕೆ ಕಂಪನಿಯ ಷೇರು ಮೌಲ್ಯ ಶೇ 3.97ರಷ್ಟು ಇಳಿಕೆ ಕಂಡಿತು.

'ರೂಪಾಯಿ ಮೌಲ್ಯ ಕುಸಿತ, ಜಾಗತಿಕ ಮಟ್ಟದಲ್ಲಿ ಬಡ್ಡಿದರ ಹೆಚ್ಚಳ ಹಾಗೂ ಚೀನಾದಲ್ಲಿ ಲಾಕ್‌ಡೌನ್ ನಿಯಮಗಳನ್ನು ಬಿಗಿಗೊಳಿಸಿರುವ ಕಾರಣಗಳಿಂದಾಗಿ ದೇಶಿ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಂಡಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 1.17ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 111 ಡಾಲರ್‌ಗಳಿಗೆ ತಲುಪಿತು.

ಮೈಂಡ್‌ಟ್ರೀ ಷೇರು ಮೌಲ್ಯ ಇಳಿಕೆ: ಮೈಂಡ್‌ಟ್ರೀ ಮತ್ತು ಎಲ್ ಆ್ಯಂಡ್ ಟಿ ಇನ್ಫೊಟೆಕ್ ಕಂಪನಿಗಳ ವಿಲೀನದ ಸುದ್ದಿ ಹೊರಬಿದ್ದ ನಂತರ ಎರಡೂ ಕಂಪನಿಗಳ ಷೇರು ಮೌಲ್ಯ ಇಳಿಕೆ ಕಂಡಿದೆ. ಬಿಎಸ್‌ಇನಲ್ಲಿ ಮೈಂಡ್‌ಟ್ರೀ ಷೇರು ಮೌಲ್ಯ ಶೇ 5.30ರಷ್ಟು ಇಳಿಕೆ ಕಂಡು ಪ್ರತಿ ಷೇರಿನ ಬೆಲೆ ₹3,195.65ಕ್ಕೆ ತಲುಪಿತು. ಎಲ್ ಆ್ಯಂಡ್ ಟಿ ಇನ್ಫೊಟೆಕ್ ಷೇರು ಮೌಲ್ಯ ಶೇ 3.13ರಷ್ಟು ಇಳಿಕೆ ಆಗಿ ಪ್ರತಿ ಷೇರಿನ ಬೆಲೆ ₹ 4,449.45ಕ್ಕೆ ತಲುಪಿತು.


ಎಲ್‌ಐಸಿ: ಮೇ 12ಕ್ಕೆ ಷೇರು ಹಂಚಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳಿಗೆ ಬಿಡ್ ಸಲ್ಲಿಸಿದವರ ಖಾತೆಗೆ ಷೇರುಗಳು ಮೇ 12ರಂದು ಜಮಾ ಆಗಲಿವೆ. ಎಲ್‌ಐಸಿ ಷೇರುಗಳು ಮೇ 17ರಿಂದ ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಲಿವೆ ಎಂದು ಸಾರ್ವಜನಿಕ ಹೂಡಿಕೆ ಮತ್ತು ಆಸ್ತಿ ನಿರ್ವಹಣಾ ಖಾತೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ತಿಳಿಸಿದ್ದಾರೆ.

ಎಲ್‌ಐಸಿ ಐಪಿಒ ಬಿಡ್ ಸಲ್ಲಿಸುವ ಅವಧಿ ಪೂರ್ಣಗೊಂಡ ನಂತರದಲ್ಲಿ ಅವರು ಸುದ್ದಿಗಾರರ ಜೊತೆ ಮಾತನಾಡಿದರು. 'ನಾವು ವಿದೇಶಿ ಹೂಡಿಕೆದಾರರ ಮೇಲೆ ಮಾತ್ರವೇ ಅವಲಂಬಿತರಾಗಿಲ್ಲ. ದೇಶಿ ಹೂಡಿಕೆದಾರರಿಂದ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದಿದ್ದಾರೆ.

ಎಲ್‌ಐಸಿ ಐಪಿಒ ಪ್ರಕ್ರಿಯೆಯಲ್ಲಿ ಲಭ್ಯವಿದ್ದ ಷೇರುಗಳಿಗೆ ಸರಿಸುಮಾರು ಮೂರು ಪಟ್ಟು ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದು, ₹ 21 ಸಾವಿರ ಕೋಟಿ ಬಂಡವಾಳ ಸಂಗ್ರಹ ಆಗಿದೆ. ಇದರಿಂದಾಗಿ, ಐಪಿಒ ಮೂಲಕ ಅತಿ ಹೆಚ್ಚು ಬಂಡವಾಳ ಸಂಗ್ರಹಿಸಿದ ದೇಶದ ಮೊದಲ ಕಂಪನಿ ಆಗಿ ಎಲ್‌ಐಸಿ ಹೊರಹೊಮ್ಮಿದೆ.

ಐಪಿಒ: ಕಂಪನಿಗಳ ಬಂಡವಾಳ ಸಂಗ್ರಹ



ಷೇರುಪೇಟೆಯಲ್ಲಿ ಸೋಮವಾರ ಸಂಜೆ 7 ಗಂಟೆಯವರೆಗಿನ ಮಾಹಿತಿಯ ಪ್ರಕಾರ, ಲಭ್ಯವಿದ್ದ 16.20 ಕೋಟಿ ಷೇರುಗಳಿಗೆ ಪ್ರತಿಯಾಗಿ 47.83 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆಯಾಗಿದೆ. ರಿಟೇಲ್ ಹೂಡಿಕೆದಾರರಿಗೆ 6.9 ಕೋಟಿ ಷೇರುಗಳನ್ನು ಮೀಸಲಿಡಲಾಗಿತ್ತು. 13.77 ಕೋಟಿ ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ.

ಅರ್ಹ ಸಾಂಸ್ಥಿಕ ಹೂಡಿಕೆದಾರರ (ಕ್ಯುಐಬಿ) ವಿಭಾಗದಲ್ಲಿ 2.83ಪಟ್ಟು ಹೆಚ್ಚು ಅರ್ಜಿ ಸಲ್ಲಿಕೆ ಆಗಿದೆ. 3.95 ಕೋಟಿ ಷೇರುಗಳಿಗೆ ಬಿಡ್ ಕರೆಯಲಾಗಿತ್ತು. 11.20 ಕೋಟಿ ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ.

ಸಾಂಸ್ಥಿಕೇತರ ಹೂಡಿಕೆದಾರರ ವಿಭಾಗವು 2.91 ಪಟ್ಟು ಹೆಚ್ಚು ಅರ್ಜಿ ಸ್ವೀಕರಿಸಿದೆ. ಪಾಲಿಸಿದಾರರ ವಿಭಾಗವು 6 ಪಟ್ಟು ಮತ್ತು ಸಿಬ್ಬಂದಿ ವಿಭಾಗವು 4.4 ಪಟ್ಟು ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿದೆ.

ಸಂಕ್ಷಿಪ್ತ ಸುದ್ದಿ

ಉಕ್ಕಿನ ಬೆಲೆ ಇಳಿಕೆ ಸಾಧ್ಯತೆ

ಮುಂಬೈ (ಪಿಟಿಐ): ಎರಡು ವರ್ಷಗಳಿಂದ ಏರುತ್ತಿರುವ ಉಕ್ಕಿನ ಬೆಲೆಯು ಇಳಿಕೆ ಆಗುವ ನಿರೀಕ್ಷೆ ಇದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಉಕ್ಕಿನ ಬೆಲೆಯು ಟನ್‌ಗೆ ₹ 60 ಸಾವಿರಕ್ಕೆ ಇಳಿಕೆಯಾಗುವ ನಿರೀಕ್ಷೆ ಇದೆ ಎಂದು ಕ್ರಿಸಿಲ್ ವರದಿ ಹೇಳಿದೆ.

ಹಿಂದಿನ ತಿಂಗಳು ಉಕ್ಕಿನ ಬೆಲೆಯು ಟನ್‌ಗೆ ₹ 76 ಸಾವಿರಕ್ಕೆ ತಲುಪಿತ್ತು. ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಗಳು, ರಷ್ಯಾ–ಉಕ್ರೇನ್ ಯುದ್ಧದಿಂದಾಗಿ ಸೃಷ್ಟಿಯಾದ ಜಾಗತಿಕ ಬಿಕ್ಕಟ್ಟಿನ ಕಾರಣದಿಂದಾಗಿ ಕಚ್ಚಾ ವಸ್ತುಗಳ ಬೆಲೆ ಹೆಚ್ಚಾಗಿದ್ದು, ಉಕ್ಕಿನ ಬೆಲೆ ಕೂಡ ತುಟ್ಟಿಯಾಗಿದೆ ಎಂದು ವರದಿ ಹೇಳಿದೆ. ಮುಂಗಾರು ಆರಂಭವಾದ ನಂತರದಲ್ಲಿ ನಿರ್ಮಾಣ ಚಟುವಟಿಕೆಗಳು ತಾತ್ಕಾಲಿಕವಾಗಿ ಸ್ಥಗಿತವಾಗುತ್ತವೆ. ಈ ಕಾರಣದಿಂದಾಗಿಯೂ ಬೆಲೆ ಇಳಿಕೆ ಆಗಬಹುದು ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಹೂಡಿಕೆ ಮಾಡದ್ದರಿಂದ ಇಂಧನ ಬೆಲೆ ಹೆಚ್ಚಳ'

ರಿಯಾದ್ (ರಾಯಿಟರ್ಸ್): ಕಚ್ಚಾ ತೈಲ ಸಂಸ್ಕರಣೆಯ ಸಾಮರ್ಥ್ಯ ಹೆಚ್ಚಿಸಲು ಹೂಡಿಕೆ ಮಾಡದ ಕಾರಣದಿಂದಾಗಿ ಕಚ್ಚಾ ತೈಲ ಹಾಗೂ ವಿಮಾನ ಇಂಧನ, ಡೀಸೆಲ್ ಬೆಲೆಗಳ ನಡುವೆ ಬಹಳ ವ್ಯತ್ಯಾಸ ಇದೆ ಎಂದು ಸೌದಿ ಅರೇಬಿಯಾದ ಇಂಧನ ಸಚಿವ ರಾಜಕುಮಾರ ಅಬ್ದುಲ್‌ಅಜೀಜ್ ಬಿನ್ ಸಲ್ಮಾನ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ		ಹೊಸಚಾಲಿ	35019-39300	ಕೋಕ	16689-30100
ಸಕಲೇಶಪುರ		**ಪುತ್ತೂರು**		ಕೆಂಪುಗೋಟು	26199-32899
ಕೂಳೆ	430-450	ಹೊಸತು	27500-45000	ರಾಶಿ	47199-50019
ನಡುಗೋಲು	500-550	**ಸಾಗರ**		ತಟ್ಟಿಬೆಟ್ಟೆ	37869-42399
ರಾಶಿ	600-650	ಬಿಳಿಗೋಟು	23899-30199	**ಶಿರಸಿ**	
ರಾಶಿ ಉತ್ತಮ	650-700	ಕೋಕ	25299-35299	ಬೆಟ್ಟೆ	35099-45999
ಜರಡಿ	750-800	ಚಾಲಿ	27599-38969	ಬಿಳಿಗೋಟು	20009-32009
ಹೆರಕಿದ್ದು	1100-1150	ಕೆಂಪುಗೋಟು	24219-40899	ಚಾಲಿ	37119-40499
ಹಸಿರು ಸಾಧಾರಣ	600-700	ರಾಶಿ	33919-50409	ರಾಶಿ	46499-49299
ಹಸಿರು ಉತ್ತಮ	900-950	ಸಿಪ್ಪೆಗೋಟು	789-21399	**ಯಲ್ಲಾಪುರ**	
ಹಸಿರು ಅತಿ ಉತ್ತಮ	1200-1250	**ಶಿವಮೊಗ್ಗ**		ಆಪಿ	56779-56779
ಕಾಳು ಮೆಣಸು	500	ಬೆಟ್ಟೆ	48900-54610	ಬಿಳಿಗೋಟು	28299-33899
ಅಡಿಕೆ		ಗೊರಬಲು	17209-37258	ಚಾಲಿ	37099-40299
ಬಂಟ್ವಾಳ		ರಾಶಿ	47099-50499	ಕೋಕ	18212-30122
ಕೋಕ	12500-25000	ಸರಕು	56019-79610	ಕೆಂಪುಗೋಟು	31499-34199
ಹೊಸತು	27500-45000	**ಸಿದ್ದಾಪುರ**		ರಾಶಿ	47309-54169
ಹಳತು	46000-54000	ಬಿಳಿಗೋಟು	26199-32333	ತಟ್ಟಿಬೆಟ್ಟೆ	38709-46529
ಚಿತ್ರದುರ್ಗ					
ಆಪಿ	49100-49500				
ಬೆಟ್ಟೆ	39029-39499				
ಕೆಂಪುಗೋಟು	32119-32559				
ರಾಶಿ	48639-49069				
ಕುಮಟ					
ಚಿಪ್ಪು	26509-31019				
ಕೋಕ	18019-28969				
ಫ್ಯಾಕ್ಟರಿ	8099-19569				
ಹಳೆಚಾಲಿ	48099-49399				

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15800	15800	210.45 ಸೆಂಟ್ಸ್
ಎಸಿ	8900	8500	8500	
ಆರ್‌ಪಿ	9500	9700	9900	ಲಂಡನ್
ಆರ್‌ಸಿ	4470	4150	4375	2083ಡಾಲರ್ಸ್

ಗೋಧಿ ಹಿಟ್ಟಿನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಚಿಲ್ಲರೆ ಮಾರುಕಟ್ಟೆಗಳಲ್ಲಿ ಗೋಧಿ ಹಿಟ್ಟಿನ ಸರಾಸರಿ ದರವು ಒಂದು ವರ್ಷದಲ್ಲಿ ಪ್ರತಿ ಕೆ.ಜಿ.ಗೆ ಸರಿಸುಮಾರು ಶೇಕಡ 13ರಷ್ಟು ಹೆಚ್ಚಳವಾಗಿದೆ.

2021ರ ಮೇ 8ರಂದು ಗೋಧಿ ಹಿಟ್ಟಿನ ಸರಾಸರಿ ಬೆಲೆಯು ಕೆ.ಜಿ.ಗೆ ₹ 29.14 ಆಗಿತ್ತು. ಈಗ ಅದು ₹ 32.91ಕ್ಕೆ ತಲುಪಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ನೀಡಿರುವ ಅಂಕಿ–ಅಂಶಗಳು ಹೇಳಿವೆ.

ಕೆ.ಜಿ. ಗೋಧಿ ಹಿಟ್ಟಿನ ಗರಿಷ್ಠ ಬೆಲೆಯು ₹ 59, ಕನಿಷ್ಠ ಬೆಲೆ ₹ 22 ಎಂದು ಸಚಿವಾಲಯದ ಅಂಕಿ–ಅಂಶಗಳಲ್ಲಿ ಹೇಳಲಾಗಿದೆ.

ಪ್ರಬಂಧ ಸಲ್ಲಿಕೆ: ಅವಧಿ ವಿಸ್ತರಣೆ – ಯುಜಿಸಿ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳಿಗೆ ಎಂ.ಫಿಲ್ ಅಥವಾ ಪಿಎಚ್.ಡಿ ಪ್ರಬಂಧ ಸಲ್ಲಿಕೆಯ ಅವಧಿಯನ್ನು ಜೂನ್ 30ರ ನಂತರ ಮತ್ತೊಮ್ಮೆ ಆರು ತಿಂಗಳು ವಿಸ್ತರಿಸಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಅವಕಾಶ ಕಲ್ಪಿಸಿದೆ.

ಗುಜರಾತ್: ಹಾರ್ದಿಕ್ ಪಟೇಲ್ ಖುಲಾಸೆ

ಅಹಮದಾಬಾದ್: ಪಾಟೀದಾರ್ ಸಮುದಾಯದ ಮೀಸಲಾತಿಗೆ ಒತ್ತಾಯಿಸಿ 2017ರಲ್ಲಿ ನಡೆದ ಪ್ರತಿಭಟನೆ ವೇಳೆ ಬಿಜೆಪಿ ಕೌನ್ಸಲರ್ ಮನೆ ಮೇಲಿನ ದಾಳಿಗೆ ಸಂಬಂಧಿಸಿದ ಅಪರಾಧ ಪ್ರಕರದಿಂದ ಕಾಂಗ್ರೆಸ್‌ನ ಬಂಡಾಯ ನಾಯಕ ಹಾರ್ದಿಕ್ ಪಟೇಲ್ ಸೇರಿದಂತೆ 20 ಮಂದಿಯನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ.

ಗುಜರಾತ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್ ವಿರುದ್ಧದ ಪ್ರಕರಣವನ್ನು ಹಿಂಪಡೆಯಲು ನಿರಾಕರಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶದ ವಿರುದ್ಧ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸರ್ಕಾರ ಸೆಷನ್ ಕೋರ್ಟ್ ಮೊರೆ ಹೋಗಿತ್ತು.

ಈ ಬಗ್ಗೆ ಸೋಮವಾರ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ ನ್ಯಾಯಾಧೀಶ ಪ್ರಶಾಂತ್ ಎನ್ .ರಾವಲ್ ಅವರು ಹಾರ್ದಿಕ್ ವಿರುದ್ಧದ ಪ್ರಕರಣ ಹಿಂಪಡೆಯುವ ರಾಜ್ಯ ಸರ್ಕಾರದ ಅರ್ಜಿಯನ್ನು ಪುರಸ್ಕರಿಸಿದರು.

'ಅಸನಿ ಚಂಡಮಾರುತ ದುರ್ಬಲ ಸಾಧ್ಯತೆ'

ಭುವನೇಶ್ವರ/ಕೋಲ್ಕತ್ತ/ರಾಂಚಿ: 'ಅಸನಿ' ಚಂಡಮಾರುತವು ಗಂಟೆಗೆ 120 ಕಿ.ಮೀ. ವೇಗದಲ್ಲಿ ಭಾರಿ ಮಳೆಯೊಂದಿಗೆ ಪೂರ್ವ ಕರಾವಳಿಯ ಕಡೆಗೆ ಬೀಸುತ್ತಿದ್ದು, ತೀರವನ್ನು ತಲುಪಿದಾಗ ಉತ್ತರ – ಈಶಾನ್ಯದ ಕಡೆಗೆ ಬೀಸಿ ದುರ್ಬಲಗೊಳ್ಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಉತ್ತರ ಆಂಧ್ರಪ್ರದೇಶ-ಒಡಿಶಾ ಕರಾವಳಿಯ ಕಡೆಗೆ ಮಂಗಳವಾರ ರಾತ್ರಿ ಅಪ್ಪಳಿಸುವ ಸಾಧ್ಯತೆ ಇದೆ ಎಂದೂ ಹೇಳಿದ್ದಾರೆ.

ಚಂಡಮಾರುತದ ಪರಿಣಾಮ ಒಡಿಶಾ ಕರಾವಳಿ, ಆಂಧ್ರಪ್ರದೇಶದ ಉತ್ತರ ಕರಾವಳಿ ಮತ್ತು ಪಶ್ಚಿಮ ಬಂಗಾಳದ ಕರಾವಳಿ ಪ್ರದೇಶದಲ್ಲಿ ಮಂಗಳವಾರ ಮಳೆಯಾಗುವ ನಿರೀಕ್ಷೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೂಪಾಯಿ ಕುಸಿತ: ಕಾಂಗ್ರೆಸ್ ವಾಗ್ದಾಳಿ

ನವದೆಹಲಿ(ಪಿಟಿಐ): ಭಾರತದ ರೂಪಾಯಿ ಮೌಲ್ಯ ಸಾರ್ವಕಾಲಿಕ ದಾಖಲೆ ಪ್ರಮಾಣದಲ್ಲಿ ಕುಸಿತವಾಗಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದೆ.

ಈ ಸಂಬಂಧ ಟ್ವೀಟ್ ಮಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಭಾರತದ ಆರ್ಥಿಕ ಮತ್ತು ಸಾಮಾಜಿಕ ವಾಸ್ತವಗಳನ್ನು ಶಾಶ್ವತವಾಗಿ ಮರೆಮಾಚಲು ಪ್ರಧಾನಿಗೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ಹಿಂದೆ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ರೂಪಾಯಿ ಮೌಲ್ಯ ಕುಸಿತವಾದಾಗ ಮೋದಿ ಅವರು ಆಡಿದ್ದ ಮಾತುಗಳನ್ನು ನೆನಪಿಸಿದ್ದಾರೆ. ಅಲ್ಲದೆ ಅವರು ಈಗಾಗಲೇ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ₹100, ಅಡುಗೆ ಅನಿಲದ ದರವನ್ನು ₹1000 ಗಡಿ ದಾಟಿಸಿದ್ದಾರೆ. ಇದೀಗ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವನ್ನು 100ಕ್ಕೆ ಮುಟ್ಟಿಸುವ ಗುರಿ ಹೊಂದಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ಮೋದಿ ಆರ್ಥಿಕ ಬಿಕ್ಕಟ್ಟು ಎದುರಾಗಿದೆ ಎಂಬುದನ್ನು ಒಪ್ಪಿ ಕೊಂಡು, ಪರಿಹಾರ ಕಂಡಕೊಳ್ಳಲು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ.

'ನಾನು ನಿಗೂಢವಾಗಿ ಸಾಯುವುದಾದರೆ....' ಬಿರುಗಾಳಿ ಎಬ್ಬಿಸಿದ ಮಸ್ಕ್ ಟ್ವೀಟ್



ನ್ಯೂಯಾರ್ಕ್ (ಪಿಟಿಐ): 'ನಾನು ನಿಗೂಢ ಸನ್ನಿವೇಶದಲ್ಲಿ ಸಾಯುವುದಾದರೆ ....' ಎಂದು ವಿಶ್ವದ ಆಗರ್ಭ ಶ್ರೀಮಂತ, ಇಲಾನ್ ಮಸ್ಕ್ ಮಾಡಿರುವ ಟ್ವೀಟ್‌ವೊಂದು ಈಗ ಸಾಮಾಜಿಕ ಜಾಲತಾಣಗಳಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದೆ.

ಅಮೆರಿಕದ ಎಲೆಕ್ಟ್ರಿಕ್ ಕಾರು ಟೆಸ್ಲಾ ಮತ್ತು ಬಾಹ್ಯಾಕಾಶ ಕಂಪನಿ ಸ್ಪೇಸ್‌ಎಕ್ಸ್‌ನ ಸಿಇಒ, 50ರ ಹರೆಯದ ಇಲಾನ್ ಮಸ್ಕ್ ಕಳೆದ ತಿಂಗಳು ₹3.34 ಲಕ್ಷ ಕೋಟಿಗೆ ಟ್ವಿಟರ್ ಅನ್ನು ಖರೀದಿಸಿದ್ದಾರೆ. ಪ್ರತಿಷ್ಠಿತ ಫೋರ್ಬ್ಸ್ ನಿಯತಕಾಲಿಕದ ಪ್ರಕಾರ, ಮಸ್ಕ್ ಅವರು ₹20.80 ಲಕ್ಷ ಕೋಟಿ ಮೌಲ್ಯದ ಆಸ್ತಿ ಒಡೆಯ. ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿ.

ಸದಾ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿರುವ ಇಲಾನ್ ಮಸ್ಕ್, ಸದ್ಯ ಟ್ವಿಟರ್‌ನಲ್ಲಿ 'ನಾನು ನಿಗೂಢ ಸನ್ನಿವೇಶಗಳಲ್ಲಿ ಸಾಯುವುದಿದ್ದರೆ ಅದು ತಿಳಿದಿರುವುದು ಒಳ್ಳೆಯದು' ಎಂದು ನೀಡಿರುವ ಹೇಳಿಕೆ ಈಗ ಹಲವು ಆಯಾಮಗಳ ಚರ್ಚೆ ಹುಟ್ಟುಹಾಕಿದೆ.

ಇಲಾನ್ ಮಸ್ಕ್ ಅವರ ತಾಯಿ, ಮಗನ ಈ ಟ್ವೀಟ್‌ಗೆ 'ಇದು ತಮಾಶೆಯಲ್ಲ' ಎಂದು ಟ್ವೀಟ್‌ನಲ್ಲಿ ಪ್ರತಿಕ್ರಿಯಿಸಿದ್ದಾರೆ. ಇಲಾನ್ ಮಸ್ಕ್ ತಕ್ಷಣವೇ, 'ಕ್ಷಮಿಸಿ! ನಾನು ಬದುಕಿರಲು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ' ಎಂದು ಟ್ವೀಟ್‌ನಲ್ಲಿ ಉತ್ತರಿಸಿದ್ದಾರೆ.

ತಮ್ಮ ಈ ಟ್ವೀಟ್ ಹೇಳಿಕೆ ಬಗ್ಗೆ ನಿರ್ದಿಷ್ಟ ಕಾರಣ ಮತ್ತು ವಿವರಗಳನ್ನು ಇಲಾನ್ ನೀಡಿಲ್ಲ.

ಟ್ವಿಟರ್‌ನಲ್ಲಿ ಅವರು ಹಂಚಿಕೊಂಡಿರುವ ಹೇಳಿಕೆಯ ಸಮಯ, ಸಂದರ್ಭ ಹಾಗೂ ಸ್ವರೂಪವು ಸಾಮಾಜಿಕ ಮಾಧ್ಯಮ ಬಳಕೆದಾರರಲ್ಲಿ ಹಲವು ಪ್ರಶ್ನೆಗಳನ್ನು ಮೂಡಿಸಿದೆ.

ದಾವೂದ್‌ನ ಇಬ್ಬರು ಸಹಚರರ ಬಂಧನ

ಮುಂಬೈ (ಪಿಟಿಐ):'ಭೂಗತ ಪಾತಕಿ ದಾವೂದ್ ಇಬ್ರಾಹಿಂ ಸಹಚರರ ವಿರುದ್ಧ ಮುಂಬೈ ಮತ್ತು ಥಾಣೆಯ 20 ಸ್ಥಳಗಳಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಸೋಮವಾರ ನಡೆಸಿದ ದಾಳಿಯಲ್ಲಿ ಸಲೀಂ ಖುರೇಷಿ ಅಲಿಯಾಸ್ ಸಲೀಂ ಫ್ರೂಟ್ ಹಾಗೂ ಮುಂಬೈನ ಹಾಜಿ ಅಲಿ ದರ್ಗಾ ಮತ್ತು ಮಾಹಿಮ್ ದರ್ಗಾದ ಟ್ರಸ್ಟಿ ಸೊಹೈಲ್ ಖಾಂಡ್ವಾನಿ ಎಂಬುವರನ್ನು ಬಂಧಿಸಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸೋಮವಾರ ಬೆಳಿಗ್ಗೆಯೇ ದಾಳಿ ನಡೆಸಿದ ಎನ್‌ಐಎ, ದಕ್ಷಿಣ ಮುಂಬೈನ ಭೆಂಡಿ ಬಜಾರ್ ಪ್ರದೇಶದಲ್ಲಿ ಸಲೀಂ ನಿವಾಸದಲ್ಲಿಯೇ ಆತನನ್ನು ಬಂಧಿಸಿದೆ. ಸಲೀಂ, ಚೋಟಾ ಶಕೀಲ್‌ನ ಸೊಸೆಯ ಗಂಡ. ಮಾಹಿಮ್ ಪ್ರದೇಶದಲ್ಲಿನ ನಿವಾಸದಲ್ಲಿ ಸೊಹೈಲ್ ಖಾಂಡ್ವಾನಿಯನ್ನು ಬಂಧಿಸಲಾಗಿದೆ' ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ದಾವೂದ್ ಇಬ್ರಾಹಿಂ ಸಹಚರರನ್ನು ಗುರಿಯಾಗಿಸಿಕೊಂಡು ಅವರು ನೆಲೆಸಿರುವ ಮುಂಬೈನ ನಾಗ್ಪಾಡಾ ಪ್ರದೇಶ, ಭೆಂಡಿ ಬಜಾರ್, ಸಾಂತಾಕ್ರೂಜ್, ಮಾಹಿಮ್, ಮುಂಬೈನ ಗೋರೆಗಾಂವ್ ಪ್ರದೇಶ, ಥಾಣೆಯ ಮುಂಬ್ರಾ ಮತ್ತು ಇತರ ಸ್ಥಳಗಳಲ್ಲಿರುವ ಹೌಸಿಂಗ್ ಸೊಸೈಟಿ ಮೇಲೆ ಎನ್‌ಐಎ ದಾಳಿ ನಡೆಸಿದೆ.

ಎನ್‌ಐಎ ಅಧಿಕಾರಿಗಳ ತಂಡವು ಖಾಂಡ್ವಾನಿ ಅವರ ಮಾಹಿಮ್ ಮೂಲದ ಕಚೇರಿಯಲ್ಲೂ ಶೋಧ ಕಾರ್ಯ ನಡೆಸಿದ್ದು, ಬಿಲ್ಡರ್ ಅಸ್ಲಾಂ ಸೊರಾಟಿಯಾ ಮತ್ತು ಗೋಮಾಂಸ ರಫ್ತುದಾರ ಫರೀದ್ ಖುರೇಷಿ ಸೇರಿದಂತೆ ಹಲವರನ್ನು ವಿಚಾರಣೆಗೊಳಪಡಿಸಿದೆ. ಬೊರಿವಲಿ ಪ್ರದೇಶದಲ್ಲಿರುವ ಬುಕ್ಕಿ-ಬಿಲ್ಡರ್ ಅಜಯ್ ಗೊಸಾಲಿಯಾ ಅವರ ನಿವಾಸದಲ್ಲೂ ಎನ್‌ಐಎ ಶೋಧ ನಡೆಸಿದೆ' ಎಂದು ಅಧಿಕಾರಿ ಹೇಳಿದ್ದಾರೆ.

ಹಲವು ಹವಾಲಾ ಆಪರೇಟರ್‌ಗಳು ಮತ್ತು ಡ್ರಗ್ ಪೆಡ್ಲರ್‌ಗಳು ದಾವೂದ್ ಇಬ್ರಾಹಿಂ ಜೊತೆ ಸಂಬಂಧ ಹೊಂದಿದ್ದರು ಎಂದು ತಿಳಿಸಿದ್ದಾರೆ.



ಬೂಮ್ರಾ ಪರಿಣಾಮಕಾರಿ ಬೌಲಿಂಗ್ ವ್ಯರ್ಥ; ವೆಂಕಟೇಶ್ ಬ್ಯಾಟಿಂಗ್ ಸೊಬಗು: ಮುಂಬೈಗೆ ಸೋಲು

ಕೋಲ್ಕತ್ತ ಪ್ಲೇ ಆಫ್ ಆಸೆ ಜೀವಂತ

ಮುಂಬೈ (ಪಿಟಿಐ): ವೆಂಕಟೇಶ್ ಅಯ್ಯರ್ ಹಾಗೂ ನಿತೀಶ್ ರಾಣಾ ಅವರ ಬ್ಯಾಟಿಂಗ್ ಮತ್ತು ಪ್ಯಾಟ್ ಕಮಿನ್ಸ್ ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಗೆದ್ದಿತು. ಮುಂಬೈ ಇಂಡಿಯನ್ಸ್‌ಗೆ ಒಂಬತ್ತನೇ ಸೋಲಾಯಿತು.

ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕೋಲ್ಕತ್ತ ತಂಡವು 52 ರನ್‌ಗಳಿಂದ ಜಯಿಸಿ ಪ್ಲೇ ಆಫ್ ಆಸೆ ಜೀವಂತವಾಗಿರಿಸಿಕೊಂಡಿತು.

ಕೋಲ್ಕತ್ತ ನೀಡಿದ 166 ರನ್‌ಗಳ ಗುರಿ ಬೆನ್ನತ್ತಿದ ಮುಂಬೈ 18ನೇ ಓವರ್‌ನಲ್ಲಿ ಎಲ್ಲ ವಿಕೆಟ್ ಒಪ್ಪಿಸಿ ಕೇವಲ 113 ರನ್ ಗಳಿಸಿತು.

ಇಶಾನ್ ಕಿಶನ್ (43, 51 ಎ, 4X5, 6X1) ಅವರನ್ನು ಹೊರತುಪಡಿಸಿ ಮುಂಬೈ ತಂಡದ ಎಲ್ಲ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಕಮಿನ್ಸ್ (22ಕ್ಕೆ 3) ಮತ್ತು ಆ್ಯಂಡ್ರೆ ರಸೆಲ್ (22ಕ್ಕೆ 2) ಅವರು ರೋಹಿತ್ ನಾಯಕತ್ವದ ಮುಂಬೈ ಬ್ಯಾಟಿಂಗ್‌ಗೆ ಕಡಿವಾಣ ಹಾಕಿದರು.

ಬೂಮ್ರಾ ಬಿರುಗಾಳಿ: ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಐದು ವಿಕೆಟ್ ಉರುಳಿಸಿದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಬಿರುಗಾಳಿ ದಾಳಿಗೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬ್ಯಾಟರ್‌ಗಳು ಬೆದರಿದರು.

ಒಂದು ಮೇಡನ್ ಸೇರಿದಂತೆ ನಾಲ್ಕು ಓವರ್‌ಗಳಲ್ಲಿ ಕೇವಲ 10 ರನ್ ನೀಡಿದ ಬೂಮ್ರಾ ಮಿಂಚಿದರು.

ವೆಂಕಟೇಶ ಅಯ್ಯರ್ ಮತ್ತು ಅಜಿಂಕ್ಯ ರಹಾನೆ ಜೋಡಿಯ ಅಬ್ಬರದಿಂದಾಗಿ ಕೋಲ್ಕತ್ತ ತಂಡ ಉತ್ತಮ ಆರಂಭ ಕಂಡಿತ್ತು. ಎರಡನೇ ಓವರ್‌ನಿಂದ ಸಿಕ್ಸರ್ ಮತ್ತು ಬೌಂಡರಿಗಳನ್ನು ಸಿಡಿಸಲು ಆರಂಭಿಸಿದ ಅಯ್ಯರ್ ಆರನೇ ಓವರ್‌ನಲ್ಲಿ ತಂಡದ ಮೊತ್ತವನ್ನು 60ಕ್ಕೇರಿಸಿದರು.

ಎಡಗೈ ಸ್ಪಿನ್ನರ್ ಕುಮಾರ್ ಕಾರ್ತಿಕೇಯ ಈ ಜೊತೆಯಾಟವನ್ನು ಮುರಿದರು. ಕವರ್‌ನಲ್ಲಿದ್ದ ಡ್ಯಾನಿಯಲ್ ಸ್ಯಾಮ್ಸ್‌ಗೆ ಕ್ಯಾಚ್ ನೀಡಿ ಅಯ್ಯರ್ ವಾಪಸಾದರು. 11ನೇ ಓವರ್‌ನಲ್ಲಿ ಅಜಿಂಕ್ಯ ರಹಾನೆ ಕೂಡ ಮರಳಿದರು. ರಹಾನೆ ಜೊತೆ 27 ರನ್‌ಗಳ ಜೊತೆಯಾಟವಾಡಿದ ನಿತೀಶ್ ರಾಣಾ ಕ್ರೀಸ್‌ನಲ್ಲಿ ಭದ್ರವಾಗಿ ಉಳಿದರು. ನಾಯಕ ಶ್ರೇಯಸ್ ಅಯ್ಯರ್ ಮತ್ತು ಸ್ಫೋಟಕ ಬ್ಯಾಟರ್ ಆ್ಯಂಡ್ರೆ ರಸೆಲ್ ಬೇಗನೇ ಮರಳಿದರು.

ನಂತರ ರಿಂಕು ಸಿಂಗ್ ಆಸರೆಯಾದರು. ಆದರೆ ಆಮೇಲೆ ಬೂಮ್ರಾ ವಿಜೃಂಭಿಸಿದರು. ಆ್ಯಂಡ್ರೆ ರಸೆಲ್ ಅವರನ್ನು ಔಟ್ ಮಾಡುವುದರೊಂದಿಗೆ ವಿಕೆಟ್ ಬೇಟೆ ಆರಂಭಿಸಿದ ಅವರು ಎದುರಾಳಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾದರು. ನಾಲ್ಕು ಸಿಕ್ಸರ್ ಸಿಡಿಸಿದ ನಿತೀಶ್ ರಾಣಾ ವಿಕೆಟ್ ಕೂಡ ಅವರ ಖಾತೆಗೆ ಸೇರಿತು. ಅವರ ವೇಗದ ಅಸ್ತ್ರಕ್ಕೆ ಬಾಲಂಗೋಚಿಗಳು ನಿರುತ್ತರರಾದರು.

ಶೆಲ್ಡನ್ ಜಾಕ್ಸನ್ ಐದು ರನ್ ಗಳಿಸಿ ಔಟಾದರೆ ಪ್ಯಾಟ್ ಕಮಿನ್ಸ್ ಮತ್ತು ಸುನಿಲ್ ನಾರಾಯಣ್ ಶೂನ್ಯ ಗಳಿಕೆಯೊಂದಿಗೆ ಬೂಮ್ರಾಗೆ ವಿಕೆಟ್ ಒಪ್ಪಿಸಿದರು.



ವೆಂಕಟೇಶ್ ಅಯ್ಯರ್ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 9ಕ್ಕೆ 165 (20 ಓವರ್))
ವೆಂಕಟೇಶ್ ಸಿ ಸ್ಯಾಮ್ಸ್ ಬಿ ಕಾರ್ತಿಕೇಯ 43 (24 ಎ, 4x3, 6x4), ಅಜಿಂಕ್ಯ ಬಿ ಕಾರ್ತಿಕೇಯ 25 (24 ಎ, 4x3), ನಿತೀಶ್ ಸಿ ಇಶಾನ್ ಬಿ ಬೂಮ್ರಾ 43 (26 ಎ, 4x3, 6x4), ಶ್ರೇಯಸ್ ಸಿ ಇಶಾನ್ ಬಿ ಮುರುಗನ್ 6 (8 ಎ, 4x1), ರಸೆಲ್ ಸಿ ಪೊಲಾರ್ಡ್ ಬಿ ಬೂಮ್ರಾ 9 (5 ಎ, 6x1), ರಿಂಕು ಔಟಾಗದೆ 23 (19 ಎ, 4x2, 6x1), ಶೆಲ್ಡನ್ ಸಿ ಸ್ಯಾಮ್ಸ್ ಬಿ ಬೂಮ್ರಾ 5 (7 ಎ), ಕಮಿನ್ಸ್ ಸಿ ತಿಲಕ್ ಬಿ ಬೂಮ್ರಾ 0 (2 ಎ), ಸುನಿಲ್ ಸಿ ಮತ್ತು ಬಿ ಬೂಮ್ರಾ 0 (1 ಎ), ಸೌಥಿ ಸಿ ಪೊಲಾರ್ಡ್ ಬಿ ಸ್ಯಾಮ್ಸ್ 0 (4 ಎ), ವರುಣ್ ಔಟಾಗದೆ 0 (0 ಎ)
ಇತರೆ (ಲೆಗ್‌ಬೈ 1, ವೈಡ್ 10) 11
ವಿಕೆಟ್ ಪತನ: 1-60 (ವೆಂಕಟೇಶ್ ಅಯ್ಯರ್, 5.4), 2-87 (ಅಜಿಂಕ್ಯ ರಹಾನೆ, 10.2), 3-123 (ಶ್ರೇಯಸ್ ಅಯ್ಯರ್, 13.1), 4-136 (ಆ್ಯಂಡ್ರೆ ರಸೆಲ್, 14.2), 5-139 (ನಿತೀಶ್ ರಾಣಾ, 14.5), 6-156 (ಶೆಲ್ಡನ್ ಜಾಕ್ಸನ್, 17.1), 7-156 (ಪ್ಯಾಟ್ ಕಮಿನ್ಸ್, 17.3), 8-156 (ಸುನಿಲ್ ನಾರಾಯಣ್, 17.4), 9-164 (ಟಿಮ್ ಸೌಥಿ, 18.6)
ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 4–0–26–1, ಮುರುಗನ್ ಅಶ್ವಿನ್ 4–0–35–1, ಜಸ್‌ಪ್ರೀತ್ ಬೂಮ್ರಾ 4–1–10–5, ರಿಲೆ ಮೆರೆಡಿತ್ 3–0–35–0, ಕುಮಾರ್ ಕಾರ್ತಿಕೇಯ 3–0–32–2, ಕೀರನ್ ಪೊಲಾರ್ಡ್ 2–0–26–0

ಮುಂಬೈ ಇಂಡಿಯನ್ಸ್ 113 (17.3 ಓವರ್)
ರೋಹಿತ್ ಸಿ ಜಾಕ್ಸನ್ ಬಿ ಸೌಥಿ 2 (6ಎ), ಇಶಾನ್ ಸಿ ರಿಂಕು ಬಿ ಕಮಿನ್ಸ್ 51 (43ಎ, 4X5, 6X1), ತಿಲಕ್ ಸಿ ರಾಣಾ ಬಿ ರಸೆಲ್ 6 (5ಎ, 4X1), ರಮಣದೀಪ್ ಸಿ ರಾಣಾ ಬಿ ರಸೆಲ್ 12 (16ಎ), ಟಿಮ್ ಸಿ ರಹಾನೆ ಬಿ ವರುಣ್ 13 (9ಎ, 4X3), ಪೊಲಾರ್ಡ್ ರನೌಟ್ (ವರುಣ್/ಅಯ್ಯರ್) 15 (16ಎ, 6X1), ಡ್ಯಾನಿಯಲ್ ಸಿ ಜಾಕ್ಸನ್ ಬಿ ಕಮಿನ್ಸ್ 1 (2ಎ), ಮುರುಗನ್ ಸಿ ವರುಣ್ ಬಿ ಕಮಿನ್ಸ್ 0 (2ಎ), ಕುಮಾರ್ ಕಾರ್ತಿಕೇಯ ರನೌಟ್ (ರಹಾನೆ/ ಜಾಕ್ಸನ್) 3 (5ಎ), ಬೂಮ್ರಾ ರನೌಟ್ (ರಿಂಕು) 0 (0ಎ), ಮೆರೆಡಿತ್ ಔಟಾಗದೆ 0 (1ಎ)
ಇತರೆ (ಬೈ1, ಲೆಗ್‌ಬೈ 7, ವೈಡ್ 2) 10
ವಿಕೆಟ್ ಪತನ: 1-2 (ರೋಹಿತ್ ಶರ್ಮಾ, 0.6), 2-32 (ತಿಲಕ್, 4.6), 3-69 (ರಮಣದೀಪ್, 10.3), 4-83 (ಟಿಮ್ ಡೇವಿಡ್, 12.2), 5-100 (ಇಶಾನ್ ಕಿಶನ್, 14.1), 6-102 (ಡೇನಿಯಲ್ ಸ್ಯಾಮ್ಸ್, 14.4), 7-102 (ಮುರುಗನ್ ಅಶ್ವಿನ್, 14.6), 8-112 (ಕುಮಾರ್ ಕಾರ್ತಿಕೇಯ, 16.6), 9-113 (ಕೀರನ್ ಪೊಲಾರ್ಡ್, 17.2), 10-113 (ಜಸ್‌ಪ್ರೀತ್ ಬೂಮ್ರಾ, 17.3)
ಬೌಲಿಂಗ್: ಸೌಥಿ 3–0–10–1, ಪ್ಯಾಟ್ ಕಮಿನ್ಸ್ 4–0–22–3, ಆ್ಯಂಡ್ರೆ ರಸೆಲ್ 2.3–0–22–2, ಸುನಿಲ್ ನಾರಾಯಣ್ 4–0–21–0, ವರುಣ್ ಚಕ್ರವರ್ತಿ 3–0–22–1, ವೆಂಕಟೇಶ್ 1–0–8–0

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 52 ರನ್ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಲಖನೌ	11	8	3	0	0	16	0.703
ಗುಜರಾತ್	11	8	3	0	0	16	0.120
ರಾಜಸ್ಥಾನ	11	7	4	0	0	14	0.326
ಬೆಂಗಳೂರು	12	7	5	0	0	14	-0.115
ಡೆಲ್ಲಿ	11	5	6	0	0	10	0.150
ಹೈದರಾಬಾದ್	11	5	6	0	0	10	-0.031
ಕೋಲ್ಕತ್ತ	12	5	7	0	0	10	-0.057
ಪಂಜಾಬ್	11	5	6	0	0	10	-0.231
ಚೆನ್ನೈ	11	4	7	0	0	8	0.028
ಮುಂಬೈ	11	2	9	0	0	4	-0.894

*ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	618
ರಾಹುಲ್	ಲಖನೌ	451
ಡುಪ್ಲೆಸಿ	ಬೆಂಗಳೂರು	389

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	22
ಹಸರಂಗ	ಬೆಂಗಳೂರು	21
ರಬಾಡ	ಪಂಜಾಬ್	18

ಸೂರ್ಯಕುಮಾರ್ ಟೂರ್ನಿಯಿಂದ ‘ಔಟ್’

ಗಾಯಗೊಂಡಿರುವ ಮುಂಬೈ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಮುಂದಿನ ಪಂದ್ಯಗಳಿಗೆ ಲಭ್ಯ ಇರುವುದಿಲ್ಲ. ಎಡಗೈ ನೋವಿನಿಂದ ಬಳಲುತ್ತಿರುವ ಅವರಿಗೆ ವಿಶ್ರಾಂತಿ ಪಡೆದುಕೊಳ್ಳುವಂತೆ ಸೂಚಿಸಲಾಗಿದೆ. ಗುಜರಾತ್ ಟೈಟನ್ಸ್ ಎದುರಿನ ಪಂದ್ಯದಲ್ಲಿ ಸೂರ್ಯಕುಮಾರ್ ಗಾಯಗೊಂಡಿದ್ದರು. ಆಡಿರುವ 8 ಪಂದ್ಯಗಳಲ್ಲಿ ಸೂರ್ಯಕುಮಾರ್ 303 ರನ್ ಗಳಿಸಿದ್ದಾರೆ. ಇದರಲ್ಲಿ ಮೂರು ಅರ್ಧಶತಕಗಳಿವೆ



ಸೂರ್ಯಕುಮಾರ್ ಯಾದವ್



ಬ್ರಯಾನ್ ಯಂಗ್ ಎದುರಿನ ಪಂದ್ಯದಲ್ಲಿ ಷಟಲ್ ರಿಟರ್ನ್ ಮಾಡಿದ ಕಿದಂಬಿ ಶ್ರೀಕಾಂತ್ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಪ್ಲೇ ಆಫ್ ಹಂತಕ್ಕೆ ಭಾರತ ಲಗ್ಗೆ

ಬ್ಯಾಂಕಾಕ್ (ಪಿಟಿಐ): ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ ತಂಡ ಅಮೋಘ ಓಟ ಮುಂದುವರಿಸಿದೆ. ಸೋಮವಾರ ನಡೆದ ಎರಡನೇ ಹಣಾಹಣಿಯಲ್ಲಿ ಕೆನಡಾ ವಿರುದ್ಧ 5–0ಯಿಂದ ಜಯ ಗಳಿಸಿದ ಭಾರತ ನಾಕ್ ಔಟ್ ಹಂತದಲ್ಲಿ ಆಡಲು ಅರ್ಹತೆ ಗಳಿಸಿತು.

ಮೊದಲ ಹಣಾಹಣಿಯಲ್ಲಿ ತಂಡ ಜರ್ಮನಿ ವಿರುದ್ಧ 5–0ಯಿಂದ ಗೆಲುವು ಸಾಧಿಸಿತ್ತು. ಸೋಮವಾರದ ಜಯದೊಂದಿಗೆ ಭಾರತ ತಂಡ ‘ಸಿ’ ಗುಂಪಿನ ಅಗ್ರ ಎರಡರಲ್ಲಿ ಸ್ಥಾನ ಗಳಿಸುವುದು ಖಚಿತವಾಯಿತು.

ಕೆನಡಾ ಎದುರಿನ ಮೊದಲ ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದರೂ ಪುಟಿದೆದ್ದು ಉಳಿದೆರಡು ಗೇಮ್‌ಗಳನ್ನು ತಮ್ಮದಾಗಿಸಿಕೊಂಡರು. ಬ್ರಯಾನ್ ಯಂಗ್ ಎದುರಿನ 52 ನಿಮಿಷಗಳ ಹಣಾಹಣಿಯಲ್ಲಿ 20-22, 21-11, 21-15ರಲ್ಲಿ ಗೆದ್ದು ಮುನ್ನಡೆ ತಂದುಕೊಟ್ಟರು.

ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೇವಲ 29 ನಿಮಿಷಗಳಲ್ಲಿ ಜೇಸನ್ ಆ್ಯಂಟನಿ ಮತ್ತು ಕೆವಿನ್ ಲೀ ಎದುರು 21–12, 21–11ರಲ್ಲಿ ಗೆಲುವು ಸಾಧಿಸಿದರು. ಮತ್ತೊಂದು ಸಿಂಗಲ್ಸ್‌ನಲ್ಲಿ ಎಚ್.ಎಸ್.ಪ್ರಣಯ್ ಕೂಡ ಸುಲಭ ಜಯ ಸಾಧಿಸಿದರು. ಬಿ.ಆರ್.ಸಂಕೀರ್ತ್ ಎದುರು 21-15, 21-12ರಲ್ಲಿ ಜಯ ಗಳಿಸಿದ ಅವರು 3-0 ಮುನ್ನಡೆಗೆ ಕಾರಣರಾದರು.

ಎರಡನೇ ಡಬಲ್ಸ್ ಪಂದ್ಯದಲ್ಲೂ ಭಾರತ ಪಾರಮ್ಯ ಮೆರೆಯಿತು. ಕೃಷ್ಣ ಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಪಾಂಜಲ 21-15, 21-11ರಲ್ಲಿ ಡಾಂಗ್ ಆ್ಯಡಂ ಮತ್ತು ನೈಲ್ ಯಕುರ ವಿರುದ್ಧ ಜಯ ಗಳಿಸಿದರು. ಈ ಪಂದ್ಯ ಕೇವಲ 34 ನಿಮಿಷಗಳಲ್ಲಿ ಮುಗಿಯಿತು. 4–0 ಮುನ್ನಡೆ ಗಳಿಸಿದ ತಂಡದ ಕ್ಲೀನ್ ಸ್ವೀಪ್ ಸಾಧನೆ ಕನಸನ್ನು ಪ್ರಿಯಾಂಶು ರಾಜಾವತ್ ನನಸಾಗಿಸಿದರು. ವಿಕ್ಟರ್ ಲಾಲ್ ಎದುರು ಅವರು 21-13, 20-22, 21-14ರಲ್ಲಿ ಜಯ ಸಾಧಿಸಿದರು.

ಭಾರತ ತಂಡ ಥಾಮಸ್ ಕಪ್‌ನಲ್ಲಿ ಮೊದಲ ಚಿನ್ನದ ನಿರೀಕ್ಷೆಯಲ್ಲಿದೆ. ಟೂರ್ನಿಯಲ್ಲಿ ಭಾರತಕ್ಕೆ ಈ ವರೆಗೆ ಸಮಿಫೈನಲ್ ಪ್ರವೇಶಿಸುವುದಕ್ಕೂ ಸಾಧ್ಯವಾಗಲಿಲ್ಲ.

ಹಾಕಿ: ಮಧ್ಯಪ್ರದೇಶ, ಹರಿಯಾಣಗೆ ಜಯ

ಭೋಪಾಲ್ (ಪಿಟಿಐ): ಆತಿಥೇಯ ಮಧ್ಯಪ್ರದೇಶ, ಹರಿಯಾಣ, ಪಂಜಾಬ್ ಮತ್ತು ಮಹಾರಾಷ್ಟ್ರ ತಂಡಗಳು ರಾಷ್ಟ್ರೀಯ ಸೀನಿಯರ್ ಮಹಿಳೆಯರ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಜಯ ಗಳಿಸಿ ದವು.

ಎ ಗುಂಪಿನಲ್ಲಿ ಮಧ್ಯಪ್ರದೇಶ 5–1ರಿಂದ ಚಂಡೀಗಡ ತಂಡವನ್ನು ಮಣಿಸಿದರೆ, ಹರಿಯಾಣ ಬಿ ಗುಂಪಿನಲ್ಲಿ 7–1ರಿಂದ ಅಸ್ಸಾಂ ವಿರುದ್ಧ ಗೆದ್ದಿತು.

ಸಿ ಗುಂಪಿನಲ್ಲಿ ಪಂಜಾಬ್ 6–0ಯಿಂದ ಛತ್ತೀಸಗಡ ವಿರುದ್ಧ ಗೆಲುವು ಸಾಧಿಸಿತು.

ಟಿಟಿ: ಸಂಭಾವ್ಯ ತಂಡ ಆಯ್ಕೆ

ನವದೆಹಲಿ: ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ಗೆ 16 ಮಂದಿಯ ಸಂಭಾವ್ಯ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ರಾಷ್ಟ್ರೀಯ ಚಾಂಪಿಯನ್‌ಗಳಾದ ಶರತ್ ಕಮಲ್, ಶ್ರೀಜಾ ಅಕುಲ್ ಸ್ಥಾನ ಪಡೆದಿದ್ದಾರೆ.

ಈ ವರ್ಷದ ಜುಲೈ- ಆಗಸ್ಟ್‌ನಲ್ಲಿ ಕಾಮನ್‌ವೆಲ್ತ್ ಗೇಮ್ಸ್ ನಿಗದಿಯಾಗಿವೆ. ಮೇ 23ರಿಂದ 30ರವರೆಗೆ ರಾಷ್ಟ್ರೀಯ ಶಿಬಿರ ನಡೆಯಲಿದ್ದು, ಆ ಬಳಿಕ ಅಂತಿಮ ತಂಡವನ್ನು ಪ್ರಕಟಿಸಲಾಗುತ್ತದೆ ಎಂದು ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ) ತಿಳಿಸಿದೆ. ಮೊದಲ ಬಾರಿ ತರಬೇತಿ ಶಿಬಿರವು ಬೆಂಗಳೂರಿನ ಪಡುಕೋಣೆ–ದ್ರಾವಿಡ್ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ನಿಗದಿಯಾಗಿದೆ.

ಸಂಭವನೀಯರ ತಂಡ: ಪುರುಷರು: ಜಿ.ಸತ್ಯನ್, ಶರತ್ ಕಮಲ್, ಮಾನುಷ್ ಶಾ, ಸ್ನೇಹಿತ್ ಫಿಡೆಲ್ ರಫೀಕ್, ಮಾನವ್ ಥಕ್ಕರ್, ಹರ್ಮೀತ್ ದೇಸಾಯಿ, ಸನಿಲ್ ಶೆಟ್ಟಿ, ಅನಿರ್ಬನ್ ಲಾಹಿರಿ.

ಮಹಿಳೆಯರು: ಮಣಿಕಾ ಬಾತ್ರಾ, ಅರ್ಚನಾ ಕಾಮತ್, ಶ್ರೀಜಾ ಅಕುಲ್, ರೀತ್ ರಿಷ್ಯಾ, ಸುತೀರ್ಥಾ ಮುಖರ್ಜಿ, ಐಹಿಕಾ ಮುಖರ್ಜಿ, ದಿಯಾ ಚಿತಾಲೆ, ಸ್ವಸ್ತಿಕಾ ಘೋಷ್.



ಶರತ್ ಕಮಲ್



ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಗೆ (ಎನ್‌ಸಿಎ) ಭಾನುವಾರ ಭೇಟಿ ನೀಡಿದ್ದ ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಛೆಟ್ರಿ ಅವರು ಈಶಾನ್ಯ ಮತ್ತು ರಣಜಿ ಪ್ಲೇಟ್ ತಂಡಗಳ ಆಟಗಾರರೊಡನೆ ಸಂವಾದ ನಡೆಸಿದರು. ಎನ್‌ಸಿಎ ಮುಖ್ಯಸ್ಥ ವಿ.ವಿ.ಎಸ್ ಲಕ್ಷ್ಮಣ್ ಇದ್ದರು– ಬಿಸಿಸಿಐ ಟ್ವಿಟರ್ ಚಿತ್ರ

ತೀವ್ರ ಆರ್ಥಿಕ ಬಿಕ್ಕಟ್ಟು – ಭುಗಿಲೆದ್ದ ಹಿಂಸಾಚಾರ • ದೇಶದಾದ್ಯಂತ ಕರ್ಫ್ಯೂ ಜಾರಿ

ಶ್ರೀಲಂಕಾ ಪ್ರಧಾನಿ ರಾಜಪಕ್ಸ ರಾಜೀನಾಮೆ

ಕೊಲಂಬೊ(ಪಿಟಿಐ/ಎಎಫ್‌ಪಿ): ತೀವ್ರ ಆರ್ಥಿಕ ಬಿಕ್ಕಟ್ಟಿನ ಕಾರಣ ಶ್ರೀಲಂಕಾದಲ್ಲಿ ಕಳೆದೊಂದು ತಿಂಗಳಿನಿಂದ ನಡೆದಿರುವ ಪ್ರತಿಭಟನೆಗಳ ನಡುವೆಯೇ, ಪ್ರಧಾನಿ ಮಹಿಂದಾ ರಾಜಪಕ್ಸ ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮಹಿಂದಾ ರಾಜಪಕ್ಸ ಅವರು ತಮ್ಮ ಕಿರಿಯ ಸಹೋದರ, ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿದ್ದಾರೆ ಎಂದು ಅವರ ವಕ್ತಾರ ರೋಹನ್ ವೆಲಿವಿಟಾ ತಿಳಿಸಿದ್ದಾರೆ.

‘ನಾನು ತಕ್ಷಣದಿಂದಲೇ ಜಾರಿಗೆ ಬರುವಂತೆ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಇದರಿಂದ ನೀವು ಎಲ್ಲ ಪಕ್ಷಗಳನ್ನು ಒಳಗೊಂಡ ಸರ್ಕಾರವನ್ನು ರಚಿಸುವ ಮೂಲಕ ದೇಶವನ್ನು ಸದ್ಯದ ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲು ಪ್ರಯತ್ನಿಸಬಹುದು’ ಎಂದು ಮಹಿಂದಾ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

1948ರಲ್ಲಿ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದ ನಂತರ, ಅತ್ಯಂತ ಭೀಕರ ಎನ್ನಲಾದ ಆರ್ಥಿಕ ಬಿಕ್ಕಟ್ಟಿಗೆ ಶ್ರೀಲಂಕಾ ಸಿಲುಕಿದೆ. ವಿದೇಶಿ ಕರೆನ್ಸಿಯ ತೀವ್ರ ಕೊರತೆಯಿಂದಾಗಿ ಆಹಾರ, ಔಷಧಿ, ಇಂಧನ ಸೇರಿದಂತೆ ಅಗತ್ಯ ವಸ್ತುಗಳ ಆಮದಿಗೂ ತೊಡಕಾಗಿದೆ. ಜೊತೆಗೆ ತೀವ್ರ ಬೆಲೆ ಏರಿಕೆ ಜನರನ್ನು ಹೈರಾಣಾಗಿಸಿದೆ. ಪರಿಸ್ಥಿತಿ ಕೈಮೀರುತ್ತಿರುವುದನ್ನು ಅರಿತ ಅಧಿಕಾರಿಗಳು ಸೋಮವಾರ ದೇಶದಾದ್ಯಂತ ಕರ್ಫ್ಯೂ ಘೋಷಣೆ ಮಾಡಿದ್ದಾರೆ.

ಈ ನಡುವೆ, ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಕಚೇರಿಯ ಹೊರಗೆ ಸರ್ಕಾರದ ಪರವಾದ ಗುಂಪುಗಳು, ಪ್ರತಿಭಟನಕಾರರ ಮೇಲೆ ದಾಳಿ ಮಾಡಿದ ಬಳಿಕ ರಾಜಧಾನಿ ಕೊಲಂಬೊದಲ್ಲಿ ಸೇನೆ ನಿಯೋಜಿಸಲಾಗಿದೆ.

ರಾಜೀನಾಮೆಗೂ ಮುನ್ನ ತಮ್ಮ ಬೆಂಬಲಿಗರು ಮತ್ತು ಪಕ್ಷದ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ್ದ ಮಹಿಂದಾ, ದೇಶದ ಜನತೆಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧ ಎಂದಿದ್ದರು.

ಮಧ್ಯಂತರ ಸರ್ಕಾರ ರಚನೆ ಮಾಡಬೇಕೆಂಬ ಒತ್ತಡ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಮೇಲೆ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಮಧ್ಯಂತರ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡಲು ಪ್ರಧಾನಿ ಮಹಿಂದಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂಬ ವರದಿಗಳ ಬಳಿಕ ಹಿಂಸಾಚಾರ ಭುಗಿಲೆದ್ದಿತ್ತು.

ಜನತೆ ಹಿಂಸಾಚಾರಕ್ಕೆ ಇಳಿಯದೆ ಶಾಂತಿ ಕಾಪಾಡಿಕೊಳ್ಳಬೇಕು. ಜೊತೆಗೆ ಹಿಂಸೆಯಿಂದ ಮತ್ತಷ್ಟು ಹಿಂಸೆಯೇ ಹೆಚ್ಚಾಗುತ್ತದೆ ಎಂದು ಗೊಟಬಯ ರಾಜಪಕ್ಸ ಮತ್ತು ಮಹಿಂದಾ ರಾಜಪಕ್ಸ ಅವರು ದೇಶದ ಜನತೆಗೆ ಕರೆ ನೀಡಿದ್ದಾರೆ.





ಪ್ರತಿಭಟನಾಕಾರರು ಶ್ರೀಲಂಕಾ ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಅವರ ಅಧಿಕೃತ ನಿವಾಸದ ಬಳಿ ವಾಹನಗಳಿಗೆ ಬೆಂಕಿ ಹಚ್ಚಿದರು (ಎಡಚಿತ್ರ) –ಎಎಫ್‌ಪಿ ಚಿತ್ರ. ಸರ್ಕಾರದ ಬೆಂಬಲಿಗರು ಮತ್ತು ಪ್ರತಿಭಟನಕಾರರ ನಡುವಿನ ಗಲಭೆಯಲ್ಲಿ ಗಾಯಗೊಂಡ ವ್ಯಕ್ತಿಯನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲಾಯಿತು –ಪಿಟಿಐ ಚಿತ್ರ

ಸಂಸದ ಸೇರಿದಂತೆ ಐವರ ಸಾವು

ಕೊಲಂಬೊ(ಎಎಫ್‌ಪಿ): ಶ್ರೀಲಂಕಾದಲ್ಲಿ ಸೋಮವಾರ ಸರ್ಕಾರದ ಪರ ಮತ್ತು ವಿರೋಧಿ ಹಿಂಸಾಚಾರ ಪ್ರತಿಭಟನೆಗಳಲ್ಲಿ ಆಡಳಿತಾರೂಢ ಸಂಸದ ಸೇರಿದಂತೆ ಐವರು ಮೃತಪಟ್ಟಿದ್ದಾರೆ. ಸುಮಾರು 200 ಮಂದಿ ಗಾಯಗೊಂಡಿದ್ದು 181 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಪೊಲನ್ನರುವಾ ಜಿಲ್ಲೆಯ ವೀರಕೇತಿಯಾ ಪಟ್ಟಣದಲ್ಲಿ ಸೋಮವಾರ ಸರ್ಕಾರಿ ವಿರೋಧಿ ಗುಂಪುಗಳು ಕಾರಿನಲ್ಲಿ ತೆರಳುತ್ತಿದ್ದ ಎಸ್‌ಎಲ್‌ಪಿಪಿ ಸಂಸದ ಅಮರಕೀರ್ತಿ ಅತುಲಕೊರಲಾ(57) ಅವರ ಕಾರನ್ನು ಸುತ್ತುವರಿದವು. ಈ ವೇಳೆ ಎಸ್‌ಯುವಿ ಕಾರಿನಿಂದ ಗುಂಡು ಹಾರಿದ ಸದ್ದು ಕೇಳಿತು. ಆಕ್ರೋಶಗೊಂಡ ಪ್ರತಿಭಟನಕಾರರು ಕಾರನ್ನು ಪಲ್ಟಿ ಮಾಡಿದರು. ಕಾರಿನಿಂದ ತಪ್ಪಿಸಿಕೊಂಡ ಸಂಸದ ಸಮೀಪದ ಕಟ್ಟಡವೊಂದಕ್ಕೆ ತೆರಳಿ ಅವಿತುಕೊಂಡಿದ್ದರು. ಸಾವಿರಾರು ಪ್ರತಿಭಟನಕಾರರು ಕಟ್ಟಡವನ್ನು ಸುತ್ತುವರಿದಾಗ ಸಂಸದ ಇಬ್ಬರ ಮೇಲೆ ಗುಂಡು ಹಾರಿಸಿದರು. ಈ ವೇಳೆ 27 ವರ್ಷದ ವ್ಯಕ್ತಿ ಮೃತಪಟ್ಟಿದ್ದಾರೆ. ಬಳಿಕ ಸಂಸದರು ತಾವೇ ಗುಂಡು ಹಾರಿಸಿಕೊಂಡಿದ್ದಾರೆ.

ಇದೇ ವೇಳೆ ಆಡಳಿತ ಪಕ್ಷದ ರಾಜಕಾರಣಿಯೊಬ್ಬರು ಸರ್ಕಾರದ ವಿರೋಧ ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಿದ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ.

ಮನೆಗೆ ಬೆಂಕಿ

ಮಹಿಂದಾ ರಾಜಪಕ್ಸ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬೆನ್ನಲ್ಲೇ ಸರ್ಕಾರದ ವಿರೋಧಿ ಪ್ರತಿಭಟನಕಾರರು ಹಂಬನ್‌ತೋಟದಲ್ಲಿನ ರಾಜಪಕ್ಸ ಅವರ ಪೂರ್ವಜರ ಮನೆಗೆ ಬೆಂಕಿ ಹಚ್ಚಿದ್ದಾರೆ. ಬಳಿಕ ಪ್ರತಿಭಟನಕಾರರು ಹಲವು ಸಚಿವರು, ಆಡಳಿತ ಪಕ್ಷದ ಸಂಸದರ ಆಸ್ತಿಗಳನ್ನು ನಾಶಪಡಿಸಿದ್ದಾರೆ.

‘ರೈತರನ್ನು ಪ್ರಚೋದಿಸದಿದ್ದರೆ ಲಖಿಂಪುರ ಹಿಂಸಾಚಾರ ನಡೆಯುತ್ತಿರಲಿಲ್ಲ’

ಪ್ರಜಾವಾಣಿ ವಾರ್ತೆ

ಲಖನೌ: ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಕುಮಾರ್ ಮಿಶ್ರಾ ಅವರು ರೈತರ ವಿರುದ್ಧ ಪ್ರಚೋದನಕಾರಿ ಭಾಷೆ ಬಳಸದಿದ್ದರೆ ಲಖಿಂಪುರ ಖೇರಿ ಹಿಂಸಾಚಾರ ನಡೆಯುತ್ತಿರಲಿಲ್ಲ ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠ ಸೋಮವಾರ ಹೇಳಿದೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಲಖಿಂಪುರ ಖೇರಿಯಲ್ಲಿ ನಡೆದ ಹಿಂಸಾಚಾರದಲ್ಲಿ ನಾಲ್ವರು ರೈತರು ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಸಚಿವ ಅಜಯ್ ಕುಮಾರ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಪ್ರಮುಖ ಆರೋಪಿಯಾಗಿದ್ದಾರೆ.

ಪ್ರಕರಣದ ನಾಲ್ವರು ಆರೋಪಿಗಳಾದ ಅಂಕಿತ್ ದಾಸ್, ಲುವ್‌ಕುಶ್, ಸುಮಿತ್ ಜೈಸ್ವಾಲ್ ಮತ್ತು ಶಿಶುಪಾಲ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿ ಡಿ.ಕೆ. ಸಿಂಗ್ ಅವರಿದ್ದ ನ್ಯಾಯಪೀಠವು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು. ಆಶಿಶ್ ಮಿಶ್ರಾ ಅವರ ಜಾಮೀನು ಅರ್ಜಿಯನ್ನು ಸೋಮವಾರ ಕೈಗೆತ್ತಿಕೊಳ್ಳಲಾಗಲಿಲ್ಲ. ಮೇ 25 ರಂದು ಈ ಅರ್ಜಿಯ ವಿಚಾರಣೆ ನಡೆಯಲಿದೆ.

ಇದೇ ಫೆಬ್ರುವರಿಯಲ್ಲಿ ಲಖನೌ ಪೀಠವು ಆಶಿಶ್ ಮಿಶ್ರಾ ಅವರಿಗೆ ಜಾಮೀನು ನೀಡಿತ್ತು. ರೈತರು ಅರ್ಜಿ ಸಲ್ಲಿಸಿದ್ದರಿಂದ ಸುಪ್ರೀಂ ಕೋರ್ಟ್ ಜಾಮೀನು ರದ್ದುಗೊಳಿಸಿ ಮತ್ತೆ ವಿಚಾರಣೆ ನಡೆಸುವಂತೆ ಹೈಕೋರ್ಟ್‌ಗೆ ಸೂಚಿಸಿತ್ತು.

‘ಉನ್ನತ ಹುದ್ದೆಯಲ್ಲಿರುವ ರಾಜಕೀಯ ವ್ಯಕ್ತಿಗಳು ಸಮಾಜದಲ್ಲಿ ಉಂಟಾಗುವ ಪರಿಣಾಮಗಳನ್ನು ಪರಿಗಣಿಸಿ ಸಭ್ಯ ಭಾಷೆಯಲ್ಲಿ ಸಾರ್ವಜನಿಕ ಹೇಳಿಕೆಗಳನ್ನು ನೀಡಬೇಕು. ತಮ್ಮ ಸ್ಥಾನಮಾನ ಮತ್ತು ಉನ್ನತ ಹುದ್ದೆಯ ಘನತೆಗೆ ತಕ್ಕಂತೆ ನಡೆದುಕೊಳ್ಳಬೇಕಾಗಿರುವುದರಿಂದ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಬಾರದು’ ಎಂದೂ ನ್ಯಾಯಪೀಠ ಹೇಳಿದೆ.

ಐ.ಟಿ ನಿಯಮ ಪ್ರಶ್ನಿಸಿದ್ದ ಅರ್ಜಿ ಹೈಕೋರ್ಟ್‌ಗಳ ವಿಚಾರಣೆಗೆ ತಡೆ

ನವದೆಹಲಿ (ಪಿಟಿಐ): ಕೇಬಲ್ ಟೆಲಿವಿಷನ್ ನೆಟ್‌ವರ್ಕ್ (ತಿದ್ದುಪಡಿ) ಕಾಯ್ದೆ ಮತ್ತು ಮಾಹಿತಿ ತಂತ್ರಜ್ಞಾನ (ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳನ್ನು ಪ್ರಶ್ನಿಸಿದ್ದ ಅರ್ಜಿಗಳ ಕುರಿತು ವಿವಿಧ ಹೈಕೋರ್ಟ್‌ಗಳಲ್ಲಿನ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

ದ್ವೇಷ ಭಾಷಣ ವಿಷಯ ಪ್ರಸ್ತಾಪಿಸಿದ್ದ ಹಾಗೂ ಒಟಿಟಿ ವೇದಿಕೆಯ ನಿಯಂತ್ರಣ ಕುರಿತಂತೆ ಸಲ್ಲಿಸಲಾಗಿದ್ದ ವಿವಿಧ ಅರ್ಜಿಗಳ ವಿಚಾರಣೆಯ ವೇಳೆ ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಮತ್ತು ಎ.ಎಸ್.ಓಕಾ ಅವರಿದ್ದ ಪೀಠವು ಈ ಕುರಿತು ಆದೇಶವನ್ನು ನೀಡಿತು.

ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿ ವಿವಿಧ ಹೈಕೋರ್ಟ್‌ಗಳಲ್ಲಿರುವ ಅರ್ಜಿಗಳ ವಿಚಾರಣೆಗೆ ತಡೆಯಾಜ್ಞೆ ನೀಡಲಾಗುತ್ತಿದೆ. ಅಲ್ಲದೆ, ಈ ಪ್ರಕರಣದ ವಿಚಾರಣೆಯನ್ನು ಮೇ 19ಕ್ಕೆ ಮುಂದೂಡಲಾಗಿದೆ ಎಂದು ಪೀಠವು ತಿಳಿಸಿತು.

ಸಂಕ್ಷಿಪ್ತ ಸುದ್ದಿ

ಪಾಕ್‌ನಿಂದ ಹೆರಾಯಿನ್ ತರುತ್ತಿದ್ದ ಡ್ರೋನ್ ಧ್ವಂಸ

ಚಂಡೀಗಡ(ಪಿಟಿಐ): ಪಾಕಿಸ್ತಾನದಿಂದ ಹೆರಾಯಿನ್ ಅನ್ನು ಹೊತ್ತು ಭಾರತದತ್ತ ಬರುತ್ತಿದ್ದ ಡ್ರೋನ್ ಅನ್ನು ಗಡಿ ಭದ್ರತಾ ಪಡೆ ಪಂಜಾಬ್‌ನ ಅಮೃತಸರದಲ್ಲಿ ಹೊಡೆದುರುಳಿಸಿದೆ. ಗಡಿ ಆಚೆಯಿಂದ ನಡೆಯುತ್ತಿದ್ದ ಮಾದಕ ದ್ರವ್ಯ ಕಳ್ಳಸಾಗಣೆಯನ್ನು ತಡೆಯಲಾಗಿದ್ದು, ಡ್ರೋನ್‌ನಲ್ಲಿದ್ದ 9 ಪಾಕೆಟ್‌ಗಳಲ್ಲಿದ್ದ ಹೆರಾಯಿನ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ಬಿಎಸ್‌ಎಫ್ ತಿಳಿಸಿದೆ.

13 ಉಗ್ರರ ಶರಣಾಗತಿ

ಗುವಾಹಟಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಅಸ್ಸಾಂಗೆ ಭೇಟಿ ನೀಡುವ ಕೆಲವೇ ಗಂಟೆಗಳ ಮುನ್ನ ಇಲ್ಲಿನ ಉಗ್ರಗಾಮಿ ಸಂಘಟನೆ ಆದಿವಾಸಿ ನ್ಯಾಷನಲ್ ಲಿಬರೇಷನ್ ಆರ್ಮಿಗೆ (ಎಎಎನ್‌ಎಲ್‌ಎ) ಸೇರಿದ 13 ಉಗ್ರರು ಕರ್ಬಿ ಆಂಗ್ಲಾಂಗ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳಿಗೆ ಶಸ್ತ್ರಾಸ್ತ್ರ ಸಹಿತ ಶರಣಾಗಿದ್ದಾರೆ.

ಬೊಕಾಜಾನ್‌ನಲ್ಲಿ ಅಸ್ಸಾಂ ಪೊಲೀಸರು, ಅಸ್ಸಾಂ ರೈಫಲ್ಸ್ ಮತ್ತು ಸಿಆರ್‌ಪಿಎಫ್‌ನ 20ನೇ ಬೆಟಾಲಿಯನ್ ಸಿಬ್ಬಂದಿ ಮುಂದೆ ಶರಣಾಗಿರುವ ಉಗ್ರರು ಮುಖ್ಯವಾಹಿನಿಗೆ ಸೇರುವುದಾಗಿ ಪ್ರತಿಜ್ಞೆ ಮಾಡಿದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಅಸ್ಸಾಂನಲ್ಲಿ ಮೂರು ದಿನಗಳ ಕಾಲ ಪ್ರವಾಸ ಕೈಗೊಂಡಿರುವ ಅಮಿತ್ ಶಾ ಅವರು ಬಾಂಗ್ಲಾದೇಶದ ಗಡಿಯಲ್ಲಿರುವ ಮಂಕಾಚಾರ್‌ನ ಬಿಎಸ್‌ಎಫ್ ಗಡಿಯ ಹೊರಠಾಣೆಗೆ ಭೇಟಿ ನೀಡಲಿದ್ದಾರೆ.

ಈ ಸಂಘಟನೆಯ ಕರ್ಬಿ ಆಂಗ್ಲಾಂಗ್ ಮತ್ತು ಗೋಲಾಘಾಟ್ ಜಿಲ್ಲೆಗಳಲ್ಲಿ ನೆಲೆಯೂರಿದೆ ಎನ್ನಲಾಗಿದೆ.

ಪಿಎಂ-ವಾಣಿ ಯೋಜನೆಗೆ ಚಾಲನೆ

ನವದೆಹಲಿ(ಪಿಟಿಐ): ದೇಶದ 100 ರೈಲು ನಿಲ್ದಾಣಗಳಲ್ಲಿ ಸಾರ್ವಜನಿಕ ವೈಫೈ ಸೇವೆಗಳನ್ನು ನೀಡುವ ಪ್ರಧಾನಿ ವೈಫೈ ಆ್ಯಕ್ಸಸ್ ನೆಟ್‌ವರ್ಕ್ ಇಂಟರ್‌ಫೇಸ್(ಪಿಎಂ-ವಾಣಿ) ಯೋಜನೆಗೆ ಸೋಮವಾರ ರೈಲ್‌ಟೆಲ್ ಚಾಲನೆ ನೀಡಿದೆ. 2022ರ ಜೂನ್ ಅಂತ್ಯದ ವೇಳೆಗೆ ದೇಶದ 6102 ರೈಲು ನಿಲ್ದಾಣಗಳಲ್ಲಿ ಪಿಎಂ-ವಾಣಿ ವೈಫೈ ಸೇವೆಗಳನ್ನು ವಿಸ್ತರಿಸಲಾಗುತ್ತದೆ.

ಸ್ಪೈಸ್‌ಜೆಟ್ ವಿಮಾನಕ್ಕೆ ಹಕ್ಕಿ ಡಿಕ್ಕಿ

ನವದೆಹಲಿ: ಬೆಳಗಾವಿಯಿಂದ ದೆಹಲಿಗೆ ಹೊರಟಿದ್ದ ಸ್ಪೈಸ್‌ಜೆಟ್ ವಿಮಾನವೊಂದಕ್ಕೆ ಸೋಮವಾರ ಹಕ್ಕಿ ಡಿಕ್ಕಿ ಹೊಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನವು ಬಳಿಕ ದೆಹಲಿಯ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಕೆಳಗಿಳಿದಿದೆ. ಇದರಲ್ಲಿ 187 ಮಂದಿ ಪ್ರಯಾಣಿಕರಿದ್ದರು ಎಂದು ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಗಾವಿಯ ವಿಮಾನ ನಿಲ್ದಾಣದಲ್ಲಿ ಸ್ಪೈಸ್‌ಜೆಟ್‌ನ ಬೋಯಿಂಗ್ 737-8 ಮ್ಯಾಕ್ಸ್ ವಿಮಾನಕ್ಕೆ ಹಕ್ಕಿ ಡಿಕ್ಕಿ ಹೊಡೆದಿದೆ. ಈ ಕುರಿತು ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ.

ಹಿಂದಿ ಹೇರಿಕೆ: ‘ಜಿಪ್‌ಮರ್’ ವಿರುದ್ಧ ಡಿಎಂಕೆ ಪ್ರತಿಭಟನೆ

ಪುದುಚೇರಿ (ಪಿಟಿಐ): ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿನ ಜವಾಹರ್‌ಲಾಲ್ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರದಲ್ಲಿ (ಜಿಪ್‌ಮರ್) ಹಿಂದಿ ಹೇರಿಕೆಯ ಯತ್ನ ನಡೆದಿದೆ ಎಂದು ಆರೋಪಿಸಿ ವಿರೋಧ ಪಕ್ಷ ಡಿಎಂಕೆ ಸೋಮವಾರ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯ ಹಿಂದೆಯೇ ಸಂಸ್ಥೆಯ ಸಿಬ್ಬಂದಿ ಜೊತೆಗೆ ಚರ್ಚೆ ನಡೆಸಿರುವ ಲೆಫ್ಟಿನೆಂಟ್ ಗವರ್ನರ್ ತಮಿಳುಸೈ ಸೌಂದರರಾಜನ್ ಅವರು, ‘ಹಿಂದಿ ಭಾಷೆ ಹೇರಿಕೆಗೆ ಯತ್ನ ನಡೆಸಿಲ್ಲ. ಪ್ರಾದೇಶಿಕ ಭಾಷೆ ತಮಿಳಿಗೇ ಇಲ್ಲಿ ಆದ್ಯತೆಯನ್ನು ನೀಡಲಾಗುತ್ತಿದೆ’ ಎಂದು ಸ್ಪಷ್ಟಪಡಿಸಿದರು.

ಉಕ್ರೇನ್ ಆಕ್ರಮಣ: ರಷ್ಯಾ ಅಧ್ಯಕ್ಷ ಪುಟಿನ್ ಸಮರ್ಥನೆ

ಮಾಸ್ಕೊ (ಎಎಫ್‌ಪಿ): ಉಕ್ರೇನ್ ಮೇಲಿನ ಸೇನಾ ಕಾರ್ಯಾಚರಣೆಯನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಸೋಮವಾರ ಸಮರ್ಥಿಸಿಕೊಂಡರು.

ನಾಜಿ ಜರ್ಮನಿಯನ್ನು ಸೋಲಿಸಿದ ಸೋವಿಯತ್ ವಿಜಯದ 77ನೇ ವಾರ್ಷಿಕೋತ್ಸವ ಅಂಗವಾಗಿ ಇಲ್ಲಿನ ರೆಡ್ ಸ್ಕ್ವೇರ್‌ನಲ್ಲಿ ನಡೆದ ಸೇನಾ ಪರೇಡ್ ವೀಕ್ಷಿಸಿ, ಅವರು ಮಾತನಾಡಿದರು. ಈ ವೇಳೆ ಅವರು ಯಾವುದೇ ಪ್ರಮುಖ ಘೋಷಣೆಗಳನ್ನು ಪ್ರಕಟಿಸಲಿಲ್ಲ.

ಉಕ್ರೇನ್ ಮತ್ತು ಪಶ್ಚಿಮದ ರಾಷ್ಟ್ರಗಳ ವಿರುದ್ಧ ವಾಗ್ದಾಳಿ ನಡೆಸಿದ ಪುಟಿನ್, ‘ಉಕ್ರೇನ್ ಮತ್ತು ಅದರ ಪಾಶ್ಚಾತ್ಯ ಮಿತ್ರ ರಾಷ್ಟ್ರಗಳು, ರಷ್ಯಾ ಭಾಷಿಗರಿರುವ ಡಾನ್‌ಬಾಸ್ ಮತ್ತು 2014ರಲ್ಲಿ ಮಾಸ್ಕೊ ಸ್ವಾಧೀನಕ್ಕೆ ಪಡೆದ ಕ್ರಿಮಿಯಾ ಸೇರಿ ನಮ್ಮ ಐತಿಹಾಸಿಕ ಭೂಮಿಯನ್ನು ಆಕ್ರಮಿಸುವ ತಯಾರಿಯಲ್ಲಿದ್ದವು. ಅದನ್ನು ತಡೆಯಲು ಉಕ್ರೇನಿನಲ್ಲಿ ವಿಶೇಷ ಸೇನಾ ಕಾರ್ಯಾಚರಣೆ ಆರಂಭಿಸಬೇಕಾಯಿತು’ ಎಂದು ತಿಳಿಸಿದರು.

‘ಕೀವ್ ಆಡಳಿತಗಾರರು ನವ ನಾಜಿಗಳು’ ಎಂದು ಮತ್ತೊಮ್ಮೆ ದೂಷಿಸಿದ ಪುಟಿನ್, ‘ಉಕ್ರೇನ್‌ನಲ್ಲಿನ ನಮ್ಮ ಪಡೆಗಳ ಹೋರಾಟವನ್ನು ರಷ್ಯಾದ ಜನತೆ ಮಹಾನ್ ದೇಶಭಕ್ತಿಯ ಯುದ್ಧವೆಂದು ಪರಿಗಣಿಸಿದ್ದಾರೆ. ರಷ್ಯನ್ನರು ದೇಶ ಮತ್ತು ಸಾಂಪ್ರದಾಯಿಕ ಮೌಲ್ಯಗಳ ಮೇಲಿನ ಪ್ರೀತಿಯನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ’ ಎಂದರು.

‘ಉಕ್ರೇನ್‌ಗೆ ನ್ಯಾಟೊ ಶಸ್ತ್ರಾಸ್ತ್ರಗಳ ಪೂರೈಕೆ ಮತ್ತು ವಿದೇಶಿ ಸಲಹೆಗಾರರ ನಿಯೋಜನೆ, ನಮ್ಮ ಗಡಿಗಳಲ್ಲಿ ನಮಗೆ ನೇರ ಬೆದರಿಕೆಯನ್ನು ಖಂಡಿತವಾಗಿಯೂ ಸಹಿಸಲಾಗದು. ಬಲಿಷ್ಠ ಮತ್ತು ಸ್ವತಂತ್ರ ದೇಶದ ಸಾರ್ವಭೌಮತೆಗಾಗಿ, ಉಕ್ರೇನ್ ಅನ್ನು ನಿಶ್ಯಸ್ತ್ರಗೊಳಿಸುವುದನ್ನು ಬಿಟ್ಟು ರಷ್ಯಾಕ್ಕೆ ಬೇರೆ ದಾರಿಯೇ ಇರಲಿಲ್ಲ’ ಎಂದು ಸಮಜಾಯಿಷಿ ನೀಡಿದರು.

ಸೇನಾ ಪಡೆಗಳನ್ನು ಉದ್ದೇಶಿಸಿ, ‘ಇಂದಿನ ಪರೇಡ್‌ನಲ್ಲಿ ಭಾಗವಹಿಸಿರುವ ಕೆಲವು ಪಡೆಗಳು ಉಕ್ರೇನ್‌ನಲ್ಲಿನ ಕಾರ್ಯಾಚರಣೆಯ ಮುಂಚೂಣಿಯಿಂದ ನೇರವಾಗಿ ಬಂದಿವೆ. ಮಾತೃಭೂಮಿಗಾಗಿ, ಅದರ ಭವಿಷ್ಯಕ್ಕಾಗಿ ನೀವು ಹೋರಾಡುತ್ತಿದ್ದೀರಿ. ಈ ಸಂಘರ್ಷ ಎರಡನೇ ಮಹಾಯುದ್ಧದ ಮುಂದುವರಿದ ಭಾಗ. ಆ ಯುದ್ಧದಿಂದ ಕಲಿತ ಪಾಠವನ್ನು ಯಾರೂ ಮರೆಯುವುದಿಲ್ಲ’ ಎಂದು ಸೈನಿಕರನ್ನು ಹುರಿದುಂಬಿಸಿದರು.

‘ರಷ್ಯಾ ಸಂಘರ್ಷ ವಿಸ್ತರಿಸಲು ನೋಡುತ್ತಿಲ್ಲ. ವಿಶ್ವ ಸಮರದ ಭೀಕರತೆ ಸಂಭವಿಸದಂತೆ ತಡೆಯುವುದು ಮುಖ್ಯ’ ಎಂದು ಪುಟಿನ್ ಒತ್ತಿ ಹೇಳಿದರು.

‘ಹುತಾತ್ಮ ಸೈನಿಕರ ಕುಟುಂಬಗಳಿಗೆ ಭರಿಸಲಾಗದ ನಷ್ಟವಾಗಿದೆ. ಹುತಾತ್ಮ ಸೈನಿಕರ ಕುಟುಂಬಕ್ಕೆ ಸರ್ಕಾರ ಎಲ್ಲ ರೀತಿಯ ಬೆಂಬಲ ನೀಡಲಿದೆ’ ಎಂದು ವಾಗ್ದಾನ ಮಾಡಿದರು.

11 ಸಾವಿರ ಸೈನಿಕರು, 130ಕ್ಕೂ ಹೆಚ್ಚು ಸೇನಾ ವಾಹನಗಳೊಂದಿಗೆ ಪರೇಡ್ ನಡೆಯಿತು. ಹವಾಮಾನ ವೈಪರೀತ್ಯದಿಂದಾಗಿ ವಾಯುಪಡೆಯ ವೈಮಾನಿಕ ಕವಾಯತು ರದ್ದುಗೊಳಿಸಲಾಯಿತು.

ಆಳ್ವಾಸ್ ಸಮಗ್ರ ಚಾಂಪಿಯನ್

ರಾಜ್ಯ ಅಥ್ಲೆಟಿಕ್ಸ್: 20 ವರ್ಷದೊಳಗಿನವರ ವಿಭಾಗದಲ್ಲಿ ಡಿವೈಇಎಸ್ ಪಾರಮ್ಯ

ಪ್ರಜಾವಾಣಿ ವಾರ್ತೆ



ಉಡುಪಿಯ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯಗೊಂಡ ರಾಜ್ಯ ಸೀನಿಯರ್ ಹಾಗೂ 20 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್ ಸಮಗ್ರ ಚಾಂಪಿಯನ್ ಪಟ್ಟ ಅಲಂಕರಿಸಿತು.

ಉಡುಪಿ: ಇಲ್ಲಿನ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯಗೊಂಡ ರಾಜ್ಯ ಹಿರಿಯರ ಹಾಗೂ 20 ವರ್ಷದೊಳಗಿನವರ ಅಥ್ಲೆಟಿಕ್ ಕೂಟದಲ್ಲಿ 93 ಪಾಯಿಂಟ್‌ಗಳೊಂದಿಗೆ ಮೂಡುಬಿದಿರೆಯ ಆಳ್ವಾಸ್ ಸ್ಪೋರ್ಟ್ಸ್ ಕ್ಲಬ್ ಸಮಗ್ರ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ಸೀನಿಯರ್ ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆದ ತಂಡ 20 ವರ್ಷದೊಳಗಿನವರ ಮಹಿಳೆಯರ ವಿಭಾಗದಲ್ಲೂ ಅಗ್ರಸ್ಥಾನ ಗಳಿಸಿತು. 20 ವರ್ಷದೊಳಗಿನವರ ಪುರುಷರ ವಿಭಾಗದ ಚಾಂಪಿಯನ್ ಪಟ್ಟ ಬೆಂಗಳೂರಿನ ಡಿವೈಇಎಸ್ ಪಾಲಾಯಿತು. ಆಳ್ವಾಸ್‌ನ ಮಿಜೊ ಚಾಕೊ ಕುರಿಯನ್ 1040 ಪಾಯಿಂಟ್‌ಗಳೊಂದಿಗೆ ಪುರುಷರ ವಿಭಾಗದ ಉತ್ತಮ ಅಥ್ಲೀಟ್ ಎನಿಸಿಕೊಂಡರು. ಮಹಿಳೆಯರ ವಿಭಾಗದಲ್ಲಿ ಆಳ್ವಾಸ್‌ನ ಲಿಕಿತಾ 1081 ಪಾಯಿಂಟ್ ಗಳಿಸಿ ಉತ್ತಮ ಅಥ್ಲೀಟ್ ಪ್ರಶಸ್ತಿ ಪಡೆದುಕೊಂಡರು. ಬೆಂಗಳೂರು ಸಾಯ್‌ನ ಡಿ.ಎಚ್.ರಿಹಾನ್ (1047 ಪಾ.) 20 ವರ್ಷದೊಳಗಿನವರ ಪುರುಷರ ವಿಭಾಗದ, ದಕ್ಷಿಣ ಕನ್ನಡ ಜಿಲ್ಲೆಯ ವಿ.ವರ್ಷಾ (995) ಮಹಿಳೆಯರಲ್ಲಿ ಉತ್ತಮ ಅಥ್ಲೀಟ್ ಎನಿಸಿಕೊಂಡರು.

ಪ್ರಶಸ್ತಿಗೆ ಹನುಮಾನ್ ಬ್ಲೆಸಿಂಗ್, ಆರ್ಟಿಲರಿ ಸೆಣಸಾಟ

ಅಂತರರಾಜ್ಯ ಆಹ್ವಾನಿತ ಹಾಕಿ: ಸಡನ್ ಡೆತ್‌ನಲ್ಲಿ ಕೊನೆಗೊಂಡ ಪಂದ್ಯಗಳು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರೋಚಕ ಅಂತ್ಯ ಕಂಡ ಸೆಮಿಫೈನಲ್ ಪಂದ್ಯಗಳಲ್ಲಿ ಸಡನ್ ಡೆತ್ ಮೂಲಕ ಜಯ ಸಾಧಿಸಿದ ಗದಗ ಹನುಮಾನ್ ಬ್ಲೆಸಿಂಗ್ ಮತ್ತು ಹೈದರಾಬಾದ್‌ನ ಆರ್ಟಿಲರಿ ಸೆಂಟರ್ ತಂಡಗಳು ಯಂಗ್ ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ಆಯೋಜಿಸಿರುವ ಅಖಿಲ ಭಾರತ ಆಹ್ವಾನಿತ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಸೆಟ್ಲ್‌ಮೆಂಟ್ ಅಂಗಣದಲ್ಲಿ ಸೋಮವಾರ ನಡೆದ ಎರಡೂ ಪಂದ್ಯಗಳು ಶೂಟೌಟ್ ಮತ್ತು ಸಡನ್ ಡೆತ್‌ನಲ್ಲಿ ಕೊನೆಗೊಂಡವು. ಮೊದಲ ಪಂದ್ಯದಲ್ಲಿ ಹನುಮಾನ್ ಬ್ಲೆಸಿಂಗ್ ತಂಡ ನೈರುತ್ಯ ರೈಲ್ವೆಯನ್ನು ಮಣಿಸಿತು. ಮತ್ತೊಂದು ಹಣಾಹಣಿಯಲ್ಲಿ ಆರ್ಟಿಲರಿ, ಕೊಲ್ಹಾಪುರ ಪೊಲೀಸ್ ವಿರುದ್ಧ ಜಯ ಗಳಿಸಿತು.

ಹನುಮಾನ್ ಬ್ಲೆಸಿಂಗ್ ಮತ್ತು ನೈರುತ್ಯ ರೈಲ್ವೆ ತಂಡಗಳ ನಡುವಿನ ಪಂದ್ಯದ ನಿಗದಿತ ಅವಧಿಯಲ್ಲಿ ಗೋಲು ದಾಖಲಾಗಲಿಲ್ಲ. ಪೆನಾಲ್ಟಿ ಶೂಟೌಟ್‌ನಲ್ಲಿ ಎರಡೂ ತಂಡಗಳು ತಲಾ ಎರಡು ಗೋಲು ಗಳಿಸಿದವು. ಸಡನ್ ಡೆತ್‌ನಲ್ಲಿ ಹರೀಶ್ ಮುತಗಾರ ಅವರು ಹನುಮಾನ್ ಬ್ಲೆಸಿಂಗ್‌ಗೆ ಯಶಸ್ಸು ತಂದುಕೊಟ್ಟರು.

2ನೇ ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಎರಡು ಗೋಲು ಗಳಿಸಿದ್ದವು. ಪೆನಾಲ್ಟಿ ಶೂಟೌಟ್ ಮುಕ್ತಾಯಕ್ಕೆ ಸ್ಕೋರು 4–4ರಲ್ಲಿ ಸಮ ಆಯಿತು. ಸಡನ್ ಡೆತ್‌ನಲ್ಲಿ ಹೈದರಾಬಾದ್ ತಂಡ ಮೇಲುಗೈ ಸಾಧಿಸಿತು. ಫೈನಲ್ ಪಂದ್ಯ ಮಂಗಳವಾರ ಬೆಳಿಗ್ಗೆ ನಡೆಯಲಿದೆ.

ರೆಫರಿ ಮೇಲೆ ‘ಪೊಲೀಸರ’ ಹಲ್ಲೆ

ಸೆಮಿಫೈನಲ್ ಪಂದ್ಯದ ಸಂದರ್ಭದಲ್ಲಿ ಕೊಲ್ಹಾಪುರ ಪೊಲೀಸ್ ತಂಡದವರು ರೆಫರಿ ಶ್ರೇಯಸ್ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿ ಹಲ್ಲೆ ಮಾಡಿದ ಘಟನೆ ನಡೆದಿದೆ. ನಿಗದಿತ ಅವಧಿಯ ಕೊನೆಯ ನಿಮಿಷದಲ್ಲಿ ಹೈದರಾಬಾದ್ ತಂಡಕ್ಕೆ ರೆಫರಿ, ಪೆನಾಲ್ಟಿ ಕಾರ್ನರ್ ನೀಡಿದ್ದರು. ಇದನ್ನು ಪ್ರಶ್ನಿಸಿದ ಕೊಲ್ಹಾಪುರ ತಂಡದ ಆಟಗಾರರು ಹಲ್ಲೆ ಮಾಡಿದ್ದಾರೆ. ಮೂರನೇ ಸ್ಥಾನಕ್ಕಾಗಿ ನೈರುತ್ಯ ರೈಲ್ವೆ ಮತ್ತು ಕೊಲ್ಹಾಪುರ ತಂಡಗಳು ಮುಖಾಮುಖಿಯಾಗಬೇಕಾಗಿತ್ತು. ಆದರೆ ಪಂದ್ಯ ರದ್ದುಪಡಿಸಿ ರೈಲ್ವೆ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು.

‘ಕೊಲ್ಹಾಪುರ ತಂಡದ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಹಾಕಿ ಕರ್ನಾಟಕದ ಮೂಲಕ ಹಾಕಿ ಇಂಡಿಯಾಗೆ ಮನವಿ ಮಾಡಲಾಗುವುದು. ಹಾಕಿ ಇಂಡಿಯಾಗೆ ದೂರು ನೀಡುವುದಾಗಿ ರೆಫರಿಯೂ ತಿಳಿಸಿದ್ದಾರೆ’ ಎಂದು ಯಂಗ್‌ಸ್ಟಾರ್ ಸ್ಪೋರ್ಟ್ಸ್ ಕ್ಲಬ್ ಕಾರ್ಯದರ್ಶಿ ಚಂದ್ರಶೇಖರ ಗೋಕಾಕ ತಿಳಿಸಿದರು.

ಹಾಕಿ: ಭಾರತ ತಂಡದಲ್ಲಿ ಸುನಿಲ್‌ಗೆ ಅವಕಾಶ


ಎಸ್‌.ವಿ.ಸುನಿಲ್

ನವದೆಹಲಿ (ಪಿಟಿಐ): ಕನ್ನಡಿಗ, ಫಾರ್ವರ್ಡ್ ಆಟಗಾರ ಎಸ್.ವಿ. ಸುನಿಲ್ ಅವರು ಏಷ್ಯಾಕಪ್ ಟೂರ್ನಿಗೆ ಭಾರತ ಹಾಕಿ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಜಕಾರ್ತದಲ್ಲಿ ಇದೇ 23ರಿಂದ ನಿಗದಿಯಾಗಿರುವ ಟೂರ್ನಿಗೆ 20 ಆಟಗಾರರ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ರೂಪಿಂದರ್ ಪಾಲ್ ಅವರಿಗೆ ನಾಯಕತ್ವ ವಹಿಸಲಾಗಿದೆ.

ಜೂನ್ 1ರವರೆಗೆ ನಡೆಯುವ ಟೂರ್ನಿಯು ವಿಶ್ವಕಪ್‌ಗೆ ಅರ್ಹತಾ ಸ್ಪರ್ಧೆಯಾಗಿದೆ. ಅನುಭವಿ ಆಟಗಾರರಾದ ಮನ್‌ಪ್ರೀತ್ ಸಿಂಗ್, ಪಿ.ಆರ್.ಶ್ರೀಜೇಶ್ ಮತ್ತು ಹರ್ಮನ್‌ಪ್ರೀತ್ ಸಿಂಗ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.ಶೇಷೇಗೌಡ ಬಿ.ಎಂ, ಯಶದೀಪ್ ಸಿವಾಚ್, ಅಭಿಷೇಕ್ ಲಾಕ್ರಾ, ಮಂಜೀತ್, ವಿಷ್ಣುಕಾಂತ್ ಸಿಂಗ್, ಉತ್ತಮ್ ಸಿಂಗ್, ಮರೀಶ್ವರನ್ ಶಕ್ತಿವೇಲ್, ಪವನ್ ರಾಜಭರ್, ಅಭರಣ್ ಸುದೇವ್ ಮತ್ತು ಎಸ್.ಕಾರ್ತಿ ತಂಡದಲ್ಲಿರುವ ಹೊಸ ಮುಖಗಳಾಗಿವೆ.

ತಂಡ: ಗೋಲ್‌ಕೀಪರ್‌ಗಳು: ಪಂಕಜ್ ರಾಜಕ್, ಸೂರಜ್ ಕರ್ಕೇರ

ಡಿಫೆಂಡರ್ಸ್: ರೂಪಿಂದರ್ ಪಾಲ್ ಸಿಂಗ್ (ನಾಯಕ), ಯಶದೀಪ್ ಸಿವಾಚ್, ಅಭಿಷೇಕ್ ಲಾಕ್ರಾ, ಬೀರೇಂದ್ರ ಲಾಕ್ರಾ (ಉಪ ನಾಯಕ), ಮಂಜೀತ್, ದೀಪ್ ಸನ್ ಟಿರ್ಕಿ.

ಮಿಡ್‌ಫೀಲ್ಡರ್ಸ್: ವಿಷ್ಣುಕಾಂತ್ ಸಿಂಗ್, ರಾಜ್ ಕುಮಾರ್ ಪಾಲ್, ಮರೀಶ್ವರನ್ ಶಕ್ತಿವೇಲ್, ಶೇಷೇಗೌಡ ಬಿ.ಎಂ, ಸಿಮ್ರನ್ ಜೀತ್ ಸಿಂಗ್.

ಫಾರ್ವರ್ಡ್ಸ್ ಆಟಗಾರರು: ಪವನ್ ರಾಜಭರ್, ಅಭರಣ್ ಸುದೇವ್, ಎಸ್.ವಿ. ಸುನೀಲ್, ಉತ್ತಮ್ ಸಿಂಗ್, ಎಸ್. ಕಾರ್ತಿ. ಬದಲಿ ಆಟಗಾರರು: ಮಣಿಂದರ್ ಸಿಂಗ್, ನೀಲಮ್ ಸಂಜೀಪ್ ಕ್ಸೆಸ್.



ಮಿಯಾಮಿ ಗಾರ್ಡನ್ಸ್‌ನಲ್ಲಿ ಭಾನುವಾರ ನಡೆದ ಮಿಯಾಮಿ ಗ್ರ್ಯಾನ್‌ಪ್ರಿ ರೇಸ್‌ನಲ್ಲಿ ಪ್ರಶಸ್ತಿ ಗೆದ್ದ ರೆಡ್ ಬುಲ್ ತಂಡದ ನೆದರ್ಲೆಂಡ್ಸ್ ಚಾಲಕ ಮ್ಯಾಕ್ಸ್ ವರ್ಸ್ಟಾಪನ್ ಸಂಭ್ರಮಿಸಿದ ಪರಿ. ಮೊನ್ಯಾಕೊದ ಚಾರ್ಲ್ಸ್ ಲೆಕ್ಲರ್ಕ್ ಅವರನ್ನು ಹಿಂದಿಕ್ಕಿ ಮೊದಲಿಗರಾದ ಮ್ಯಾಕ್ಸ್ ಈ ಋತುವಿನ ಐದು ರೇಸ್‌ಗಳಲ್ಲಿ ಮೂರನ್ನು ಗೆದ್ದುಕೊಂಡರು. ಚಾರ್ಲ್ಸ್ ಅವರಿಗಿಂತ ಮ್ಯಾಕ್ಸ್ ಒಟ್ಟಾರೆ 19 ಪಾಯಿಂಟ್‌ಗಳ ಹಿನ್ನಡೆಯಲ್ಲಿದ್ದಾರೆ –ಎಎಫ್‌ಪಿ ಚಿತ್ರ

ರ‍್ಯಾಂಕಿಂಗ್: ಅಲ್ಕರಾಸ್, ಜಬೆವುರ್‌ಗೆ ಬಡ್ತಿ


ಮ್ಯಾಡ್ರಿಡ್ ಓಪನ್ ಪ್ರಶಸ್ತಿಯೊಂದಿಗೆ ಕಾರ್ಲೋಸ್ ಅಲ್ಕರಾಸ್ –ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಎಫ್‌ಪಿ): ಸ್ಪೇನ್‌ನ ಯುವ ಆಟಗಾರ ಕಾರ್ಲೋಸ್ ಅಲ್ಕರಾಸ್ ಮತ್ತು ಟುನೀಷಿಯಾದ ಆನ್ಸ್ ಜಬೆವುರ್ ಅವರು ಟೆನಿಸ್ ರ‍್ಯಾಂಕಿಂಗ್‌ನಲ್ಲಿ ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಪುರುಷರ ವಿಭಾಗದಲ್ಲಿ ಅಲ್ಕರಾಸ್ ಮೂರು ಸ್ಥಾನಗಳ ಏರಿಕೆಯೊಂದಿಗೆ ಆರನೇ ಸ್ಥಾನ ಗಳಿಸಿದ್ದು ಜಬೆವುರ್ ಏಳನೇ ಸ್ಥಾನಕ್ಕೇರಿದ್ದಾರೆ. ಇವರಿಬ್ಬರೂ ಭಾನುವಾರ ಮುಕ್ತಾಯಗೊಂಡ ಮ್ಯಾಡ್ರಿಡ್ ಓಪನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿದ್ದರು.

ಭಾನುವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ 19 ವರ್ಷದ ಅಲ್ಕರಾಸ್ 6-3, 6-1ರಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ವಿರುದ್ಧ ಜಯ ಗಳಿಸಿದ್ದರು. ಇದು ಈ ವರ್ಷ ಅವರು ಗೆದ್ದ ನಾಲ್ಕನೇ ಪ್ರಮುಖ ಪ್ರಶಸ್ತಿಯಾಗಿದ್ದು ಈ ಮೂಲಕ ಮುಂಬರುವ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆಗುವ ಭರವಸೆ ಮೂಡಿಸಿದ್ದಾರೆ.

ಮ್ಯಾಡ್ರಿಡ್ ಓಪನ್‌ನಲ್ಲಿ ರಫೆಲ್ ನಡಾಲ್ ಮತ್ತು ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ ಅಲ್ಕರಾಸ್ ಫೈನಲ್ ಪ್ರವೇಶಿಸಿದ್ದರು. ಕೋವಿಡ್ ಲಸಿಕೆ ವಿವಾದದಿಂದಾಗಿ ಕೆಲವು ಟೂರ್ನಿಗಳಲ್ಲಿ ಆಡದೇ ಇದ್ದು ಮ್ಯಾಡ್ರಿಡ್ ಓಪನ್‌ನಲ್ಲಿ ನೀರಸ ಪ್ರದರ್ಶನ ನೀಡಿದರೂ ನೊವಾಕ್ ಜೊಕೊವಿಚ್ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಾಕಿ: ದಿಶಾ ನಾಯಕಿ

ಬೆಂಗಳೂರು: ದಿಶಾ ಪೊನ್ನಮ್ಮ ಎಂ.ಯು. ಅವರು ರಾಷ್ಟ್ರೀಯ ಸಬ್‌ಜೂನಿಯರ್ ಮಹಿಳೆಯರ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಮಣಿಪುರದ ಇಂಫಾಲ್‌ನಲ್ಲಿ ಬುಧವಾರದಿಂದ ಇದೇ 22ರವರೆಗೆ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಿಗದಿಯಾಗಿದೆ.

ತಂಡ ಇಂತಿದೆ: ದಿಶಾ ಪೊನ್ನಮ್ಮ ಎಂ.ಯು. (ನಾಯಕಿ), ಅಕ್ಕಮ್ಮ ಜಿ. ಬಡಿಗೇರ್, ಬೊಳ್ಳಮ್ಮ ಪಿ.ಎಂ, ಚತುರ್ಥಿ ಡಿ.ಎ, ದೇವಿಕಾ ಎನ್, ದಿಶಾ ಎಂ, ದ್ರವ್ಯ ಎಂ. ಗೌಡ, ಹರ್ಷಿತಾ ಎಚ್.ಎಚ್. (ಗೋಲ್‌ಕೀಪರ್), ಲಿಖಿತಾ ಪಿ.ಜೆ, ಮನೀಷಾ ಪೊನ್ನಮ್ಮ ಸಿ.ಡಿ, ಮೇಘವತಿ, ನಿಧಿ ನೀಲಮ್ಮ ಪಿ.ಎಸ್, ರಕ್ಷಿತಾ ಜೆ, ರಶ್ಮಿ ಎಂ, ಶ್ರಾವ್ಯ ಪಿ.ಡಿ (ಗೋಲ್‌ಪೀರ್), ಸೌಮ್ಯ ಎಚ್.ವಿ, ಸುಪ್ರಿತಾ ಎಸ್, ಯಮುನಾ. ಕೋಚ್: ಧರ್ಮೇಂದ್ರ ಜಿ.ಆರ್. ಮ್ಯಾನೇಜರ್: ಹೇಮಲಕ್ಷ್ಮಿ ಬಿ.ಕೆ.

ಮೊಹಮ್ಮಡನ್ ಸ್ಪೋರ್ಟಿಂಗ್‌ಗೆ ಜಯ

ಬೆಂಗಳೂರು: ಸಂಘಟಿತ ಆಟವಾಡಿದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ತಂಡವು ಬಿಡಿಎಫ್ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊಹಮ್ಮಡನ್ 5–0ಯಿಂದ ಸನ್‌ರೈಸ್ ಎಫ್‌ಸಿ ತಂಡವನ್ನು ಮಣಿಸಿತು. ತಂಡದ ಪರ ಇಮ್ಯಾನ್ಯುಯಲ್ ಫರ್ನಾಂಡೊ (10ನೇ ನಿಮಿಷ), ಫ್ಯಾಬಿನೊ ಆ್ಯಂಟೊ (18ನೇ ನಿ.), ರಾಹುಲ್ (21ನೇ ನಿ.), ಸಬೀಲ್ ಅಹಮದ್ (44ನೇ ನಿ.) ಮತ್ತು ಗೌತಮ್ (70ನೇ ನಿ.) ಗೋಲು ದಾಖಲಿಸಿದರು.

ಡಿವೈಇಎಸ್ ಎಫ್‌ಸಿ, ಗೋವನ್ಸ್ ಎಫ್‌ಸಿಯೊಂದಿಗೆ ಗೋಲುರಹಿತ ಡ್ರಾ ಸಾಧಿಸಿದರೆ, ಆರ್.ಎಸ್. ಸ್ಪೋರ್ಟ್ಸ್ 3–0ರಿಂದ ಬೆಂಗಳೂರು ಮಾರ್ಸ್ ವಿರುದ್ಧ ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ತಿಲಕ್ ಮೆಮೋರಿಯಲ್ಸ್ ಎಫ್‌ಸಿ 2–0ಯಿಂದ ರಾಯಲ್ಸ್ ಎಫ್‌ಸಿ ಎದುರು ಜಯಿಸಿತು.